ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 5 ಭಾನುವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 344 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಆಟೋ ಗ್ಯಾಸ್‌ಗೆ ಮೈಸೂರಲ್ಲೂ ಪರದಾಟ



ಮೈಸೂರಿನ ಥಿಂಕ್ ಗ್ಯಾಸ್ ಎಲ್‌ಪಿಜಿ ಫಿಲ್ಲಿಂಗ್ ಸ್ಟೇಷನ್‌ನಲ್ಲಿ ಸಾಲುಗಟ್ಟಿ ನಿಂತಿರುವ ಆಟೋಗಳು.

ಮೈಸೂರು,ಏ.4(ಬಿಎಲ್‌ಯು/ಪಿಎಂ)–ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಜಾಗತಿಕ ತೈಲ ಹಾಗೂ ಅನಿಲ ಪೂರೈಕೆಯಲ್ಲಿ ಉಂಟಾಗಿರುವ ಭಾರೀ ವ್ಯತ್ಯಯದ ಬಿಸಿ ಮೈಸೂರಿಗೂ ತಟ್ಟಿದೆ. ಎಲ್ಲಾ ನಗರಗಳಂತೆ ಮೈಸೂರಿನಲ್ಲೂ ಆಟೋ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅದಾಗ್ಯೂ ಪೂರೈಕೆಯಲ್ಲಿ ಇತರೆಡೆಯಷ್ಟು ಮೈಸೂರಲ್ಲಿ ಸಮಸ್ಯೆ ಉದ್ಭವಿಸಿಲ್ಲ.

ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಪ್ರಮುಖ ನಗರಗಳಲ್ಲಿ ಆಟೋ ಎಲ್‌ಪಿಜಿ ಲಭ್ಯವಿಲ್ಲ ಎಂಬ ವೀಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗುತ್ತಿವೆ. ಈ ಬಗ್ಗೆ ಮೈಸೂರಿನ ವಾಸ್ತವ ಸ್ಥಿತಿ ಅವಲೋಕಿಸಲು ಮುಂದಾದಾಗ, ಕೆಲ ಎಲ್‌ಪಿಜಿ ಫಿಲ್ಲಿಂಗ್ ಸ್ಟೇಷನ್‌ಗಳಲ್ಲಿ ಆಟೋಗಳು ಸಾಲುಗಟ್ಟಿ ನಿಂತಿದ್ದವು. ಈ ಬಗ್ಗೆ ವಿಚಾರಿಸಿದಾಗ, ಎಲ್‌ಪಿಜಿ ಪೂರೈಕೆಯಲ್ಲಿ ವಿಳಂಬವಾಗಿದೆ. ಎಲ್‌ಪಿಜಿಗೆ ಕಾದಿದ್ದ ಆಟೋ ಚಾಲಕರು ಏಕಕಾಲಕ್ಕೆ ಬಂದಿದ್ದರಿಂದ ದಟ್ಟಣೆ ನಿರ್ಮಾಣವಾಗಿದೆ. ಆದರೆ ಬೇರೆ ಕಡೆಯಲ್ಲಿರುವಂತೆ ಆಟೋ ಎಲ್‌ಪಿಜಿಗೆ ಅಭಾವವೇನು ತೀವ್ರತರದಲ್ಲಿ ಇಲ್ಲ ಎಂದರು.

ಕೆಲವು ಸ್ಟೇಷನ್‌ಗಳು ಸಂಪೂರ್ಣ ಬಂದ್ ಆಗಿದ್ದವಲ್ಲದೆ, ▶ 6ನೇ ಪುಟಕ್ಕೆ

ಗ್ಯಾಸ್ ಟ್ರಬಲ್‌ನಿಂದ ತರಕಾರಿ ಬೆಲೆ ಇಳಿಕೆ

ಗ್ರಾಹಕರಿಗೆ ನಿರಾಳತೆ ತಂದರೂ ಆದಾಯವಿಲ್ಲದೆ ರೈತರಿಗೆ ಸಂಕಷ್ಟ

ಮೈಸೂರು,ಏ.4(ಪಿಎಂ)– ಬೇಸಿಗೆಯಲ್ಲಿ ತರಕಾರಿ ಬೆಲೆಯಲ್ಲಿ ಏರಿಕೆ ಕಂಡು ಬರುವುದು ಸಹಜ. ಆದರೆ ಮಧ್ಯಪ್ರಾಚ್ಯದ ಸಂಘರ್ಷದ ಪರಿಣಾಮ ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯದಿಂದ ಹೋಟೆಲ್‌ಗಳ ವಹಿವಾಟಿಗೆ ಹಿನ್ನಡೆ ಉಂಟಾಗಿ ಟೋಮಟೋ, ಕ್ಯಾರೆಟ್ ಸೇರಿದಂತೆ ವಿವಿಧ ತರಕಾರಿ ಬೆಲೆಯಲ್ಲಿ ಇಳಿಕೆಯಾಗಿದೆ.

ಇದು ಗ್ರಾಹಕರಿಗೆ ನಿರಾಳತೆ ತಂದಿದ್ದರೂ ರೈತರು ಆದಾಯವಿಲ್ಲದೆ, ಪರಿತಪಿಸುವಂತೆ ಮಾಡಿದೆ. ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ಕೊರತೆ ಉಂಟಾಗಿದ್ದು, ಇದರಿಂದ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳ ವಹಿವಾಟಿಗೆ ಹಿನ್ನಡೆಯಾಗಿದೆ. ಯುದ್ಧ ಪರಿಣಾಮ ಅನೇಕ ರೀತಿ ಸಮಸ್ಯೆಗಳು ಉದ್ಭವಿಸಿದ್ದು, ಇದರಿಂದ ಈಗ ತರಕಾರಿ ಕೊಳ್ಳಲು ಬಹುತೇಕ ವ್ಯಾಪಾರಸ್ಥರು ಬರುತ್ತಿಲ್ಲ. ಮತ್ತೊಂದು ಕಡೆ ಈ ಭಾಗದಲ್ಲಿ ವಾಣಿಜ್ಯ ಸಿಲಿಂಡರ್ ಪೂರೈಕೆ ಕೊರತೆಯಿಂದ ಹಲವು ಹೋಟೆಲ್‌ಗಳು, ಪಿಜಿಗಳು, ಹಾಸ್ಟೆಲ್‌ಗಳು ಬಂದ್ ಆಗಿರುವುದು ತರಕಾರಿ ಬೆಲೆ ಕುಸಿತಕ್ಕೆ ಪ್ರಮುಖ ಕಾರಣ ಎನ್ನಲಾಗುತ್ತಿದೆ.

ಮೈಸೂರಿನ ಎಂಜಿ ರಸ್ತೆ ಮಾರುಕಟ್ಟೆಗೆ ಪ್ರತಿನಿತ್ಯ ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಮೂರು ಬಾರಿಯಲ್ಲಿ ರೈತರಿಂದ ತರಕಾರಿ ಪೂರೈಕೆಯಾಗುತ್ತದೆ. ಆದರೆ ತರಕಾರಿ ವಹಿವಾಟು ಈಗ ಕಡಿಮೆಯಾಗಿದೆ ಎನ್ನಬಹುದು. ಕಾರಣವೆಂದರೆ ಕೇರಳ ಮತ್ತು ತಮಿಳುನಾಡಿನಿಂದ ವ್ಯಾಪಾರಸ್ಥರು ಬರುತ್ತಿಲ್ಲ. ಮುಖ್ಯವಾಗಿ ಮೈಸೂರಿನ ಹಲವು ಹೋಟೆಲ್‌ಗಳು ವಾಣಿಜ್ಯ ಸಿಲಿಂಡರ್ ಕೊರತೆಯಿಂದ ಬಾಗಿಲು ಮುಚ್ಚುವಂತಾಗಿದೆ. ಇದರಿಂದ ತರಕಾರಿ ಖರೀದಿಯಲ್ಲಿ ▶ 6ನೇ ಪುಟಕ್ಕೆ



ಕೆಜಿ ಟೊಮೆಟೊ 10 ರೂ. (ಹಿಂದಿನ ದರ 20 ರೂ.), ಕೆಜಿ ಕ್ಯಾರೆಟ್ 20 ರೂ. (ಹಿಂದಿನ ದರ 35ರಿಂದ 40 ರೂ.), ಕೆಜಿ ನುಗ್ಗೇಕಾಯಿ 20 ರೂ. (ಹಿಂದಿನ ದರ 100ರಿಂದ 150 ರೂ.), ಕೆಜಿ ಹೂಕೋಸು 20 ರೂ. (ಹಿಂದಿನ ದರ 30 ರೂ.), ಕೆಜಿ ಆಲೂಗಡ್ಡೆ 16 ರೂ.(ಹಿಂದಿನ ದರ 25 ರೂ.).

ಏ.7ಕ್ಕೆ ದ್ವಿತೀಯ ಪಿಯು ಫಲಿತಾಂಶ

ಬೆಂಗಳೂರು,ಏ.4(ಕೆಎಂಶಿ)–ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಏ.7ರ ಮಂಗಳವಾರದಂದು ಪ್ರಕಟಗೊಳ್ಳಲಿದೆ. ಫೆ.28ರಿಂದ ಮಾ.17ರವರೆಗೆ ನಡೆದ ಪರೀಕ್ಷೆಯಲ್ಲಿ 7,10,363 ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಬಾರಿ ಒಟ್ಟಾರೆ ಉತ್ತೀರ್ಣ ಮಾನದಂಡವನ್ನು ಶೇ.35ರಿಂದ ಶೇ.33ಕ್ಕೆ ಇಳಿಸಲಾಗಿದೆ (ಪ್ರಾಯೋಗಿಕವಲ್ಲದ ವಿಷಯಗಳಿಗೆ 80ರಲ್ಲಿ 24, ವಿಜ್ಞಾನ ವಿಷಯಗಳಿಗೆ 70ರಲ್ಲಿ 21 ಅಂಕಗಳು). ವಿಜ್ಞಾನ ವಿಭಾಗದಲ್ಲಿ 2,92, 645, ವಾಣಿಜ್ಯ ವಿಭಾಗದಲ್ಲಿ 2,11,174, ಕಲಾ ವಿಭಾಗದಲ್ಲಿ 1,42,982 ಮಂದಿ ಪರೀಕ್ಷೆ ತೆಗೆದುಕೊಂಡಿದ್ದು, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಪೂರ್ಣಗೊಳಿಸಿ ಏ.7ರಂದೇ ಫಲಿತಾಂಶ ಪ್ರಕಟಿಸಲು ಕರ್ನಾಟಕ ಪರೀಕ್ಷಾ ಮಂಡಳಿ ಸಿದ್ಧತೆ ನಡೆಸಿದೆ. ಮೊದಲ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ವಿದ್ಯಾರ್ಥಿಗಳು ಏ.25ರಿಂದ ಮೇ 8ರವರೆಗೆ ನಡೆಯಲಿರುವ ಪರೀಕ್ಷೆಗೆ (ಮರುಪರೀಕ್ಷೆ) ಹಾಜರಾಗಬಹುದು. ಮಂಡಳಿ ಈ ಬಾರಿ ಮೂರು ವಾರ್ಷಿಕ ಪರೀಕ್ಷೆಗಳ (ಪರೀಕ್ಷೆ 1, 2, ಮತ್ತು 3) ವ್ಯವಸ್ಥೆ ಪರಿಚಯಿಸಿದೆ.

ಫಲಿತಾಂಶ ಪರಿಶೀಲಿಸಲು karresults.nic.in, kseab.karnataka.gov.in ವೀಕ್ಷಿಸಬಹುದು.

ಕೊಡಗಿನ ಬೆಟ್ಟದಲ್ಲಿ ಕೇರಳದ ಯುವತಿ ಶರಣ್ಯಾಗಾಗಿ ಶೋಧ ಕಾರ್ಯ ಮುಂದುವರಿಕೆ

ಯಾವ ಸದ್ದಿಲ್ಲ! ಸುಳಿವಿಲ್ಲ



ನಾಪತ್ತೆಯಾದ ಶರಣ್ಯ

ಮಡಿಕೇರಿ,ಏ.4–ಕೊಡಗಿನ ನಾಪೋಕ್ಲು ಬಳಿಯ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ಬಂದು ನಿಗೂಢ ರೀತಿ ನಾಪತ್ತೆಯಾಗಿರುವ ಕೇರಳದ ಕೊಚ್ಚಿ ಮೂಲದ ಯುವತಿ ಶರಣ್ಯ(36) ಪತ್ತೆಗಾಗಿ 3ನೇ ದಿನವೂ ಶೋಧ ಕಾರ್ಯ ನಡೆಯಿತು. ನಾಪೋಕ್ಲು ಪೊಲೀಸ್, ಅರಣ್ಯ ಇಲಾಖೆ ಸಿಬ್ಬಂದಿ, ಈ ಪ್ರದೇಶದ ಬಗ್ಗೆ ಮಾಹಿತಿವುಳ್ಳ ಸ್ಥಳೀಯ 50ಕ್ಕೂ ಗ್ರಾಮಸ್ಥರೊಂದಿಗೆ ತಡಿಯಂಡಮೋಳ್ ಬೆಟ್ಟದಲ್ಲಿ ಶೋಧ ಕಾರ್ಯ ನಡೆಸಿದರು. ಶರಣ್ಯಾ ಸಹೋದರ ಶ್ಯಾಮ್ ಕೂಡ ಬೆಟ್ಟದ ತಪ್ಪಲಲ್ಲಿ ತನ್ನ ಸಹೋದರಿ ಸುರಕ್ಷಿತವಾಗಿ ಮರಳಿ ಬರಲೆಂದು ಪ್ರಾರ್ಥಿಸುತ್ತಿದ್ದಾರೆ. ಶರಣ್ಯರ ತಂದೆ ▶ 6ನೇ ಪುಟಕ್ಕೆ

ನಾಲ್ವರು ಚಾರಣಿಗರ ವಿಚಾರಣೆ

ಚಾರಣದ ವೇಳೆ ಶರಣ್ಯಾಳ ಜೊತೆಗಿದ್ದ ಬಾಗಲಕೋಟೆ ಮೂಲದ ನಾಲ್ವರು ಚಾರಣಿಗರನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆನ್ನಲಾಗಿದೆ. ಗುರುವಾರ ಬೆಳಿಗ್ಗೆ 8.30ರ ಸಮಯದಲ್ಲಿ ಅರಣ್ಯ ಸಿಬ್ಬಂದಿ, ಶರಣ್ಯಳೊಂದಿಗೆ ಚಾರಣಕ್ಕೆ ತೆರಳಿ ನಾಲ್ವರು ಚಾರಣಿಗರು ಸಂಜೆ ಹಿಂತಿರುಗಿ ಬಂದಾಗ ಶರಣ್ಯ ನಾಪತ್ತೆಯಾಗಿರುವ ಸಂಗತಿ ಹಿನ್ನಲೆಯಲ್ಲಿ ಪೊಲೀಸರು ವಿಚಾರಣೆ ನಡೆಸಿ ತನಿಖಾ ಕಾರ್ಯದಲ್ಲಿ ಸಹಕರಿಸಬೇಕು. ತಾವು ಕರೆದಾಗ ವಿಚಾರಣೆಗೆ ಬರುವಂತೆ ಅವರಿಂದ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ.

ಮೈಸೂರು ಹೊರ ವಲಯದ ನಾಗವಾಲ, ದೊಡ್ಡಮಾರಗೌಡನಹಳ್ಳಿ, ಕಮರವಳ್ಳಿಯ 2113 ಎಕರೆ ಪ್ರದೇಶದಲ್ಲಿ ಬೃಹತ್ ಬಡಾವಣೆ ನಿರ್ಮಾಣಕ್ಕೆ ಎಂಡಿಎ ಸಿದ್ಧತೆ

ಲಭ್ಯವಿರುವ ಭೂಮಿಯ ಡ್ರೋನ್ ಸರ್ವೆ



ಹೊಸ ಬಡಾವಣೆ ನಿರ್ಮಾಣಕ್ಕೆ ಗುರುತಿಸಲಾಗಿರುವ ನಾನಾ ಗ್ರಾಮಗಳ ವ್ಯಾಪ್ತಿಯಲ್ಲಿ ಡ್ರೋನ್ ಸರ್ವೆ ಕಾರ್ಯ ನಡೆಸುತ್ತಿರುವುದನ್ನು ಕಾಣಬಹುದು.

- ಉದ್ದೇಶಿತ ಭೂ ಪ್ರದೇಶದ ಸರ್ವೆ ವಾರದಲ್ಲಿ ಪೂರ್ಣ
- 50:50 ಅನುಪಾತದಲ್ಲಿ ಬಡಾವಣೆ ಅಭಿವೃದ್ಧಿ ನಿರ್ಧಾರ

ಮೈಸೂರು, ಏ.4(ಎಂಟಿವೈ)– ಮೈಸೂರಲ್ಲಿ ಹಲವು ವರ್ಷಗಳ ಬಳಿಕ ಬೃಹತ್ ಬಡಾವಣೆ ಅಭಿವೃದ್ಧಿ ಸಂಬಂಧ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) ಪ್ರಕ್ರಿಯೆ ಆರಂಭಿಸಿದೆ.

ಯೋಜನೆಯ ಉದ್ದೇಶಿತ ಪ್ರದೇಶದಲ್ಲಿ ಎಂಡಿಎ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸಮ್ಮುಖದಲ್ಲಿ ಶನಿವಾರ ಡ್ರೋನ್ ಸರ್ವೆ ಆರಂಭಿಸಲಾಗಿದೆ. ಈ ಪ್ರಕ್ರಿಯೆ ನಿವೇಶನಕ್ಕಾಗಿ ಅರ್ಜಿ ಹಾಕಿ ಹಲವು ದಶಕಗಳಿಂದ ಕಾದಿರುವ ಆಕಾಂಕ್ಷಿಗಳಲ್ಲಿ ವಿಶ್ವಾಸ ಮೂಡಿಸಿದೆ.

ಈಗಾಗಲೇ ಈ ಹೊಸ ಬಡಾವಣೆ ನಿರ್ಮಾಣಕ್ಕಾಗಿ ಗುರುತಿಸಲಾಗಿರುವ ದೊಡ್ಡಮಾರಗೌಡನಹಳ್ಳಿ, ಕಮರವಳ್ಳಿ, ಬೊಮ್ಮೇನಹಳ್ಳಿ ಹಾಗೂ ನಾಗವಾಲ ಗ್ರಾಮಗಳ ವ್ಯಾಪ್ತಿಯ 2113 ಎಕರೆ ಪ್ರದೇಶದಲ್ಲಿ ಡ್ರೋನ್ ಸರ್ವೆ ನಡೆಸಲಾಗುತ್ತಿದೆ. ಮೈಸೂರು ಅಭಿವೃದ್ಧಿ ಪ್ರಾಧಿಕಾರವು 50:50 ಅನುಪಾತದಲ್ಲಿ ಬಡಾವಣೆ ನಿರ್ಮಿಸಲು ಒಡಂಬಡಿಕೆಗೆ ನಿರ್ಧರಿಸಿ, ಇದಕ್ಕೆ ಭೂ ಮಾಲೀಕರ ಮನವೊಲಿಸಿದೆ. ಆದರೆ, ಸರ್ವೆ ಬಳಿಕ ಬಡಾವಣೆ ನಿರ್ಮಾಣಕ್ಕೆ ಎಷ್ಟು ಭೂಮಿ ಲಭ್ಯವಿದೆ ಎಂಬುದು ಖಾತರಿಯಾಗಲಿದೆ.

ವಾರದಲ್ಲಿ ಸರ್ವೆ ಪೂರ್ಣ: ಇಂದು ಬೆಳಗ್ಗೆ ಡ್ರೋನ್ ಸರ್ವೆ ಆರಂಭಿಸಲಾಗಿದ್ದು, ಮುಂದಿನ 7 ದಿನಗಳವರೆಗೆ ಈ ಕಾರ್ಯ ನಡೆಯಲಿದೆ. ಡ್ರೋನ್ ಬ್ಯಾಟರಿ 30 ನಿಮಿಷವಷ್ಟೇ ಬಾಳಿಕೆ ಬರಲಿದ್ದು, ಹಾಗಾಗಿ ದಿನದಲ್ಲಿ 200ರಿಂದ 300 ಎಕರೆ ಭೂಮಿಯನ್ನಷ್ಟೇ ಸರ್ವೆ ಮಾಡಲಾಗುತ್ತದೆ. ಸರ್ವೆಯರ್‌ಗಳ ಮೂಲಕವಾದರೆ 6ರಿಂದ 8 ತಿಂಗಳು ಕಾಲಾವಕಾಶ ಬೇಕಾಗುವುದರಿಂದ ತ್ವರಿತ ಸರ್ವೆಗಾಗಿ ಡ್ರೋನ್ ಬಳಸಲಾಗುತ್ತಿದೆ. 21 ಲಕ್ಷ ರೂ.ಗೆ ಇದರ ಟೆಂಡರ್ ಪಡೆದಿರುವ ಬೆಂಗಳೂರು ಮೂಲದ ಎಆರ್‌ವಿ ಎನ್ವಿರಾನ್ಮೆಂಟ್ ಕನ್ಸರ್ವೇಷನ್ ಕೇರ್ ಲಿ. ಸಂಸ್ಥೆಯು ವಾರದಲ್ಲಿ ಸರ್ವೆ ಕಾರ್ಯ ಪೂರ್ಣಗೊಳಿಸುವ ಭರವಸೆ ನೀಡಿದೆ.

ಸರ್ವೆ ಬಳಿಕ ಲೇಔಟ್ ಪ್ಲಾನ್

“ಸುಮಾರು 2 ಸಾವಿರ ಎಕರೆ ಪ್ರದೇಶವನ್ನು ಡ್ರೋನ್ ಮೂಲಕ ಸರ್ವೆ ಮಾಡಲಾಗುವುದು. ಹೊಸ ಬಡಾವಣೆ ನಿರ್ಮಾಣಕ್ಕೆ ಸದ್ಯ ಸುಮಾರು 700 ಎಕರೆಯಷ್ಟು ಭೂಮಿ ನೀಡಲು ಮಾಲೀಕರು ಒಪ್ಪಿಗೆ ಸೂಚಿಸಿದ್ದಾರೆ. ಉಳಿದ ಭೂಮಿಗೂ ಒಪ್ಪಿಗೆ ಪಡೆಯುವ ಪ್ರಯತ್ನ ಮುಂದುವರೆದಿದೆ. ಸರ್ವೆ ನಂತರ ನೀರಿನ ಎಲ್ಲಾ ರೈತರ ಒಪ್ಪಿಗೆಯೊಂದಿಗೆ ಟ್ಯಾಂಕ್, ಎಸ್‌ಪಿ ಪ್ಲಾಂಟ್, ಪಾರ್ಕ್ ಇನ್ನಿತರ ಸೌಲಭ್ಯಗಳು ಎಲ್ಲಿರಬೇಕು ಎಂಬುದನ್ನು ಗುರುತು ಮಾಡಿ, ಲೇಔಟ್ ಪ್ಲಾನ್ ಮಾಡಿ ಸರ್ಕಾರಕ್ಕೆ ಅನುಮೋದನೆಗಾಗಿ ವರದಿ ಸಲ್ಲಿಸಲಾಗುವುದು. – **ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾಧಿಕಾರಿ, ಎಂಡಿಎ ಅಧ್ಯಕ್ಷ.**

ಸರ್ಕಾರಕ್ಕೆ ವರದಿ: ಡ್ರೋನ್ ಸರ್ವೆ ಕಾರ್ಯ ಮುಗಿದ ನಂತರ ಎಂಡಿಎ ಬಡಾವಣೆ ಅಭಿವೃದ್ಧಿ ಸಂಬಂಧ ವರದಿ ಸಿದ್ಧಪಡಿಸಿ, ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ಭಾನುವಾರ 5 ಏಪ್ರಿಲ್ 2026

ಸಂಸ್ಕಾರ ಪಾಲಿಸಿ; ಸಂಸ್ಕಾರವಂತ ಮಕ್ಕಳಿಗೆ ಜನ್ಮನೀಡಿ



ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ನಡೆದ ತಿಂಗಳ ತಿಳಿವು ಕಾರ್ಯಕ್ರಮದಲ್ಲಿ ಡಾ.ಎಸ್.ಪಿ.ಯೋಗಣ್ಣ ಮಾತನಾಡಿದರು

ಮೈಸೂರು,ಏ.4–ಮಕ್ಕಳು ಗರ್ಭದಲ್ಲಿರುವಾಗಲೇ ಮೂಡಿಸುವ ಸಂಸ್ಕಾರ ಅದರ ಮುಂದಿನ ಜೀವನದ ಮೇಲೆ ಅಪಾರ ಸಕಾರಾತ್ಮಕ ಪರಿಣಾಮವುಂಟು ಮಾಡುತ್ತದೆ ಎಂದು ವೈದ್ಯ ಸಾಹಿತಿ ಮತ್ತು ಸುಯೋಗ್ ಆಸ್ಪತ್ರೆ ಅಧ್ಯಕ್ಷರಾದ ಡಾ.ಎಸ್.ಪಿ.ಯೋಗಣ್ಣ ಹೇಳಿದರು.

ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ರಾಮಕೃಷ್ಣ ವೃತ್ತದ ಪ್ರತಿಷ್ಠಾನದ ನೆಲಮಾಳಿಗೆಯಲ್ಲಿ ನಡೆದ 28ನೇ ತಿಂಗಳ ತಿಳಿವು ಕಾರ್ಯಕ್ರಮದಲ್ಲಿ ವ್ಯಕ್ತಿತ್ವ ವಿಕಸನದಲ್ಲಿ ಗರ್ಭ ಸಂಸ್ಕಾರದ ಪಾತ್ರ ಎಂಬ ವಿಷಯ ಕುರಿತು ಏರ್ಪಡಿಸಲಾಗಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಗರ್ಭಧಾರಣೆ ಅತ್ಯಂತ ವಿಸ್ಮಯಕಾರಿ ಕ್ರಿಯೆ ಎಂದು ವಿವರಿಸಿ ಗರ್ಭಾವಸ್ಥೆಯ 3ನೇ ವಾರದಲ್ಲಿಯೇ ಗರ್ಭಕೂಸಿಗೆ ಮೆದುಳು ಮತ್ತು ಮನಸ್ಸು ದೇಹದ ಹೊರಗಿನ ಸ್ಪರ್ಶ, ಭಾವ ಮತ್ತು ಮಾತುಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಬರುತ್ತದೆ. ಹಾಗಾಗಿ ತಾಯಿಯ ಆಲೋಚನೆಗಳು, ಭಾವಗಳು ಮತ್ತು ವ್ಯಕ್ತಿತ್ವ ಮಗುವಿನ ಭಾವ ಮತ್ತು ಆಲೋಚನಾ ವಿಕಾಸ ಕ್ರಿಯೆಯ ಮೇಲೆ ಪ್ರಾರಂಭದಲ್ಲಿಯೇ ಭದ್ರವಾದ ಬುನಾದಿ ಹಾಕುತ್ತವೆ. ಗರ್ಭಾವಸ್ಥೆಯಲ್ಲಿ ತಾಯಂದಿರು ಶಾಂತಚಿತ್ತರಾಗಿದ್ದು, ಒಳ್ಳೆಯ ಭಾವ ಮತ್ತು ಆಲೋಚನೆಗಳನ್ನು ಮೂಡಿಸುವ ಸಾಹಿತ್ಯವನ್ನು ಓದಿ ಮನನ ಮಾಡಿಕೊಳ್ಳುವುದರಿಂದ ಗರ್ಭಕೂಸಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತವೆ ಎಂದರು.

ಆಧುನಿಕ ಮಹಿಳೆ ಗರ್ಭ ಧರಿಸದೇ ಹಿಂಜರಿಯುತ್ತಿರುವುದು ಆತಂಕಕಾರಿ. ಸಂತಾನಲಕ್ಷ್ಮಿಯಾದ ಮಹಿಳೆ ಗರ್ಭ ಸಂಸ್ಕಾರದ ಗರ್ಭಿಣಿಯರಾಗಿ ಸಂಸ್ಕಾರವಂತ ಮಕ್ಕಳಿಗೆ ಜನ್ಮನೀಡಬೇಕೆಂದು ಕರೆಯಿತ್ತರು. ಸಮಾರಂಭದಲ್ಲಿ ಹಲವಾರು ಮಹಿಳೆಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಆಯುರ್ವೇದ ತಜ್ಞ ವೈದ್ಯೆ, ಡಾ.ಭಾವನಾ ಮಧುಸೂದನ್, ಪ್ರತಿಷ್ಠಾನದ ಕಾರ್ಯದರ್ಶಿ ಕೆಂಪಲಿಂಗರಾಜು, ಉಪಾಧ್ಯಕ್ಷ ಬಸವಣ್ಣ, ಖಜಾಂಚಿ ಪುರುಷೋತ್ತಂ, ಮಹಿಳಾ ಘಟಕದ ಅಧ್ಯಕ್ಷೆ ಅಮೃತ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಆಶಾ ತಂಡದವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಸಹಕಾರ್ಯದರ್ಶಿ ಬೋರೇಗೌಡ ನಿರೂಪಿಸಿದರು.

ವಸಂತ ವೇದ ಸಂಸ್ಕೃತ ಸಂಸ್ಕಾರ ಶಿಬಿರ



ಉಚಿತ ವಸಂತ ವೇದ ಸಂಸ್ಕೃತ ಸಂಸ್ಕಾರ ಶಿಬಿರದ ಪೋಸ್ಟರ್ ಬಿಡುಗಡೆ ಸಂದರ್ಭ.

ಮೈಸೂರು,ಏ.4–ಮೈಸೂರು ಅಗ್ರಹಾರದಲ್ಲಿರುವ ಶ್ರೀ ಅಭಿನವ ಶಂಕರ ಆಲಯ ಶಂಕರ ಮಠದ ವತಿಯಿಂದ ಶೃಂಗೇರಿ ಉಭಯ ಜಗದ್ಗುರುಗಳ ಕೃಪಾಶೀರ್ವಾದದಿಂದ ಉಪನಯನವಾದ ವಟುಗಳಿಗೆ 7 ವರ್ಷದಿಂದ 16 ವರ್ಷ ಮಕ್ಕಳಿಗಾಗಿ ಏ.23ರಿಂದ ಮೇ 2ರವರೆಗೂ ಪ್ರತಿದಿನ ಸಂಜೆ 4ರಿಂದ 7ರವರೆಗೆ ಉಚಿತ ವಸಂತ ವೇದ ಸಂಸ್ಕೃತ ಸಂಸ್ಕಾರ ಶಿಬಿರ ಜರುಗಲಿದೆ.

ಶಿಬಿರದಲ್ಲಿ ಸೂತ್ರಗಳು, ಗೀತಪಾಠ, ಭಜನೆ, ಸಂಧ್ಯಾವಂದನೆ, ಅಗ್ನಿ ಕಾರ್ಯ, ಬಸ್ಮಧಾರಣವಿಧಿ, ಭೋಜನವಿಧಿ, ಉಪಯುಕ್ತ ವೇದ ಸೂಕ್ತ ಮಂತ್ರಗಳನ್ನು ಹೇಳಿಕೊಡಲಾಗುವುದು. ಅದರ ಪೋಸ್ಟರ್ ಅನ್ನು ಶ್ರೀ ಮಠದ ಧರ್ಮಾಧಿಕಾರಿ ರಾಮಚಂದ್ರ, ಮ್ಯಾನೇಜರ್ ಶೇಷಾದ್ರಿ ಭಟ್ ಬಿಡುಗಡೆಗೊಳಿಸಿದರು. ಶಿಬಿರಕ್ಕೆ ನೋಂದಾಯಿಸುವ ಕಡೆಯ ದಿನಾಂಕ ಏ.20. ಹೆಚ್ಚಿನ ಮಾಹಿತಿಗೆ 08212448213, 944818 5448 ಸಂಪರ್ಕಿಸಬಹುದು.

48 ಗಂಟೆಗಳಲ್ಲಿ ಹೋರ್ಮುಜ್ ಜಲಸಂಧಿ ತೆರೆಯದಿದ್ದರೇ ಇರಾನ್‌ನಲ್ಲಿ ನರಕ ಸೃಷ್ಟಿಸುತ್ತೇವೆ

ಟ್ರಂಪ್ ಕೊನೆ ಎಚ್ಚರಿಕೆ!




ವಾಷಿಂಗ್ಟನ್: ಹೋರ್ಮುಜ್ ಜಲಸಂಧಿಯನ್ನು ತೆರೆಯುವ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಇರಾನ್‌ಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಮಾಧ್ಯಮ ವೇದಿಕೆ ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್‌ನಲ್ಲಿ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಇರಾನ್‌ಗೆ ನೀಡಿದ್ದ ಗಡುವು 48 ಗಂಟೆಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಅದರ ನಂತರ ಅಮೆರಿಕ ಇರಾನ್ ವಿರುದ್ಧ ಪ್ರಮುಖ ಮಿಲಿಟರಿ ಕ್ರಮಕೈಗೊಳ್ಳುತ್ತದೆ ಎಂದು ಟ್ರಂಪ್ ತಮ್ಮ ಪೋಸ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಹೋರ್ಮುಜ್ ಜಲಸಂಧಿಯನ್ನು ತೆರೆಯಲು ಅಥವಾ ಒಪ್ಪಂದ ಮಾಡಿಕೊಳ್ಳಲು ಇರಾನ್‌ಗೆ 10 ದಿನಗಳ ಅಂತಿಮ ಗಡುವು ನೀಡಿದ್ದೆ ಎಂದು ಟ್ರಂಪ್ ಹೇಳಿದ್ದಾರೆ. ಇರಾನ್‌ಗೆ ಈಗ ನಿರ್ದಿಷ್ಟ ಸಮಯದಲ್ಲಿ ಕೇವಲ 48 ಗಂಟೆಗಳು ಮಾತ್ರ ಉಳಿದಿವೆ. ಈ ಸಮಯದಲ್ಲಿ ಅದು ಅದನ್ನು ಪಾಲಿಸಬೇಕು ಮತ್ತು ಹಾರ್ಮುಜ್ ಜಲಸಂಧಿಯನ್ನು ತೆರೆಯಬೇಕು. ಇಲ್ಲದಿದ್ದರೆ ಅಮೆರಿಕ 48 ಗಂಟೆಗಳಲ್ಲಿ ಇರಾನ್‌ನಲ್ಲಿ ನರಕ ಸೃಷ್ಟಿಸುತ್ತದೆ ಎಂದು ಹೇಳಿದ್ದಾರೆ.

ಹೋರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ, ಅಮೆರಿಕ ಇರಾನಿನ ಇಂಧನ ಮೂಲಸೌಕರ್ಯ ಮತ್ತು ವಿದ್ಯುತ್ ಮೂಲಸೌಕರ್ಯದ ಮೇಲೆ ದಾಳಿ ಮಾಡುವುದನ್ನು ಪರಿಗಣಿಸುತ್ತದೆ ಎಂದು ಟ್ರಂಪ್ ಈ ಹಿಂದೆ ಎಚ್ಚರಿಕೆ ನೀಡಿದ್ದರು. ಯುದ್ಧವು ಹೆಚ್ಚು ಗಂಭೀರ ಪರಿಸ್ಥಿತಿಗೆ ತಲುಪುತ್ತಿದ್ದಂತೆ ಈ ಎಚ್ಚರಿಕೆ ಬಂದಿದೆ. ಅಮೆರಿಕ, ಇರಾನ್ ಮತ್ತು ಇಸ್ರೇಲ್‌ನ ಮಿಲಿಟರಿ ಕಾರ್ಯಾಚರಣೆ ಗಳು ಮುಂದುವರೆದಿದ್ದು, ಜಲಮಾರ್ಗದ ನಿಯಂತ್ರಣಕ್ಕಾಗಿ ಸಂಘರ್ಷ ಉಲ್ಬಣಗೊಂಡಿದೆ ಏತನ್ಮಧ್ಯೆ ಅಮೆರಿಕ ವಾಯುಪಡೆಯ ಅತ್ಯಂತ ವಿಶ್ವಾಸಾರ್ಹ ಮತ್ತು ಬಹು–ಪಾತ್ರದ ಯುದ್ಧ ವಿಮಾನಗಳಲ್ಲಿ ಒಂದೆಂದು ಪರಿಗಣಿಸಲಾದ ಅಮೆರಿಕ ಎಫ್15ಇ ಸ್ಟ್ರೈಕ್ ಈಗಲ್ ಫೈಟರ್ ಜೆಟ್ ಅನ್ನು ಹೊಡೆದುರುಳಿಸಿರುವುದಾಗಿ ಇರಾನ್ ಹೇಳಿಕೊಂಡಿದೆ.


ನಿಧನ

ಕೃಷ್ಣಾಚಾರ್ (ಮೇಷ್ಟ್ರು)



ಮೈಸೂರು: ನಗರದ ಯಾದವಗಿರಿ ನಿವಾಸಿ ಹಾಗೂ ನಿವೃತ್ತ ಮುಖ್ಯ ಶಿಕ್ಷಕರು ಕೃಷ್ಣಾಚಾರ್ (ಮೇಷ್ಟ್ರು) ಏ.2(ಗುರುವಾರ)ರಂದು ನಿಧನರಾದರು. ದಿವಂಗತ ಕಟ್ಟೆ ನಾಗರಾಜಾಚಾರ್ ಅವರ ಪುತ್ರರಾದ ಇವರಿಗೆ 83 ವರ್ಷ ವಯಸ್ಸಾಗಿತ್ತು. ಇವರು ಪತ್ನಿ ಗೀತಾಬಾಯಿ, ಪುತ್ರ ಹರೀಶ, ಪುತ್ರಿ ಉಷಾ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅಂದೇ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಜುಳ



ಮೈಸೂರಿನ ಚಾಮುಂಡಿಬೆಟ್ಟದ ನಿವಾಸಿಯಾದ ದಿವಂಗತ ನಾಗರಾಜು ಅವರ ಪತ್ನಿ ಮಂಜುಳ (65) ಅನಾರೋಗ್ಯದಿಂದ ನಿಧನರಾದರು. ದಿವಂಗತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ದಿವಂಗತರು ಚಾಮುಂಡಿಬೆಟ್ಟದಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ಭಾನುವಾರ (ಏ.5) ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಳವಂಡ ಶಾಂತಿ ಉತ್ತಪ್ಪ ನಿಧನ



ಮೈಸೂರು,ಏ.4– ಬನ್ನಿಮಂಟಪ ನಿವಾಸಿ ಮಳವಂಡ ಶಾಂತಿ ಉತ್ತಪ್ಪ (ಕೂತಂಡ ಮಾಚಿ) ಶನಿವಾರ ರಾತ್ರಿ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ ಅನೂಪ್ ಅಪ್ಪಯ್ಯ, ಪುತ್ರಿ ಕವಿತಾ ಕಾವೇರಿ, ಮೊಮ್ಮಗಳು ನಿಖಿತಾ ದೇಚಕ್ಕ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಏ.5) ಮಧ್ಯಾಹ್ನ 3 ಗಂಟೆಗೆ ಗೋಕುಲಂನ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹ್ಯಾಕಥಾನ್‌ಗಳು ವಿದ್ಯಾರ್ಥಿಗಳಿಗೆ ನವೋತ್ಸವ, ಸಮಸ್ಯೆ ಪರಿಹಾರ, ಕೌಶಲ್ಯ ಬೆಳೆಸುವ ವೇದಿಕೆ

ಜೆಎಸ್‌ಎಸ್ ವಿವಿ ಆವರಣದಲ್ಲಿ ಹ್ಯಾಕಥಾನ್‌ಗೆ ಚಾಲನೆ



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹ್ಯಾಕ್ ಒಲಂಪಿಕ್ಸ್‌ಗೆ ಫಾರ್ಗೋ ಸಂಸ್ಥೆ ಉಪಾಧ್ಯಕ್ಷೆ ಸೌಮ್ಯ ಎನ್.ಸ್ವಾಮಿ ಚಾಲನೆ ನೀಡಿದರು.

ಮೈಸೂರು, ಏ.4(ಜಿಎ)–ಹೊಸ ಪ್ರಯತ್ನಗಳಲ್ಲಿ ತಪ್ಪುಗಳು ಸಹಜ. ಅದಕ್ಕೆ ಭಯಪಡದೆ ಮುಂದೆ ಸಾಗಬೇಕು ಎಂದು ವೆಲ್ಸ್ ಫಾರ್ಗೋ ಸಂಸ್ಥೆ ಉಪಾಧ್ಯಕ್ಷೆ ಸೌಮ್ಯ ಎನ್.ಸ್ವಾಮಿ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹ್ಯಾಕ್ ಒಲಂಪಿಕ್ಸ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಹ್ಯಾಕಥಾನ್‌ಗಳು ವಿದ್ಯಾರ್ಥಿಗಳಲ್ಲಿ ನವೋತ್ಸಾಹ ಮತ್ತು ಸಮಸ್ಯೆ ಪರಿಹಾರ ಕೌಶಲ್ಯ ಬೆಳೆಸುವ ವೇದಿಕೆಯಾಗಿದೆ ಎಂದು ಹೇಳಿದರು.

ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಪ್ರತಿಭೆಗಳಿಗಾಗಿ ಆಯೋಜಿಸಲಾಗುತ್ತಿರುವ ರಾಷ್ಟ್ರೀಯ ಮಟ್ಟದ ಹ್ಯಾಕಥಾನ್‌ಗಳು ಕೇವಲ ಸ್ಪರ್ಧೆ ಅಲ್ಲ, ಅವು ನವೀನ ಆಲೋಚನೆಗಳನ್ನು ಅನ್ವೇಷಿಸಲು ಮತ್ತು ವಾಸ್ತವ ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಮಹತ್ವದ ವೇದಿಕೆಗಳಾಗಿವೆ. ಈ 24 ಗಂಟೆಗಳ ಹ್ಯಾಕಥಾನ್ ಅನ್ನು ಕೇವಲ ಸ್ಪರ್ಧೆಯಾಗಿ ನೋಡಬೇಡಿ. ಇದು ನಿಮ್ಮ ಆಲೋಚನೆಗಳನ್ನು ಪರೀಕ್ಷಿಸುವ ಮತ್ತು ಹೊಸ ದಿಕ್ಕಿನಲ್ಲಿ ಚಿಂತಿಸುವ ಅವಕಾಶವಾಗಿದೆ ಎಂದು ತಿಳಿಸಿದರು.

ಹ್ಯಾಕಥಾನ್‌ಗಳು ಶೈಕ್ಷಣಿಕ ಮತ್ತು ಉದ್ಯಮಗಳ ನಡುವೆ ಇರುವ ಅಂತರವನ್ನು ಕಡಿಮೆ ಮಾಡುತ್ತವೆ. ಉದ್ಯಮಕ್ಕೆ ಬೇಕಾಗಿರುವ ನವೀನ ಪರಿಹಾರಗಳನ್ನು ನಿಮ್ಮಂತಹ ಯುವ ಮನಸ್ಸುಗಳಿಂದಲೇ ನಿರೀಕ್ಷಿಸಲಾಗುತ್ತಿದೆ. ಇತ್ತೀಚೆಗೆ ನಡೆದ ಒಂದು ಅಂತಾರಾಷ್ಟ್ರೀಯ ಹ್ಯಾಕಥಾನ್‌ನಲ್ಲಿ ಸುಮಾರು 1700 ವಿದ್ಯಾರ್ಥಿಗಳು ಭಾಗವಹಿಸಿ ವಿಶೇಷವಾಗಿ ಸೈಬರ್ ಭದ್ರತೆ ಮತ್ತು ಬ್ಲಾಕ್‌ಚೈನ್ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ತೋರಿದ ಆವಿಷ್ಕಾರಾತ್ಮಕ ಚಿಂತನೆಗಳ ಬಗ್ಗೆ ವಿವರಿಸಿದರು.

ಹ್ಯಾಕಥಾನ್‌ಗಳು ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಲು, ಹೊಸ ಅನುಭವಗಳನ್ನು ಸಂಗ್ರಹಿಸಲು ಮತ್ತು ನಿಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳಲು ಅವಕಾಶ ನೀಡುತ್ತವೆ. ಇಂದಿನ ಹ್ಯಾಕಥಾನ್‌ಗಳಲ್ಲಿ ಕೃತಕ ಬುದ್ಧಿಮತ್ತೆ, ಸ್ಮಾರ್ಟ್ ಸಿಟಿಗಳು, ನಗರಾಭಿವೃದ್ಧಿ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಗಮನ ಹರಿಸಲಾಗುತ್ತಿದೆ. ಈ ಮೂಲಕ ಯುವ ಪ್ರತಿಭೆಗಳು ಭವಿಷ್ಯದ ಸವಾಲುಗಳಿಗೆ ತಯಾರಾಗುತ್ತಿರುವುದು ಗಮನಾರ್ಹವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಎಕ್ಸಲ್ ಸಾಫ್ಟ್‌ನ ಆದರ್ಶ್ ಸುಧೀಂದ್ರ, ವಿವಿ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಪ್ರಾಂಶುಪಾಲ ಡಾ.ಸಿ.ನಟರಾಜು, ಕುಲಪತಿ ಡಾ.ಎಸ್.ಎ.ಧನರಾಜ್ ಮತ್ತಿತರರು ಉಪಸ್ಥಿತರಿದ್ದರು.

ಕೊಡಗಹಳ್ಳಿ ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ವಿಶೇಷ ಪೂಜೆ



ಮೈಸೂರು: ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿ ಪ್ರಸಿದ್ಧ ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜೆ, ಅಲಂಕಾರ, ಅರ್ಚನೆ, ಮಹಾ ಮಂಗಳಾರತಿ ಹಾಗೂ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು. ಗ್ರಾಮದ ಹಿರಿಯರು ಹಾಗೂ ಪಟೇಲರಾದ ಯಜಮಾನ ಚಿಕ್ಕ ಜವರಪ್ಪ, ಜಯಲಕ್ಷ್ಮಿ, ಭೋಜ ರಾಜು, ರಾಮಣ್ಣ, ಮಂಜುನಾಥ್, ಗ್ರಾಮದ ಮಾಜಿ ಅಧ್ಯಕ್ಷ ಧನಂಜಯ, ಮುನಿಕುಮಾರ, ಚನ್ನಪ್ಪ, ಪ್ರಧಾನ ಅರ್ಚಕರಾದ ಶ್ರೀನಿವಾಸ ದೀಕ್ಷಿತ್, ಸುಮಾ ಶ್ರೀನಿವಾಸ್, ಶ್ರಾವ್ಯ, ಸಿರಿ, ಮಹಾವೀರ, ಶ್ರೇಯಾ, ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ನಂತರ ಕಲಾವಿದರಾದ ಬಸವಣ್ಣ, ತಾಂಡವ ಮೂರ್ತಿ, ಕೃಷ್ಣ, ಹರೀಶ್ ಅವರಿಂದ ಭಕ್ತಿಗೀತೆಗಳು ಗಾಯನ ನಡೆಯಿತು.


ಇಂದಿನಿಂದ ಬೇಸಿಗೆ ಶಿಬಿರ

ಮೈಸೂರು, ಏ. 4– ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಜಯಲಕ್ಷ್ಮೀಪುರಂ ರಾಜಯೋಗ ಶಿಕ್ಷಣ ಸೇವಾ ಕೇಂದ್ರದಲ್ಲಿ ಏ.5ರಿಂದ 7ರವರೆಗೆ ಮೂರು ದಿನಗಳ ಕಾಲ ಮಕ್ಕಳಿಗಾಗಿ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಚಾಲಕಿ ರಾಜ ಯೋಗಿನಿ ಬ್ರಹ್ಮಾಕುಮಾರಿ ಕೇಶಿಯಾಜೀ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಬಿರವು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಇರುತ್ತದೆ. ಶಿಬಿರದಲ್ಲಿ ಮಕ್ಕಳ ವ್ಯಕ್ತಿತ್ವ ವಿಕಾಸ, ಮೌಲ್ಯಗಳ ಆಟ, ಏಕಾಗ್ರತೆ ಹಾಗೂ ಸ್ಮರಣ ಶಕ್ತಿಯ ವೃದ್ಧಿಗಾಗಿ ರಾಜಯೋಗ ಶಿಕ್ಷಣ, ಸ್ಪರ್ಧೆಗಳು ಹಾಡುಗಾರಿಕೆ ನೃತ್ಯ ಮುಂತಾದ ಕಾರ್ಯ ಚಟುವಟಿಕೆಗಳನ್ನು ಮಾಡಿಸಲಾಗುವುದು. 7ರಿಂದ 15 ವಯಸ್ಸಿನ ಮಕ್ಕಳು ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ 8073247944 ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಇಂದು ಈಸ್ಟರ್ ಆಚರಣೆ

ಮೈಸೂರು,ಏ.4(ಜಿಎ)–ಯೇಸು ಕ್ರಿಸ್ತನ ಪುನರುತ್ಥಾನ ಹಬ್ಬವಾದ ಈಸ್ಟರ್ ಅನ್ನು ಏ.5ರಂದು ನಗರದ ವಿವಿಧ ಚರ್ಚ್‌ಗಳಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತದೆ ಎಂದು



ಇಂಡಿಯ ಬೈಬಲ್ ಲಿಟರೇಚರ್ ಅಪೊಸ್ಟೊ ಲೇಟ್ ಸಂಸ್ಥೆ ಸಂಸ್ಥಾಪಕ ರೆ.ಫಾ. ಬೆಂಜಮಿನ್ ವಾಸ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದು ಜಗತ್ತಿನಾದ್ಯಂತ ಕ್ರೈಸ್ತರಿಗೆ ಪವಿತ್ರ ದಿನವಾಗಿದೆ. ಶಿಲುಬೆಗೇರಿ ಸಮಾಧಿಯಾದ ಮೂರು ದಿನಗಳ ನಂತರ ಯೇಸುಕ್ರಿಸ್ತ ಜಗತ್ತಿನ ಉದ್ಧಾರಕ್ಕಾಗಿ ಪುನರುತ್ಥಾನಗೊಂಡ ದಿನ ಇದಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಬಾರ್ನಾ ಬೋಸ್ ಉಪಸ್ಥಿತರಿದ್ದರು.

ದಕ್ಷ ಕಾಲೇಜಲ್ಲಿ ಏ.6, 7ಕ್ಕೆ ದಕ್ಷ ದ್ವಿತಿ ವಾರ್ಷಿಕ ಹಬ್ಬ

ಮೈಸೂರು, ಏ. 4– ನಗರದ ಪ್ರತಿಷ್ಠಿತ ದಕ್ಷ ಕಾಲೇಜಿನಲ್ಲಿ ಏ.6 ಮತ್ತು 7ರಂದು 'ದಕ್ಷ ದ್ವಿತಿ' ವಾರ್ಷಿಕ ಹಬ್ಬವನ್ನು ಆಯೋಜಿಸಲಾಗಿದೆ.

ಎರಡು ದಿನಗಳ ಈ ಮಹೋತ್ಸವವು ವಿದ್ಯಾರ್ಥಿಗಳ ಸೃಜನಶೀಲತೆ, ಕೌಶಲ್ಯ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದೆ ಎಂದು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ. ಏ.6ರಂದು ರಾಷ್ಟ್ರೀಯ ಸೇವಾ ಯೋಜನೆ ಘಟಕದ ಉದ್ಘಾಟನೆ ನಡೆಯಲಿದೆ. ಈ ಸಂದರ್ಭ ಲಯನ್ಸ್ ಬ್ಲಡ್ ಸೆಂಟರ್ ಸಹಯೋಗದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾಲಯದ ಸ್ವಯಂ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜಕ ಡಾ.ಎಂ.ಬಿ.ಸುರೇಶ್, ಮೈಸೂರು ಪಾಲಿಕೆ ಸಹಾಯಕ ಆಯುಕ್ತೆ ಪ್ರತಿಭಾ, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಘಟಕದ ವ್ಯವಸ್ಥಾಪಕ ನಿರ್ದೇಶಕ ಗಿರೀಶ್ ಭಾಗವಹಿಸಲಿದ್ದಾರೆ.

ಅದೇ ದಿನ ವ್ಯವಹಾರ ರಸಪ್ರಶ್ನೆ, ಕುಕ್ಕಿಂಗ್ ವಿತೌಟ್ ಫೈರ್, ನಿಧಿ ಅನ್ವೇಷಣಾ, ಫೋಟೋಗ್ರಫಿ ಹಾಗೂ ವಿಡಿಯೋ ತಯಾರಿಕಾ ಸ್ಪರ್ಧೆಗಳು ನಡೆಯಲಿದ್ದು, ಯುವಜನರ ಗಮನ ಸೆಳೆಯುವ ಆಟೋ ಎಕ್ಸ್‌ಪೋ ಮೇಳವೂ ವಿಶೇಷ ಆಕರ್ಷಣೆಯಾಗಲಿದೆ. ಏ.7ರಂದು ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ವೃತ್ತಿಪರ ಕೌಶಲಾಭಿವೃದ್ಧಿ ಕಾರ್ಯಗಾರ ಆಯೋಜಿಸಲಾಗಿದೆ. ಜೊತೆಗೆ ರಾಂಪ್ ವಾಕ್, ಸಮೂಹ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮುಖ್ಯ ಅತಿಥಿಗಳಾಗಿ ಉದ್ಯೋನ್ಮುಖ ನಟ ಹಾಗೂ ಬಿಗ್ ಬಾಸ್–10 ವಿಜೇತ ಕಾರ್ತಿಕ್ ಮಹೇಶ್ ಮತ್ತು ಖ್ಯಾತ ನಿರೂಪಕಿ ಯಶಸ್ವಿನಿ ಭಾಗವಹಿಸಲಿದ್ದಾರೆ. ಮಾಹಿತಿಗಾಗಿ ವಿಂದ್ಯಾ (ಮೊ: 89718 97127) ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.4.2026 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ವಿಶಾಖ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.

■ **ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್, ಬ್ಲಡ್ ಆನ್‌ಕಾಲ್ ಕ್ಲಬ್ :** ರಕ್ತದಾನಿಗಳ ಹಬ್ಬ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಉಪಸ್ಥಿತರು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಡಿಸಿಪಿ ಕೆ.ಎಸ್. ಸುಂದರ್‌ರಾಜ್, ಶ್ರೀಮತಿ ಮೀನಾಕ್ಷಿ, ವಿ. ಭೂಪೇಂದ್ರನ್, ಭಾಸ್ಕರ್‌ರಾವ್ ಎಸ್., ವಿಶೇಷ ಅತಿಥಿಗಳು : ಲಯನ್ ಮನೋಜ್ ಕುಮಾರ್, ಎಸ್.ಇ. ಗಿರೀಶ್, ಸಿ.ಜೆ. ಮುತ್ತಣ್ಣ, ವಿಕ್ರಂ ಅಯ್ಯಂಗಾರ್, ದೇವೇಂದ್ರಕುಮಾರ್, ಆನಂದ್ ಮಂದೂತ್, ಸ್ಥಳ: ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ, ಬೆಳಗ್ಗೆ 9 ರಿಂದ.

■ **ವ್ಯವಸ್ಥಾಪಕರು :** ಬಿಗ್ ಜ್ಯುವೆಲ್ಲರಿ ಶೋ, ವಿವಿಧ ರಾಜ್ಯಗಳ ಪ್ರಮುಖ ಆಭರಣ ವಿನ್ಯಾಸಗಾರರ ವಿನೂತನ ಆಭರಣಗಳ ಸಂಗ್ರಹ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಬ್ರಾಂಡ್ ಅಂಬಾಸಿಡರ್ ನಟಿ ಅಮೃತಾ, ಸ್ಥಳ: ರ‍್ಯಾಡಿಸನ್ ಪ್ಲಾಜಾ ಹೋಟೆಲ್, ಎಂ.ಜಿ. ರಸ್ತೆ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ :** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ :** ನಾಡಿ ಪರೀಕ್ಷೆ, ಸ್ಥಳ: ಆರ್ಟ್ ಆಫ್ ಲಿವಿಂಗ್ ಮೈಸೂರು ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಪರಮಹಂಸ ಶಾರ್ಪ್ ಮೈಂಡ್ಸ್ ಅಕಾಡೆಮಿ :** ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ನಿರ್ಮಾಣದ ಬೇಸಿಗೆ ಶಿಬಿರದ ಉದ್ಘಾಟನೆ ಮತ್ತು ಹಿರಿಯ ವಿದ್ಯಾರ್ಥಿಗಳಿಂದ ಗಾಂಧಾರ ವಿದ್ಯೆ ಮತ್ತು ಯೋಗ ಪ್ರದರ್ಶನ, ಉಪಸ್ಥಿತರು : ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು, ಶ್ರೀಕಂಠಸ್ವಾಮಿ, ಶಿವಪ್ರಕಾಶ್ ಗುರೂಜಿ, ಆರ್.ಜೆ. ಅವಿನಾಶ್, ರಾಜೇಂದ್ರ ಪ್ರಸಾದ್, ಡಾ. ಆರ್. ಭಾವನಾ, ಎನ್.ಆರ್.ರೂಪಶ್ರೀ, ರವಿಕಿರಣ್, ಸ್ವಪ್ನ, ವಿದುಷಿ ಸುಜಾತ, ಸ್ಥಳ: ಪರಮಹಂಸ ಯೋಗ ಸ್ಕೂಲ್, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಸಿರಿಗನ್ನಡ ವೇದಿಕೆ :** ಸಿರಿಗನ್ನಡ ವೇದಿಕೆ, ಮೈಸೂರು ನಗರ ಘಟಕದ ಉದ್ಘಾಟನೆ ಮತ್ತು ಕವಿಗೋಷ್ಠಿ ಕಾರ್ಯಕ್ರಮ, ಉದ್ಘಾಟನೆ : ಸಿರಿಗನ್ನಡ ವೇದಿಕೆ ಜಿಲ್ಲಾಧ್ಯಕ್ಷ ಹೊಮ್ಮ ಮಂಜುನಾಥ್, ಅಧ್ಯಕ್ಷತೆ : ಉಪಾಧ್ಯಕ್ಷೆ ಡಾ. ಸೌಗಂಧಿಕಾ ವಿ. ಜೋಯಿಸ್, ಕವಿಗೋಷ್ಠಿ ಅಧ್ಯಕ್ಷತೆ : ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ. ಸಂತೋಷ್, ಮುಖ್ಯ ಅತಿಥಿಗಳು : ಹಿರಿಯ ಉಪನ್ಯಾಸಕರಾದ ಶ್ರೀಮತಿ ಅಲ್ ಹುಸ್ನ, ವೇದಿಕೆ ನಂಜನಗೂಡು ಘಟಕದ ಅಧ್ಯಕ್ಷ ಎನ್. ಚೇತನ್ ಶರ್ಮ, ಕವಿ ಆದಿಲ್ ಪಾಷ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಉಚಿತ ನೇತ್ರ ತಪಾಸಣಾ ಶಿಬಿರ, ಉದ್ಘಾಟನೆ : ಹಿರಿಯ ರಂಗಕರ್ಮಿ ಅಶ್ವತ್ಥ್ ಕದಂಬ, ಸ್ಥಳ: ಕಲಾಮಂದಿರ ಆವರಣ, ಬೆಳಗ್ಗೆ 10ಕ್ಕೆ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** 26ನೇ ವಾರ್ಷಿಕೋತ್ಸವ, ಹೊಯ್ಸಳ ಪ್ರಶಸ್ತಿ ಪ್ರದಾನ, ಜಯಪ್ರಕಾಶ್ ಪುತ್ತೂರು ವಿರಚಿತ 'ವ್ಯಕ್ತಿತ್ವ ವಿಕಸನ ವಿಚಾರಧಾರೆ' ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪುಸ್ತಕ ಸಂಗ್ರಹಕಾರ ಪದ್ಮಶ್ರೀ ಅಂಕೇಗೌಡ, ಕೃತಿ ಲೋಕಾರ್ಪಣೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಶೇಷ ಸಂಚಿಕೆ ಲೋಕಾರ್ಪಣೆ : ಮಹಾಕವಿ ಡಾ. ಲತಾ ರಾಜಶೇಖರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಡಾ. ವಿ. ಲಕ್ಷ್ಮೀನಾರಾಯಣ್, ವಿದುಷಿ ಡಾ. ಕೆ. ಲೀಲಾಪ್ರಕಾಶ್, ಪ್ರಶಸ್ತಿ ಪ್ರದಾನ : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಅಭಿನಂದನಾ ನುಡಿ : ಹಿರಿಯ ವಿದ್ವಾಂಸ ವಿ. ನಂಜುಂಡಸ್ವಾಮಿ, ವಿಜ್ಞಾನ ಲೇಖಕ ಎಸ್. ರಾಮಪ್ರಸಾದ್, ಜಯಪ್ರಕಾಶ್ ಪುತ್ತೂರು, ರಂಗನಾಥ್ ಮೈಸೂರು, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜೇ ಬೇರಿಂಗ್ ಕಾರ್ಮಿಕರ ಸಂಘ :** ಸರ್ವ ಸದಸ್ಯರ ಸಭೆ, ಸ್ಥಳ: ಮೈಸೂರು ಜಿಲ್ಲಾಧಿಕಾರಿ ಹಳೇ ಕಚೇರಿಯ ಬಲಭಾಗದ ಪೆವಿಲಿಯನ್ ಮೈದಾನ, ಬೆಳಗ್ಗೆ 11ಕ್ಕೆ.

■ **ಪುರಾಣಿ ಪ್ರಪಂಚ :** ಮಕ್ಕಳ ಬೇಸಿಗೆ ಶಿಬಿರ, ಮುಖ್ಯ ಅತಿಥಿಗಳು : ಆರ್.ಜೆ. ಅವಿನಾಶ್, ರಂಜನ್ ಶೆಟ್ಟಿ, ಸ್ಥಳ: ವಾಸವಿ ವಿದ್ಯಾನಿಕೇತನ, ಕುವೆಂಪುನಗರ, ಬೆಳಗ್ಗೆ 11ಕ್ಕೆ

■ **ಬಸವ ಸಮಿತಿ :** ಶರಣ ಸಂಗಮ–316, ಡಾ. ಶ್ರೀ ಶಿವಕುಮಾರ ಸ್ವಾಮಿಗಳವರ 119ನೇ ಜಯಂತಿ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯವರಿಂದ ಯೋಗ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ಪ್ರಿಯಾಂಕ ಗೋಟ್ಯಾಳ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎನ್.ಹೇಮಾ, ವ್ಯಾಖ್ಯಾನ–ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಅಂಧತ್ವ ತಡೆಗಟ್ಟುವಿಕೆ ಸಪ್ತಾಹದ ಸಂದರ್ಭದಲ್ಲಿ ಡಯಾಬೆಟಿಕ್ ರೇಟಿನೋಪತಿ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಉಷಾಕಿರಣ ಕಣ್ಣಿನ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ರವಿಶಂಕರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ಮಾರ್ಗದರ್ಶಿ ಶಿಕ್ಷಣಕ್ಕೊಂದು ಸೋಪಾನ ಮಾಲಿಕೆಯಲ್ಲಿ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಸಾಧಕ ಬಾಧಕ ಕುರಿತು ಮಾತುಕತೆ, ಭಾಗವಹಿಸುತ್ತಾರೆ–ಮಂಡ್ಯದ ಸರ್ಕಾರಿ ಪದವಿ ಕಾಲೇಜಿನಲ್ಲಿ ಗಣಕ ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕರಾಗಿರುವ ಡಾ.ಎಚ್.ಎಸ್. ನಾಗಲಕ್ಷ್ಮೀ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ ಬಿ., 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಇಂದಿರಾನಗರ ಸಂಗೀತ ಸಭಾ ತಂಡದಿಂದ ಸಂಗೀತ ಸುಧೆ, 12.35 ಭಕ್ತಿಗೀತೆಗಳು: ಪುಷ್ಪಾ.ವಿ.ಶಂಕರ್, 12.45 ಜನಪದ ಸಂಗೀತ : ಜಯಮ್ಮ ಮತ್ತು ಸಂಗಡಿಗರಿಂದ ಪಾರ್ವತಿ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಸ್ಟಾರ್ಟ್ ಅಪ್ ಇಂಡಿಯಾ ಯೋಜನೆ ಈ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತೆ ದಿವ್ಯ ಹೆಗಡೆ ಕಬ್ಬಿನ ಗದ್ದೆ, 1.20 ಭಾವಗೀತೆಗಳು–ಅಮೃತಾ ನಿತಿನ್ ಶಾಸ್ತ್ರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸಿಲೆಬ್ರಿಟಿಗಳೊಂದಿಗೆ ಮಾತುಕತೆ, ಭಾಗವಹಿಸಲಿರುವ ಅತಿಥಿ ಹೆಸರಾಂತ ನಟ ಎಕ್ಸ್ ಕ್ಯೂಸ್ ಮಿ ಖ್ಯಾತಿಯ ಸುನಿಲ್‌ರಾವ್, ಪ್ರಸ್ತುತಿ–ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ವಿದ್ಯುನ್ಮತಿ ಕಲ್ಯಾಣ, ಪ್ರಸ್ತುತಿ–ಹೇರಂಜೆ ನೀಲಾವರ ಲಕ್ಷ್ಮೀನಾರಾಯಣರಾವ್ ಮತ್ತು ಸಂಗಡಿಗರು, 4.45 ಚಿತ್ರಗೀತೆಗಳು, 6.51 ಕೃಷಿರಂಗ : ಹಟ್ಟಿಹರಟೆ–ವಾರದ ಗ್ರಾಮೀಣಾ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಕವಿತೆ ಎಂಬುದು ಕಾಲದ ಕನ್ನಡಿ ಈ ಕುರಿತು ಮಾತನಾಡುತ್ತಾರೆ ಡಾ.ಲಕ್ಷ್ಮಣ್ ವಿ.ಎ., 8.00 ಫಸ್ಟ್ ಫಿಲ್ಮ್, ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಬಿ.ಎಸ್.ಸ್ವಾಮಿಗೌಡ, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಿ.ಶ್ರೀಮತಿದೇವಿ –ಹಿಂದೂಸ್ಥಾನಿ ಗಾಯನ

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಹಸಿರು ಕ್ರಾಂತಿ–ಹರಿಕಾರನಿಗೆ ಮಹಾನಮನ, ಮುಖ್ಯ ಅತಿಥಿಗಳು : ಸಾಹಿತಿ ಎಲ್. ಹನುಮಂತಯ್ಯ, ನಿವೃತ್ತ ತೆರಿಗೆ ಇಲಾಖೆ ಅಧಿಕಾರಿ ಎಚ್.ಆರ್. ಭೀಮಾಶಂಕರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಅಧ್ಯಕ್ಷತೆ : ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಮಧ್ಯಾಹ್ನ 1.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಭಾರತೀಯ ನೃತ್ಯಕಲಾ ಪರಿಷತ್:** ಸಂಜೆ 6.30ಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾದ ನಾಟ್ಯಾಚಾರ್ಯ ಕೆ.ರಾಮಮೂರ್ತಿರಾವ್ ಅವರಿಗೆ ಸನ್ಮಾನ ಸಮಾರಂಭ, ಅಧ್ಯಕ್ಷತೆ : ಭಾರತೀಯ ನೃತ್ಯಕಲಾ ಪರಿಷತ್ ಅಧ್ಯಕ್ಷೆ ವಿದುಷಿ ಡಾ.ಶೀಲಾ ಶ್ರೀಧರ್, ಉದ್ಘಾಟನೆ: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಮುಖ್ಯ ಅತಿಥಿಗಳು: ನೃತ್ಯಾಲಯ ಟ್ರಸ್ಟ್ ನಿರ್ದೇಶಕರಾದ ವಿದುಷಿ ಡಾ.ತುಳಸಿ ರಾಮಚಂದ್ರ, ಡಾ.ಸಿ.ಜಿ.ಪ್ರಹ್ಲಾದರಾವ್, ಸಂಜೆ 7.30 ರಿಂದ ಕೆ.ರಮಮೂರ್ತಿರಾವ್ ಶಿಷ್ಯ ವೃಂದದವರಿಂದ ನೃತ್ಯ ನಮನ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಸಂಜೆ 6ಕ್ಕೆ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ತಂಡದ ಕಲಾವಿದರಿಂದ ಮಹೇಶ್ ಎಲಕುಂಚವಾರ್ ಅವರ ಪಾರ್ಟಿ ನಾಟಕ ಪ್ರದರ್ಶನ, ಅನುವಾದ : ಪ್ರಸಾದ್ ಕುಂದೂರು, ನಿರ್ದೇಶನ : ಚಿದಂಬರರಾವ್ ಜಂಬೆ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಶ್ರೀರಾಮ ನವಮಿ ಕಾರ್ಯಕ್ರಮಗಳು



■ **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಸಂಜೆ 6.30 ರಿಂದ ವಿದುಷಿ ಶ್ರೀಮತಿ ಅಮೃತಾನಾಯ್ದು ಮತ್ತು ವೃಂದದವರಿಂದ 'ಶ್ರೀರಾಮಾಂಜನೇಯ ಯುದ್ಧ' ಕುರಿತು ಹರಿಕಥೆ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಾಭವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಪರಾಭವ ಸಂವತ್ಸರದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಘುಲೀಲಾ ಸ್ಕೂಲ್ ಆಫ್ ಮ್ಯೂಸಿಕ್ ಅವರಿಂದ ನಗರ ಸಂಕೀರ್ತನೆ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 5 ರಿಂದ.

■ **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ಬೆಳಗ್ಗೆ 11ಕ್ಕೆ ಎಂ.ಎಸ್. ವೆಂಕಟೇಶ್ ಅವರಿಂದ ದಾಸರಪದಗಳು. ಮಧ್ಯಾಹ್ನ 12.30ಕ್ಕೆ ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ. ಚಿಗುರು ಭಜನಾ ಮಂಡಳಿಯಿಂದ ಭಜನೆ. ಸ್ಥಳ: ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ರತ್ನ ರವರು

ಇವರು ದಿನಾಂಕ 25-03-2026 ಬುಧವಾರ ದೈವಾಧೀನರಾಗಿದ್ದು, ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 05-04-2026 ಭಾನುವಾರ ಬೆಳಿಗ್ಗೆ 9-00 ಗಂಟೆಗೆ ನಮ್ಮ ಸ್ವಗೃಹ ನಂ. 228, ಕೆಸರೆ 1ನೇ ಹಂತ, ರಾಜೇಂದ್ರನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮಗ, ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಭೋಜನ ಮಧ್ಯಾಹ್ನ : 1-00 ಗಂಟೆಗೆ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ವಾಸು ಚಾಮಯ್ಯ ನವರು

ದಿನಾಂಕ 27.03.2026 ಶುಕ್ರವಾರದಂದು ದೈವಾಧೀನರಾಗಿದ್ದು ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 06.04.2026 ನೇ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಕನ್ನೇಗೌಡಕೊಪ್ಪಲು ಶ್ರೀ ಮರುಳೇಶ್ವರ ಶಾಂತಿಧಾಮ ಕಾವೇರಿ ಸ್ಕೂಲ್ ಹತ್ತಿರ, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು :ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗ, ಕೆ.ಜಿ. ಕೊಪ್ಪಲು ಮತ್ತು ಜಯನಗರ ಗ್ರಾಮಸ್ಥರು.

PROPERTY FOR SALE

1. Commercial Property for Sale in Dattagalli
2. NIE College Road
3. Residential Property for Sale in Vijaynagar 2nd & 3rd stage

Book now save 20% Hurry up

Call: 9008111454

JOB VACANCY

Curehood Life Sciences Company. Hq:- Mysore

Medical Representative post

Qualification: Any Degree

Both freshers & experienced are preferable. Contact: **Adarsh**

Mob: 7259762385

HOUSE FOR SALE

40x30 East face
GF - 2 BHK, FF - 2 BHK
TF - 1 Room
Near Christ Public School, Dattagalli.

Mob: 8970085467

ನಾನ್‌ವೆಜ್ ಹೋಟೆಲ್ ಬಾಡಿಗೆಗೆ ಲಭ್ಯವಿದೆ

ಅಟ್ಯಾಚ್ಡ್ ಬಾರ್, ಹೋಟೆಲ್‌ಗೆ ಬೇಕಾಗಿರುವ ಸಾಮಾಗ್ರಿಗಳು ಮತ್ತು ರನ್ನಿಂಗ್ ಹೋಟೆಲ್ ಆಗಿದ್ದು. ದಿನಕ್ಕೆ ಕನಿಷ್ಠ ರೂ.15,000/- ವ್ಯಾಪಾರ ನಡೆಯುತ್ತಿದೆ.

Call: 9591733391

Please Join Us For The Grand Opening

Hotel IVORY TOWERS

Celebrate the launch of our new Hotel

05th April 2026, Sunday
At 6.00pm Onwards,

#93, Kalidasa Road, V.V. Mohalla, Mysore - 570002
Mob : 90353 64538

From :
Jibu Mathews and family, Mysore

Best wishes from:
Srinath Babu
Zakariah / Zak



ONLY ONE WAY TAXI CHARGE

Hi! TAXI

MYSORE to BANGALORE
City drop or Pick up

BANGALORE to MYSORE
Airport drop or Pick up

MYSURU

9611177599



ಹಸಿರು ನಮ್ಮ ಉಸಿರು



ಪುಣ್ಯಕೋಟಿ ಗವ್ಯ & ದ್ರವ್ಯ

A2 ಹಾಲು

ಶುದ್ಧ ದೇಶೀ ಹಸುಗಳ A2 ಹಾಲು ನೇರವಾಗಿ ಮೇಲುಕೋಟೆಯ ದೇಶೀ ಸಂತಾನೋತ್ಪತ್ತಿ ಕೇಂದ್ರದಿಂದ ಲಭ್ಯ

ಪ್ರಾರಂಭಿಕ ಕೊಡುಗೆ ₹200/- ₹150/-

Contact : 9945551151
Web: www.nativespring.in
Email: punyakoti.org@gmail.com

Reputed Construction Company in Mysore

REQUIRED

JOB OPENING:
Business Development Officer
Per Month Earn 60k to 80k.

Call: 8050002072 9686128048

ಆಫೀಸ್ ಬಾಯ್ಸ್ ಬೇಕಾಗಿದ್ದಾರೆ

ಮೈಸೂರಿನ ರಾಮವಿಲಾಸ ರಸ್ತೆಯಲ್ಲಿರುವ ಪ್ರತಿಷ್ಠಿತ ಸಂಸ್ಥೆಗೆ 18 ರಿಂದ 40 ವರ್ಷ ವಯೋಮಿತಿಯ ಆಫೀಸ್ ಬಾಯ್ಸ್ ಬೇಕಾಗಿದ್ದಾರೆ.

ಸಂಪರ್ಕಿಸಿ:
9448116337

ಸಾರ್ವಜನಿಕ ಪ್ರಕಟಣೆ


ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಮಾದಯ್ಯ @ ಮಾದೇಗೌಡರವರ ಮಗ ಶ್ರೀ ಪುಟ್ಟಸ್ವಾಮಿರವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 [ಏಳು] ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ತಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದಲ್ಲಿರುವ ಖುಷ್ಕಿ ಜಮೀನಿನ ಸರ್ವೆ ನಂ. 105/8, ರಲ್ಲಿ, ಒಟ್ಟು ವಿಸ್ತೀರ್ಣ 14 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಸರ್ವೆ ನಂ. 102/1, 102/2 ಮತ್ತು 102/3 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 105/7 ರ ಜಮೀನು ; ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಸರ್ವೆ ನಂ. 105/2ಎ ರ ಜಮೀನು.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು
Mob: 9844640641. email: sldlawfirm2021@gmail.com

ಕೈಲಾಸ ಶಿವಗಣಾರಾಧನೆ



ಶ್ರೀ ಚಂದ್ರಶೇಖರ್ ಎಸ್

ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾ ನಿರ್ದೇಶಕರು ಹಾಗೂ ಮಲೆ ಮಹದೇಶ್ವರ ಪತ್ತಿನ ಸಹಕಾರ ಸಂಘದ ನಿರ್ದೇಶಕರು

ಇವರ ಶಿವಗಣಾರಾಧನೆಯನ್ನು ದಿನಾಂಕ 06-04-2026ರಂದು ನಮ್ಮ ಸ್ವಗೃಹವಾದ ಹಡಜನ ಗ್ರಾಮ, ವರುಣಾ ಹೋಬಳಿ, ಮೈಸೂರು ಜಿಲ್ಲೆಯಲ್ಲಿ ಏರ್ಪಡಿಸಲಾಗಿದ್ದು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು
ಸಹೋದರರು ಮತ್ತು ಕುಟುಂಬ ವರ್ಗ

DISTRIBUTORSHIP WANTED

We are Looking to take over or new FMCG / PHARMA / FOOD Product Distributorship for the Mysuru Market and Surrounding Districts.Well - Established Distribution Group with 30+ Years of Experience

- READY DISTRIBUTION NETWORK
- Strong Market Network
- Strong Warehouse & Distribution Centers
- Professional Service with Modern Technology

Interested Companies / Manufacturers Contact

Contact: 7760830520

ದಿ ಹೆರಿಟೇಜ್ ಕ್ಲಬ್(ರಿ.)

ನಂ.816 / 274 ಗರುಡಾಚಾರ್ ಮಾರ್ಗ, 'ಸಿ' ಬ್ಲಾಕ್, ವಿಜಯನಗರ, 3ನೇ ಹಂತ, ಮೈಸೂರು-570030 | ✆ 0821-2412377, 95912 28966
Email : heritageclubmys@gmail.com, Website : www.heritageclubmys.in

ಬೇಕಾಗಿದ್ದಾರೆ

- ಸ್ಟೀವರ್ಡ್ಸ್ / ರೂಂಬಾಯ್ಸ್ (ಪುರುಷರು ಮಾತ್ರ)

ಕನಿಷ್ಠ 10ನೇ ತರಗತಿವರೆಗಿನ ವಿದ್ಯಾಭ್ಯಾಸ ಮತ್ತು ಕ್ಲಬ್/ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಕೆಲಸಮಾಡಿರುವ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
ಆಸಕ್ತ ಅಭ್ಯರ್ಥಿಗಳು, ತಮ್ಮ ವಿವರ, ವಿದ್ಯಾರ್ಹತೆ ಪ್ರಮಾಣ ಪ್ರತಿ, ಭಾವಚಿತ್ರ ಮತ್ತು ಫೋನ್ ನಂಬರ್‌ಗಳನ್ನೊಳಗೊಂಡ ಅರ್ಜಿಯನ್ನು ಏಳು ದಿವಸಗಳೊಳಗಾಗಿ ಕ್ಲಬ್ ಕಛೇರಿಗೆ ಸಲ್ಲಿಸಬಹುದು.

ಗೌರವ ಅಧ್ಯಕ್ಷರು ಗೌರವ ಕಾರ್ಯದರ್ಶಿ

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
—ಜಾಹೀರಾತು ವ್ಯವಸ್ಥಾಪಕರು

HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road. 20x30 32 Lakhs 20x40 36 Lakhs 30x40 58 Lakhs Near St. Joseph School 20x40 - 48 Lakhs 30x50 - 89.5 Lakhs	Near KSRTC Bus Depot. 20x30 24 Lakhs 20x40 24.6 Lakhs 30x40 29 Lakhs, Contact

8123387555 / 7259348777



NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

ಮೈಸೂರು ಮಿತ್ರ — ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)
ಮರಿಯ ಫನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ತೋಮಸ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಪ್ರಸಾದ್ ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720626	**ಚಾಮರಾಜನಗರ** ಸಿದ್ದಲಿಂಗಸ್ವಾಮಿ ಸಿಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242266667	**ಟಿ. ನರಸೀಪುರ** ಕುಮಾರ್ ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ ಸೋಮಶೇಖರ್ ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426	**ಕೆ.ಆರ್. ನಗರ** ಮಂಜುನಾಥ ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345	**ಮಳವಳ್ಳಿ** ಸರಸ್ವತಿ. ವಿ ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್-571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ ಜೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311936	**ಕುಶಾಲನಗರ** ರಘು ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401	**ಚಿಂಯಪುರ** ಬಿಳಿಗಿರಿ ಜಯಪುರ 9945479288
ಪಿರಿಯಾಪಟ್ಟಣ ವಿರೇಶ್ ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ ವಿರಾಜಪೇಟೆ 9900949363	**ಯಳಂದೂರು** ವಿ.ನಾಗರಾಜು ಮೈತ್ರಿ ಮೆಡಿಕಲ್ಸ್ ಬಳೆಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮಂಜುನಾಥ ಎಸ್. ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಸತೀಶ್ ಎ.ಎಲ್ ಕೆ.ಎಂ.ದೊಡ್ಡಿ 9242120338
ಹುಣಸೂರು ರಘು ರಘು ಫೋಟೋ ವರ್ಲ್ಡ್ ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ ನಂ.4565, ಕವಿನ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್-571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868



ನಕ್ಕರೆ ಅದೇ ಸ್ವರ್ಗ

ಗುಂಡ : ನೀನು ಹುಟ್ಟಿದ ನಕ್ಷತ್ರ ಯಾವುದು?
ತಿಮ್ಮ : ನಾನು ಹುಟ್ಟಿದ್ದು ಹಗಲು ಹೊತ್ತಿನಲ್ಲಿ.
ಆಗ ನಕ್ಷತ್ರ ಇರಲಿಲ್ಲ.

ಮೈಸೂರು ಮಿತ್ರ

ಭಾನುವಾರ, ಏಪ್ರಿಲ್ 5, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಾವು ಎಲ್ಲರಿಗೂ ಅರ್ಥ ಆಗ್ಬೇಕು ಅಂತ ಏನಿಲ್ಲ. ತಕ್ಕಡಿ ಕೇವಲ ತೂಕವಷ್ಟೇ ತೋರಿಸುತ್ತೆ, ಗುಣಮಟ್ಟವನ್ನಲ್ಲ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊಟ ಬಲ್ಲವನಿಗೆ ರೋಗವಿಲ್ಲ,
ಮಾತು ಬಲ್ಲವನಿಗೆ ಜಗಳವಿಲ್ಲ

ನಿಮ್ಮ ಪತ್ರಗಳು

ಪತ್ರಕ್ಕೆ ಸ್ಪಂದಿಸಿದ ಪೊಲೀಸ್ ಆಯುಕ್ತರಿಗೆ ಕೃತಜ್ಞತೆ

ಮಾನ್ಯರೇ,

ಮೈಸೂರಿನ ಸರಸ್ವತಿಪುರಂ ನಿವಾಸಿಗಳ ಪರವಾಗಿ ನಮ್ಮ ಪ್ರದೇಶದಲ್ಲಿ ಸಾರ್ವಜನಿಕ ಭದ್ರತೆ ಕುರಿತು ಉಂಟಾಗಿರುವ ಉತ್ತಮ ಬೆಳವಣಿಗೆಯನ್ನು ನಿಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಇದಕ್ಕೂ ಮೊದಲು, ಮಾ. 10 ರಂದು ಸರಸ್ವತಿಪುರಂನ ಶ್ರೀರಾಮ ಉದ್ಯಾನವನದಲ್ಲಿ ಕೆಲವು ದುಷ್ಕರ್ಮಿಗಳು ಸಾರ್ವಜನಿಕ ಆಸ್ತಿಯ ದುರುಪಯೋಗ ಮಾಡಿಕೊಳ್ಳುತ್ತಿರುವುದು ಹಾಗೂ ಶಾಂತಿಗೆ ಭಂಗಪಡಿಸುವ ಬಗ್ಗೆ ಮೈಸೂರು ಪೊಲೀಸ್ ಆಯುಕ್ತರಿಗೆ ಸಾಮಾನ್ಯ ಅಂಚೆ ಮೂಲಕ ದೂರು ಸಲ್ಲಿಸಿದ್ದೆ.

ಈ ದೂರಿನ ಮೇರೆಗೆ ಪೊಲೀಸ್ ಇಲಾಖೆ ತಕ್ಷಣ ಕ್ರಮ ಕೈಗೊಂಡು ನಿಯಮಿತ ಪೆಟ್ರೋಲಿಂಗ್ ಪ್ರಾರಂಭಿಸಿದೆ. ಇದರ ಫಲವಾಗಿ, ಇಂತಹ ಅಸಭ್ಯ ಚಟುವಟಿಕೆಗಳು ಸಂಪೂರ್ಣವಾಗಿ ನಿಂತಿದ್ದು, ಉದ್ಯಾನವನವು ಈಗ ಶಾಂತ ಮತ್ತು ಸುರಕ್ಷಿತವಾಗಿದೆ.

ಪ್ರಸ್ತುತ, ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಯುವತಿಯರು ಯಾವುದೇ ಭಯವಿಲ್ಲದೆ ಸ್ವಚ್ಛಂದವಾಗಿ ಸಂಚರಿಸುತ್ತಿದ್ದಾರೆ. ವಿದ್ಯಾರ್ಥಿನಿಯರು ಶಾಂತ ವಾತಾವರಣದಲ್ಲಿ ಅಧ್ಯಯನ ಮಾಡುತ್ತಿದ್ದಾರೆ ಹಾಗೂ ಮಕ್ಕಳು ಮತ್ತು ಯುವತಿಯರು ಉದ್ಯಾನವನದ ಸೌಲಭ್ಯಗಳನ್ನು ಸಂತೋಷದಿಂದ ಬಳಸಿಕೊಳ್ಳುತ್ತಿದ್ದಾರೆ.

ಸಮಯೋಚಿತ ಹಾಗೂ ಪರಿಣಾಮಕಾರಿ ಕ್ರಮ ಕೈಗೊಂಡ ಮಾನ್ಯ ಪೊಲೀಸ್ ಆಯುಕ್ತರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಸಾರ್ವಜನಿಕರ ಭದ್ರತೆ ಮುಂದುವರಿಯಲು ದಿನವೂ ಕನಿಷ್ಠ ರಾತ್ರಿ 10 ಗಂಟೆಯವರೆಗೆ ಪೆಟ್ರೋಲಿಂಗ್ ಮುಂದುವರಿಸಲು ವಿನಂತಿಸುತ್ತೇವೆ.

–ಎಂ.ಹೇಮಲತಾ, ಸರಸ್ವತಿಪುರ, ಮೈಸೂರು

ಸಂವಿಧಾನ ಬದಲಾವಣೆ ಅಸಾಧ್ಯ

ಮಾನ್ಯರೆ,

ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಂಭಾಗಂಣದಲ್ಲಿ ದಾರಿ ಫೌಂಡೇಷನ್ ಸಹಯೋಗದಿಂದ ಏರ್ಪಡಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವ ರಕ್ಷಣೆಯ ಜವಾಬ್ದಾರಿ ಯುವಶಕ್ತಿಯ ಕೈಯಲ್ಲಿ' ಮುಕ್ತ ಸಂವಾದದಲ್ಲಿ ಚುನಾಯಿತ ಪ್ರತಿನಿಧಿಗಳು ಪ್ರಜೆಗಳ ಗುಲಾಮರಾಗಬೇಕೇ ಹೊರತು ಪ್ರಜೆಗಳನ್ನೇ ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಬಾರದು ಎಂದು ಮುಖ್ಯಮಂತ್ರಿ ಚಂದ್ರು ಅವರು ಮಾರ್ಮಿಕವಾಗಿ ಹೇಳಿರುವುದು ಸ್ವಾಗತಾರ್ಹ.

ಐದು ವರ್ಷಕ್ಕೆ ಆಯ್ಕೆಯಾದ ಚುನಾಯಿತ ಪ್ರತಿನಿಧಿಗಳು ಮತದಾರರಿಗೆ ಉತ್ತರದಾಯಿಗಳಾಗಿರಬೇಕು. ವಾಪಸ್ ಕರೆಸಿಕೊಳ್ಳುವ ಅಧಿಕಾರ ಇದ್ದಲ್ಲಿ ಭಯದಿಂದ ಜನರ ಕೆಲಸ ಮಾಡುತ್ತಾರೆ. ಕೆಲವರು ಸಂವಿಧಾನ ಬದಲಿಸುವ ಮಾತನಾಡುತ್ತಾರೆ. ಖಂಡಿತ ಇದು ಅಸಾಧ್ಯ. ಸಂವಿಧಾನಕ್ಕೆ ತಿದ್ದುಪಡಿ ಮಾಡಬಹುದೇ ಹೊರತು ಸಂವಿಧಾನದ ಮೂಲ ಆಶಯವನ್ನು ಬದಲಿಸಲು ಅವಕಾಶವೇ ಇಲ್ಲ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಉಚಿತ ಗ್ಯಾರಂಟಿಗಳ ಬದಲು ಎಲ್ಲರಿಗೂ ಉಚಿತ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯ ಕಲ್ಪಿಸಬೇಕು. ರೈತರಿಗೆ ಸಮರ್ಪಕವಾಗಿ ನೀರು ಹಾಗೂ ವಿದ್ಯುತ್ ಪೂರೈಸಬೇಕು. 18ನೇ ವಯಸ್ಸಿಗೆ ಮತದಾನದ ಹಕ್ಕು ಪಡೆದಿರುವ ಯುವಜನತೆ ಇದನ್ನು ಅರ್ಥಮಾಡಿಕೊಂಡು ಭ್ರಷ್ಟಮುಕ್ತ ಸರ್ಕಾರ ತರುವ ಮನಸ್ಸು ಮಾಡಬೇಕು ಎಂದು ಹೇಳಿರುವುದು ಮನ ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಪ್ರಧಾನ ಅಂಚೆ ಕಛೇರಿಯಲ್ಲಿ ಉಳಿತಾಯ ಕೌಂಟರ್ ಹೆಚ್ಚಿಸಲಿ

ಮಾನ್ಯರೇ

ಮೈಸೂರು ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಎರಡು ಉಳಿತಾಯ ಬ್ಯಾಂಕ್ ಕೌಂಟರ್ ಇದೆ. ಉಳಿತಾಯ ಕೌಂಟರ್‌ಗೆ ಬರುವ ಗ್ರಾಹಕರ ಸಂಖ್ಯೆ ಹೆಚ್ಚಿದ್ದು ಮತ್ತು ಆಮೆಗತಿಯಲ್ಲಿ ಕೆಲಸ ಮಾಡುವ ನೌಕರರಿಂದ ಗ್ರಾಹಕರು ತುಂಬಾ ಹೊತ್ತು ಕಾಯುತ್ತಾ ವಯಸ್ಸಾದವರು ನಿಲ್ಲಬೇಕಾಗಿದೆ. ಆದುದರಿಂದ ಅಂಚೆ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಉಳಿತಾಯದ ಬ್ಯಾಂಕ್ ಕೌಂಟರ್ ಸಂಖ್ಯೆಯನ್ನು ಹೆಚ್ಚಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಪೋಷಕರು ಮಕ್ಕಳ ಸುರಕ್ಷತೆ ಬಗ್ಗೆ ನಿಗಾ ವಹಿಸುವುದು ಅಗತ್ಯ

ಮಾನ್ಯರೆ,

ಶಾಲೆಗಳಿಗೆ ಬೇಸಿಗೆ ರಜೆ ಆರಂಭವಾಗಿರುವ ಈ ಸಂದರ್ಭದಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರು ಹೆಚ್ಚಿನ ನಿಗಾ ವಹಿಸುವುದು ಅತ್ಯಗತ್ಯವಾಗಿದೆ. ಮಕ್ಕಳು ಬಿಸಿಲಿನ ಬೇಗೆಯಿಂದ ಪಾರಾಗಲು ಕೆರೆ, ಕಾಲುವೆ ಅಥವಾ ಬಾವಿಗಳಿಗೆ ಈಜಲು ಹೋಗುವುದು ಸಹಜವಾದರೂ, ನೀರಿನ ಆಳ, ಹರಿವು ಮತ್ತು ಸುಳಿಗಳ ಬಗ್ಗೆ ಅರಿವಿಲ್ಲದೆ ಅನಾಹುತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮಕ್ಕಳು ಎಲ್ಲಿಗೆ ಹೋಗುತ್ತಿದ್ದಾರೆ ಎಂಬ ಬಗ್ಗೆ ಪೋಷಕರು ಸದಾ ಎಚ್ಚರದಿಂದಿರಬೇಕು ಮತ್ತು ಅವರು ಈಜಲು ಹೋದಾಗ ಮನೆಯ ಹಿರಿಯರು ಜೊತೆಗಿರಬೇಕು.

ಕೇವಲ ಹೊರಗಿನ ಜಲಮೂಲಗಳಷ್ಟೇ ಅಲ್ಲದೆ, ಮನೆಯ ಒಳಗೂ ಪುಟ್ಟ ಮಕ್ಕಳು ಸಣ್ಣ ವಸ್ತುಗಳನ್ನು (ನಾಣ್ಯ, ಹೂವು, ಗುಂಡಿ, ಸಣ್ಣ ಆಟಿಕೆ) ನುಂಗದಂತೆ ಜಾಗ್ರತೆ ವಹಿಸಬೇಕು. ಏಕೆಂದರೆ ಇತ್ತೀಚಿನ ಅನಾಹುತಗಳು ಪೋಷಕರ ಒಂದು ಕ್ಷಣದ ನಿರ್ಲಕ್ಷ್ಯ ಎಷ್ಟು ಭೀಕರವಾಗಬಹುದು ಎಂಬುದಕ್ಕೆ ಸಾಕ್ಷಿಯಾಗಿವೆ. ಮಧ್ಯಾಹ್ನದ ಉರಿ ಬಿಸಿಲಿನಲ್ಲಿ ಮಕ್ಕಳನ್ನು ಹೊರಗೆ ಕಳುಹಿಸದೆ, ದೇಹದಲ್ಲಿ ನೀರಿನ ಅಂಶ ಕಡಿಮೆಯಾಗದಂತೆ ಕಾಳಜಿ ವಹಿಸಬೇಕು. ಮಕ್ಕಳ ಸುರಕ್ಷತೆಯ ವಿಷಯದಲ್ಲಿ 'ನೋಡೋಣ ಬಿಡು' ಎಂಬ ಅಸಡ್ಡೆ ಬೇಡ. ಮಕ್ಕಳ ಚಟುವಟಿಕೆಗಳ ಮೇಲೆ ಯಾವಾಗಲೂ ಒಂದು ಕಣ್ಣಿರಲಿ. ನೆನಪಿಡಿ, ಪೋಷಕರ ಜಾಗರೂಕತೆಯೇ ಮಕ್ಕಳಿಗೆ ನಿಜವಾದ ರಕ್ಷಾಕವಚ. ಈ ರಜೆಯ ಸಂಭ್ರಮವು ಕೇವಲ ಸಿಹಿಯಾದ ನೆನಪಿನ ಬುತ್ತಿಯಾಗಲಿ ಹೊರತು ಎಂದಿಗೂ ನೋವಿನ ಅಧ್ಯಾಯವಾಗದಿರಲಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಜೈ ಶ್ರೀರಾಮ್.....

ಭಾರತೀಯರ ಹೃದಯದಲ್ಲಿ ಶ್ರೀ ರಾಮನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರ ಪಾಲಿಗೆ ಆ ಮರ್ಯಾದಾ ಪುರುಷೋತ್ತಮನ ಪ್ರತಿಯೊಂದು ನಡೆಯೂ, ಪ್ರತಿಯೊಂದು ಮೌಲ್ಯವೂ ಅನುಸರಣೀಯ. ಶ್ರೀರಾಮನ ಸ್ಮರಣೆ ಸದಾ ಸ್ಫೂರ್ತಿದಾಯಕ, ಅವನ ಕಥೆ ಅವರ ಪಾಲಿಗೆ ನಿತ್ಯನೂತನ. ಅದೆಷ್ಟು ಜನ ಭಕ್ತರು ಅವನ ಧ್ಯಾನದಲ್ಲಿ, ಸಂಕೀರ್ತನೆಯಲ್ಲಿ ತಲ್ಲೀನರಾಗಿ ತಮ್ಮ ಬದುಕನ್ನೇ ಅವನ ಸಾಕ್ಷಾತ್ಕಾರಕ್ಕಾಗಿ ಅರ್ಪಣೆ ಮಾಡಿರುವರು! ಪ್ರಾಮಾಣಿಕತೆ, ಭ್ರಾತೃ ಪ್ರೇಮ, ಕರ್ತವ್ಯ ನಿಷ್ಠೆ, ವಚನ ಪರಿಪಾಲನೆ ನ್ಯಾಯ ನೀತಿ ಇದೆಲ್ಲದರ ಸಂಗಮ ಅವನ ಕಥಾಸಾರವಾದ ರಾಮಾಯಣ. ಅದರ ಪಾರಾಯಣ ಕೆಲವರಿಗೆ ಅತ್ಯಂತ ಪವಿತ್ರ ಕಾರ್ಯ.

ಪ್ರತೀ ವರುಷ ಶ್ರೀರಾಮ ನವಮಿಯ ದಿನದಿಂದ ಆರಂಭಗೊಂಡು ಹತ್ತು ದಿನಗಳ ಕಾಲ ಭಕ್ತರು ಸಂಗೀತದ ಮೂಲಕ, ನಾದದ ಮೂಲಕ ಅವನಿಗೆ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಅವನ ಪುಣ್ಯ ಸ್ಮರಣೆಯಿಂದ ತಮ್ಮ ಬದುಕನ್ನು ಪಾವನಗೊಳಿಸಿಕೊಂಡ ಸಂತ ತ್ಯಾಗರಾಜರ, ರಾಮದಾಸರ, ಪುರಂದರ ದಾಸರ. ಸಂಗೀತ ತ್ರಿಮೂರ್ತಿಗಳ ರಚನೆಗಳ ನಾದಾಭಿಷೇಕ ಅವನಿಗೆ. ಅವನ ಪಟ್ಟಾಭಿಷೇಕದೊಂದಿಗೆ ರಾಮನವಮಿಯ ಸಂಗೀತೋತ್ಸವ ಮುಕ್ತಾಯವಾಗುತ್ತದೆ.

ಸೃಷ್ಟಿ, ಸ್ಥಿತಿ, ಲಯಕರ್ತರಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಯುಗ ಯುಗಗಳಿಂದ ಭೂಲೋಕದಲ್ಲಿ ಅಧರ್ಮ ಹೆಚ್ಚಿದಾಗಲೆಲ್ಲ, ರಾಕ್ಷಸರ ಹಾವಳಿ ಮಿತಿ ಮೀರಿದಾಗಲೆಲ್ಲ ಮನುಷ್ಯರಾಗಿ ಅಥವಾ ಮತ್ಯಾವುದೋ ರೂಪದಲ್ಲಿಯೋ ಅವತರಿಸಿ ದುಷ್ಟ ಶಕ್ತಿಗಳನ್ನು ನಿವಾರಿಸಿ, ಶಾಂತಿಯನ್ನು ಪುನರ್ ಸ್ಥಾಪಿಸುವ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ ಎಂಬುದನ್ನು ಹಿಂದೂ ಪುರಾಣಗಳು ಸಾರಿ ಹೇಳುತ್ತವೆ. ವಿಷ್ಣುವು ಹಾಗೆ ಅನೇಕ ಬಾರಿ ಭೂಲೋಕಕ್ಕೆ ಬಂದಿರುವುದು ಉಂಟು. ಭೂಲೋಕವನ್ನು ಆವರಿಸಿಕೊಂಡಿದ್ದ ಹಲವಾರು ರಾಕ್ಷಸರನ್ನು ಸಂಹಾರ ಮಾಡಿದ ಶ್ರೀ ರಾಮಚಂದ್ರನೂ ಸಹ ವಿಷ್ಣುವಿನ ಒಂದು ಅವತಾರವಷ್ಟೇ. ರಾಕ್ಷಸರ ವಿರುದ್ಧದ ಹೋರಾಟಕ್ಕೆ ರಾಮನಿಗೆ ತನ್ನ ತಮ್ಮ ಲಕ್ಷ್ಮಣನ, ಹಲವು ಋಷಿಗಳ, ಪ್ರಾಣಿಗಳ, ಹಕ್ಕಿಗಳ ಸಹಕಾರವೂ ದೊರೆಯುತ್ತದೆ. ರಾಕ್ಷಸರಲ್ಲಿಯೇ ಅತ್ಯಂತ ಶಕ್ತಿವಂತನಾಗಿದ್ದ ರಾವಣನ ಸಂಹಾರದ ಮೂಲಕ ಶ್ರೀ ರಾಮನು ಭೂಮಿಯನ್ನು ರಾಕ್ಷಸರ ಪೀಡೆಯಿಂದ ಮುಕ್ತಗೊಳಿಸಿ, ಭೂಮಿಯ ಮೇಲೆ ಮತ್ತೆ ಶಾಂತಿ ಮತ್ತು ನ್ಯಾಯ ನೆಲಸುವಂತೆ ಮಾಡಿದ.

ಭಾರತದ ದಕ್ಷಿಣ ದಿಕ್ಕಿನ ತುದಿಯಲ್ಲಿ, ಹಿಂದೂ ಮಹಾಸಾಗರದ ದೊಡ್ಡ ದೊಡ್ಡ ಅಲೆಗಳಿಂದ ಸುಶೋಭಿತವಾದ ಚಿಕ್ಕ ದ್ವೀಪವೇ ಲಂಕಾ. ಹಸಿರು ವನಗಳು, ನೀಲಾಕಾಶ, ಹೊಂಬಣ್ಣದ ಸಮುದ್ರ ತೀರದಿಂದ ಕಂಗೊಳಿಸುತ್ತಿದ್ದ ದೇಶ. ಆದರೆ ಅದನ್ನು ಆಳುತ್ತಿದ್ದವನು ಹತ್ತು ತಲೆಗಳ, ದುರಾಸೆಯ ರಾವಣಾಸುರ. ತನಗೆ ಬೇಕಾದಾಗ ಇಪ್ಪತ್ತು ಕೈಗಳನ್ನು ಹೊರಚಾಚಬಲ್ಲ ಶಕ್ತಿ ಅವನಿಗಿತ್ತು. ಜಗತ್ತಿನ ಸೃಷ್ಟಿಕರ್ತನಾದ ಬ್ರಹ್ಮನ ಮೊಮ್ಮಗ ಅವನು. ತನ್ನ ಅಪಾರ ಶಕ್ತಿಯಿಂದ ಸಂತೃಪ್ತಿಗೊಳ್ಳದ ಅವನು ಬ್ರಹ್ಮನನ್ನು ಪ್ರಾರ್ಥಿಸಿದ ನನ್ನನ್ನು ಅಮರನನ್ನಾಗಿಸು. ದೇವತೆಗಳಿಂದ, ರಾಕ್ಷಸರಿಂದ ಪ್ರಾಣಿಗಳಿಂದ ಅಥವಾ ಸಸ್ಯಗಳಿಂದ ನನಗೆ ಸಾವು ಬಾರದಿರಲಿ. ಅವನ ಪ್ರಾರ್ಥನೆಯನ್ನು ಕೇಳಿ ಹುಬ್ಬೇರಿಸಿದ ಬ್ರಹ್ಮ ಅವನ ಕೋರಿಕೆಯನ್ನು ಈಡೇರಿಸಿದ. ಭೂಮಿಯ ಮೇಲೆ ವಾಸ ಮಾಡುವುದು ಸಾಮಾನ್ಯರಿಗೆ ಅತ್ಯಂತ ಕಠಿಣವಾಗ ತೊಡಗಿತು. ರಾವಣ ಮತ್ತು ಇತರ ರಾಕ್ಷಸರು ಒಂದಾದ ನಂತರ ಒಂದರಂತೆ ದುಷ್ಕೃತ್ಯದಲ್ಲಿ ತೊಡಗಿದರು. ಭೂಮಿಯ ಮೇಲೆ ಮನುಷ್ಯರ ಆಕ್ರಂದನ ಎಲ್ಲೆಡೆಯಿಂದ ಕೇಳತೊಡಗಿತು. ಇನ್ನು ಇದಕ್ಕೆ ತಕ್ಕ ಶಾಸ್ತಿ ಮಾಡಲೇಬೇಕೆಂದು ಅಂದುಕೊಂಡ ಬ್ರಹ್ಮನು ವಿಷ್ಣುವಿನ ಬಳಿ ಹೋಗಿ, ತಾನು ರಾವಣನಿಗೆ ಕೊಟ್ಟ ವರವನ್ನು ತಿಳಿಸಿ, ಈಗ ರಾವಣನ ಅಟ್ಟಹಾಸವನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂಬುದನ್ನು ಹೇಳಿದ. ಅವನು ಮನುಷ್ಯರಿಂದ ತನಗೆ ಏನೂ



> “ ಗಾಳಿಯಲ್ಲಿ ಜೋರಾದ ಗುಡುಗಿನ ಶಬ್ದ. ಬಿರುಗಾಳಿಯಲ್ಲ ಅದು, ಮಾರೀಚ ಮತ್ತು ಸುಬಾಹು, ಇಬ್ಬರು ರಾಕ್ಷಸರು. ಮಾನವರಿಗೆ ಎಲ್ಲ ರೀತಿಯ ಕಿರುಕುಳ ನೀಡುತ್ತಿದ್ದ ಜೋಡಿ ರಕ್ಕಸರು. ಯಾಗ, ಯಜ್ಞ ನಡೆಯುತ್ತಿದ್ದಾಗ ಹೋಮಕುಂಡದೊಳಗೆ ಸತ್ತ ಪ್ರಾಣಿಗಳ ಅವಶೇಷವನ್ನು ಸುರಿಯುವುದು ಅವರ ನೆಚ್ಚಿನಾಟ. ಅವರನ್ನು ಕೊಲ್ಲಲು ಮುಂದಾದ ಲಕ್ಷ್ಮಣನನ್ನು ತಡೆದ ರಾಮನು ಅವರ ಅಪರಾಧಕ್ಕೆ ತಕ್ಕ ಶಿಕ್ಷೆ ಕಲಿಸಬೇಕೆಂದು ತನ್ನೊಳಗಿನ ದಿವ್ಯ ಬಾಣವನ್ನು ಅವರಿಗೆ ಬಿಟ್ಟ. ಅದರ ಶಕ್ತಿಯ ಪ್ರಭಾವ ಎಷ್ಟಿತ್ತೆಂದರೆ, ಅವರಿಬ್ಬರನ್ನೂ ಅದು ಗಾಳಿಯಲ್ಲಿ ಹಾರಿಸಿಕೊಂಡು ಹೋಗಿ ಪರ್ವತಗಳ ಮೇಲೆ ಹಾಯ್ದು, ಸಮುದ್ರದೊಳಗಡೆಗೆ ಬಿಸಾಕಿತು.

ಅಪಾಯ ಒದಗುವುದಿಲ್ಲ ಎಂಬ ಅಹಂಕಾರವನ್ನು ಪ್ರದರ್ಶಿಸಿದ್ದಾನೆ. ಆದ್ದರಿಂದ ನೀನು ಮಾನವರೂಪದಲ್ಲಿ ಹೋಗಿ ಅವನನ್ನು ಸಂಹರಿಸು ಎಂದು ಕೇಳಿಕೊಂಡ. ಈಗಾಗಲೇ ಹಲವು ಬಾರಿ ಭೂಮಿಯ ಮೇಲೆ ಜನ್ಮ ತಾಳಿದ್ದ ವಿಷ್ಣುವು ಅದನ್ನು ಒಪ್ಪಿಕೊಂಡ. ಅವನ ಜೊತೆ ಹೆಂಡತಿ ಲಕ್ಷ್ಮಿಯೂ ಬಂದೇ ಬರುತ್ತಿದ್ದಳಲ್ಲ! ಅವನು ಎಲ್ಲೇ ಅವತರಿಸಲಿ, ಅವಳೂ ಭೂಮಿಯಲ್ಲಿ ಹುಟ್ಟಿ, ಕೊನೆಗೆ ಮಹಾವಿಷ್ಣುವನ್ನೇ ವರಿಸುತ್ತಿದ್ದಳು.

ಅಯೋಧ್ಯೆಯ ರಾಜ ದಶರಥ ಮಕ್ಕಳಿಲ್ಲದ ಕೊರಗಿನಿಂದ ಕೂಡಿದ್ದ. ಕುಲಗುರುಗಳ ಸಲಹೆಯಂತೆ ಪುತ್ರಕಾಮೇಷ್ಠಿ ಯಾಗವನ್ನು ಮಾಡಿ, ನಾಕು ಮಂದಿ ಮಕ್ಕಳನ್ನು ಪಡೆದ. ಅವನ ಹಿರಿಯ ಪುತ್ರನೇ ರಾಮಚಂದ್ರ. ವಿಷ್ಣುವು ರಾಮನಾದರೆ, ಲಕ್ಷ್ಮಣನು ವಿಷ್ಣುವಿನ ಅತ್ಯಂತ ನಿಷ್ಠೆಯ ಸರ್ಪವಾದ ಆದಿಶೇಷನ ಅವತಾರ. ವಿಷ್ಣುವಿನ ಶಂಖವು ಭರತನಾದರೆ, ಅವನ ಗದೆಯೇ ಶತ್ರುಘ್ನ. ಮಕ್ಕಳೇ ಇಲ್ಲದಿದ್ದ ಅರಮನೆ ಈಗ ನಾಕು ಮಕ್ಕಳ ಕಲರವದಿಂದ ಕೂಡಿತು. ವಸಿಷ್ಠರ ಶಿಷ್ಯತ್ವದಲ್ಲಿ ಎಲ್ಲ ವಿದ್ಯೆಯನ್ನು ಕಲಿತು, ಯಾವುದೇ ಸವಾಲನ್ನು ಎದುರಿಸಲು ಸನ್ನದ್ಧರಾದ ಅತ್ಯುತ್ತಮ ರಾಜಕುವರರಾಗಿ ಬೆಳೆದರು. ಅವರ ಸಾಮರ್ಥ್ಯದ ಪರೀಕ್ಷೆ ಶೀಘ್ರದಲ್ಲೇ ನಡೆಯಲಿತ್ತು. ಒಂದುದಿನ ಅರಮನೆಯ ಬಾಗಿಲನ್ನು ಬಡಿದ ವಿಶ್ವಾಮಿತ್ರ ಋಷಿಗಳು ಸಹಾಯವನ್ನು ಯಾಚಿಸುತ್ತಿದ್ದರು. ರಾಕ್ಷಸರ ಉಪಟಳವು ಅರಣ್ಯದಲ್ಲಿ ಮಿತಿಮೀರಿರುವುದರಿಂದ ರಾಮನನ್ನು ಕಳುಹಿಸಿ, ಅವರನ್ನು ನಿವಾರಿಸು ಎಂಬುದು ಅವರ ಪ್ರಾರ್ಥನೆಯಾಗಿತ್ತು. ರಾಮನನ್ನು ಕಳುಹಿಸಲು ದಶರಥ ಅಳುಕಿದರೂ ರಾಮನು ಶಾಂತವಾಗಿ ಸವಾಲನ್ನು ಎದುರಿಸಲು ಸಿದ್ಧನಾದ. ಲಕ್ಷ್ಮಣನೊಂದಿಗೆ ವಿಶ್ವಾಮಿತ್ರರನ್ನು ಹಿಂಬಾಲಿಸಿದ. ದಟ್ಟ ಕಾಡಿನಲ್ಲಿ ಕರಾಳ ಮೌನ ವ್ಯಾಪಿಸಿತ್ತು. ಯಾವ ಜೀವಿಗಳ ಸುಳಿವೂ ಕಾಣಲಿಲ್ಲ. ಋಷಿಗಳೇ ಹೀಗೇಕೆ ಎಂದು ಕೇಳಿದಾಗ ನೀನೀಗ ತಾಟಕಾಸುರಿಯ ನೆಲದ ಮೇಲಿದ್ದೀಯೆ. ಕಾಡಿನ ಎಲ್ಲ ಜೀವಿಗಳನ್ನೂ ಅವಳು ಹರಿದು ತಿಂದಿದ್ದಾಳೆ. ಇಲ್ಲಿಯ ನದಿ, ತೊರೆಗಳು ಬತ್ತಿಹೋಗಿವೆ. ಈಗ ಇಲ್ಲಿಯ ದಾರಿಹೋಕರನ್ನು ತಿನ್ನುತ್ತಿದ್ದಾಳೆ. ಹುಷಾರು, ಅವಳು ಬರುತ್ತಿದ್ದಾಳೆ ಎಂದು ಮೆಲು ಧ್ವನಿಯಲ್ಲಿ ಹೇಳಿದರು. ರಾಮ ಲಕ್ಷ್ಮಣರು ತಿರುಗಿ ನೋಡುವುದರಲ್ಲಿ ತಮ್ಮತ್ತಲೇ ಚಾಚುತ್ತಿದ್ದ ವಿಕಾರ ಬೆರಳುಗಳ ರಾಕ್ಷಸಿ ಕಂಡಳು. ದೊಡ್ಡ ಮೂಗು ಗಾಳಿಯಲ್ಲಿ ಆಹಾರಕ್ಕಾಗಿ ವಾಸನೆ ನೋಡುವಂತಿತ್ತು. ಮಿಂಚಿನಂತೆ ರಾಮನು ಅವಳ ಎದೆಗೆ ಸರಿಯಾಗಿ ಗುರಿಯಿಟ್ಟು ಬಾಣವನ್ನು ಹೊಡೆದ. ವಿಕಾರವಾಗಿ ಚೀರುತ್ತಾ ಧೊಪ್ಪನೆ ಅವಳು ನೆಲದ ಮೇಲೆ ಬಿದ್ದಳು. ಒಣಗಿದ ಕಾಡಿನಿಂದ ನೆಮ್ಮದಿಯ ನಿಟ್ಟುಸಿರೊಂದು ಹೊರಬಿತ್ತು. ದೂರದಲ್ಲಿ ಒಂದು ಹಕ್ಕಿಯ ಕೂಗು ಕೇಳಿಸಿತು.

ಒಳ್ಳೆಯದನ್ನು ಮಾಡಿದೆ ಸಂತೃಪ್ತಿಯಿಂದ ನುಡಿದರು ಋಷಿಗಳು. ಆದರೆ ಇನ್ನೂ ಹಲವು ರಕ್ಕಸರಿದ್ದಾರೆ. ಅವರ ಮೋಸ, ವಂಚನೆಗೆ ತಕ್ಕಂತಹ ದಿವ್ಯಾಸ್ತ್ರಗಳೇ ಬೇಕು? ನದಿಯ ಪ್ರಶಾಂತ ತಟದಲ್ಲಿ ಕುಳಿತು ಮುನಿಗಳು ಒಂದೊಂದೇ ಮಂತ್ರಗಳನ್ನು ಪಠಿಸುತ್ತಿದ್ದಂತೆಯೇ ಒಂದೊಂದೇ ದಿವ್ಯಾಸ್ತ್ರಗಳು ಕಾಣಿಸಿಕೊಳ್ಳಲು ಆರಂಭಿಸಿದವು. ಹೊಳೆವ ಕತ್ತಿ, ಗಟ್ಟಿಯಾದ ಗುರಾಣಿ, ಮಿನುಗು ತ್ತಿದ್ದ ಬಾಣ ಮತ್ತು ಈಟಿಗಳು ಎಲ್ಲವೂ ಅಚ್ಚರಿಯಿಂದ ನೋಡುತ್ತಿದ್ದ ರಾಮನ ದೇಹದೊಳಗೆ ಬಂದು ಸೇರಿಕೊಂಡವು. ಈಗ ಅವನು ದಿವ್ಯ ಶಕ್ತಿಯಿಂದ ಕಂಗೊಳಿಸುತ್ತಿದ್ದ. ಇದ್ದಕ್ಕಿದ್ದಂತೆ ಆಕಾಶದಲ್ಲಿ ಕತ್ತಲು ಕವಿಯಿತು. ಗಾಳಿಯಲ್ಲಿ ಜೋರಾದ ಗುಡುಗಿನ ಶಬ್ದ. ಬಿರುಗಾಳಿಯಲ್ಲ ಅದು, ಮಾರೀಚ ಮತ್ತು ಸುಬಾಹು, ಇಬ್ಬರು ರಾಕ್ಷಸರು. ಮಾನವರಿಗೆ ಎಲ್ಲ ರೀತಿಯ ಕಿರುಕುಳ ನೀಡುತ್ತಿದ್ದ ಜೋಡಿ ರಕ್ಕಸರು. ಯಾಗ, ಯಜ್ಞ ನಡೆಯುತ್ತಿದ್ದಾಗ ಹೋಮಕುಂಡದೊಳಗೆ ಸತ್ತ ಪ್ರಾಣಿಗಳ ಅವಶೇಷವನ್ನು ಸುರಿಯುವುದು ಅವರ ನೆಚ್ಚಿನಾಟ. ಅವರನ್ನು ಕೊಲ್ಲಲು ಮುಂದಾದ ಲಕ್ಷ್ಮಣನನ್ನು ತಡೆದ ರಾಮನು ಅವರ ಅಪರಾಧಕ್ಕೆ ತಕ್ಕ ಶಿಕ್ಷೆ ಕಲಿಸಬೇಕೆಂದು ತನ್ನೊಳಗಿನ ದಿವ್ಯ ಬಾಣವನ್ನು ಅವರಿಗೆ ಬಿಟ್ಟ. ಅದರ ಶಕ್ತಿಯ ಪ್ರಭಾವ ಎಷ್ಟಿತ್ತೆಂದರೆ, ಅವರಿಬ್ಬರನ್ನೂ ಅದು ಗಾಳಿಯಲ್ಲಿ ಹಾರಿಸಿಕೊಂಡು ಹೋಗಿ ಪರ್ವತಗಳ ಮೇಲೆ ಹಾಯ್ದು, ಸಮುದ್ರದೊಳಗಡೆಗೆ ಬಿಸಾಕಿತು. 'ಒಳ್ಳೆಯದನ್ನು ಮಾಡಿದಿ' ಋಷಿಗಳು ಹೇಳಿದರು.

ಮಲಿನವಾಗುತ್ತಿರುವ ಪರಿಸರದಲ್ಲಿ ಆಹಾರ ಸುರಕ್ಷತೆ ಕುರಿತು ಸಂವಾದ

ಮೈಸೂರು,ಏ.4–ಮೈಸೂರಿನ ಇಲವಾಲ ಸಮೀಪವಿರುವ ಯಲಚಹಳ್ಳಿ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಏ. 6 ರಂದು ಮಧ್ಯಾಹ್ನ 2.15ರಿಂದ ಸಂಜೆ 4.45ರವರೆಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂವಾದದ ವಿಷಯ ಮಲಿನವಾಗುತ್ತಿರುವ ಪರಿಸರದಲ್ಲಿ ಆಹಾರ ಸುರಕ್ಷತೆ ಎಂಬುದಾಗಿರುತ್ತದೆ. ಈ ಸಂವಾದದಲ್ಲಿ ಹೆಸರಾಂತ ಕೀಟವಿಜ್ಞಾನಿ ಹಾಗೂ ಭಾರತೀಯ ಕೃಷಿ ಅನುಸಂದಾನ ಪರಿಷತ್ ನವದೆಹಲಿಯ ವಿಶ್ರಾಂತ ಮಹಾನಿರ್ದೇಶಕ ಡಾ.ಎನ್.ಕೆ.ಕೃಷ್ಣಕುಮಾರ್ ಭಾಗವಹಿಸಲಿದ್ದಾರೆ. ಹಿರಿಯ ಕೀಟ ವಿಜ್ಞಾನಿ ಪ್ರೊ.ಗುಬ್ಬಯ್ಯ ಸಹ ಭಾಗವಹಿಸುವ ಸಾಧ್ಯತೆಗಳಿವೆ. ಈ ಸಂವಾದ ಕಾರ್ಯಕ್ರಮವು ವಿಜ್ಞಾನಿಗಳಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯಲ್ಲಿ ಆಸಕ್ತಿ ಹೊಂದಿರುವ ಸಕಲ ನಾಗರಿಕರಿಗೆ ಮುಕ್ತವಾಗಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿ, ನೋಂದಣಿಗಾಗಿ ಮೊ: 9108354973 ಅನ್ನು ಸಂಪರ್ಕಿಸಬಹುದು.

ಇಂದು ದೃಷ್ಟಿ ವಿಶೇಷಚೇತನ ಮಹಿಳೆಯರಿಗಾಗಿ ಹೆರಿಟೇಜ್ ಕಪ್ ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಏ.4 (ಜಿಎ)–ನಿರಾಮಯ ಫೌಂಡೇಷನ್ ವತಿಯಿಂದ ದೃಷ್ಟಿ ವಿಶೇಷ ಚೇತನ ಮಹಿಳೆಯರಿಗಾಗಿ ಏ.5ರಂದು ಬನ್ನಿಮಂಟಪದ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಆವರಣದಲ್ಲಿ ಹೆರಿಟೇಜ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಆರ್.ರಕ್ಷಿತಾ ಈ ವಿಷಯ ತಿಳಿಸಿ, ಬೆಳಗ್ಗೆ 7ಕ್ಕೆ ಇನ್ನರ್ ವ್ಹೀಲ್ ಮೈಸೂರು ಕ್ಲಬ್‌ನ ವೈ. ವಿದ್ಯಾ, ವಿಷನ್ ಎಂಪವರ್ ಟ್ರಸ್ಟ್‌ನ ಮುರಳಿ ಶ್ರೀನಿವಾಸಯ್ಯ, ಹವಾಯ್ ಸ್ಟ್ರೀಲ್‌ನ ಗೋಪಯ್ಯ ಚಾಲನೆ ನೀಡಲಿದ್ದಾರೆ. ಸುನೀತಾ ಎನ್. ದೊಡ್ಡಪ್ಪನವರ ವಿಶೇಷ ಅತಿಥಿಗಳಾಗಿ ಭಾಗವಹಿಸುವರು ಎಂದರು. ನಿರಾಮಯ ತಂಡ, ಬೆಂಗಳೂರಿನ ದೀಪಾ ಅಕಾಡೆಮಿ ಮತ್ತು ಸ್ನೇಹದೀಪ ಸಂಸ್ಥೆ, ರಂಗರಾವ್ ಸ್ಕೂಲ್ಸ್, ಆಶಾದೀಪ ತಂಡಗಳು ಈ ಪ್ರತಿಷ್ಠಿತ ಕಪ್‌ಗಾಗಿ ಸೆಣಸಾಡಲಿವೆ. ಮೊದಲನೇ ಬಹುಮಾನವಾಗಿ 15 ಸಾವಿರ, 2ನೇ ಬಹುಮಾನವಾಗಿ 14 ಸಾವಿರ ನೀಡಿ, ಅದನ್ನು ತಂಡದ ಪ್ರತಿಯೊಬ್ಬ ಆಟಗಾರ್ತಿಯರಿಗೂ ಹಂಚಲಾಗುವುದು ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಸಂಸ್ಥೆಯ ನೂತನ್, ಗುರುಪ್ರೀತ್, ಸಂದೀಪ್ ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಏ.4– ಹಂಪಾಪುರ ಶಾಖಾ ವ್ಯಾಪ್ತಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ನಿಮಿತ್ತ ಏ.6 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳ್ತೂರು, ಮನುಗನಹಳ್ಳಿ ಮತ್ತು ಬಾಚೇಗೌಡನಹಳ್ಳಿ ಪಂಚಾಯ್ತಿ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮುಸ್ಲಿಂರ ರಾಜ್ಯ, ದೇಶದಿಂದ ಹೊರ ಹಾಕಲಾಗುತ್ತಾ!; ಬಿಜೆಪಿಗರ ಅಸಂಬದ್ಧ ಹೇಳಿಕೆ

ಸಿಎಂ ಸಿದ್ದರಾಮಯ್ಯ ವಾಗ್ದಾಳಿ

ಬೆಂಗಳೂರು, ಏ.4(ಕೆಎಂಶಿ)–ಮುಸ್ಲೀಮರನ್ನು ರಾಜ್ಯ ಇಲ್ಲವೇ ದೇಶದಿಂದ ಹೊರಹಾಕಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬಿಜೆಪಿ ನಾಯಕರು ಹಾಗೂ ಆ ಪಕ್ಷದಿಂದ ಉಚ್ಚಾಟಿತ ಮುಖಂಡರು ಸಾಮಾನ್ಯ ಜ್ಞಾನಕ್ಕೆ ವಿರುದ್ಧವಾಗಿ ಮುಸ್ಲಿಮರ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಭಾರತದ ಸಮುದಾಯಗಳ ಪೈಕಿ ಮುಸ್ಲಿಂ ಜನಸಂಖ್ಯೆ ಗಣನೀಯವಾಗಿದೆ. ಅವರನ್ನು ದೇಶದಿಂದ ಹೊರ ಹಾಕಲು ಹೇಗೆ ಸಾಧ್ಯ. ಕರ್ನಾಟಕದಲ್ಲೇ ಶೇಕಡ 14ರಷ್ಟು ಅಲ್ಪಸಂಖ್ಯಾತರಿದ್ದಾರೆ. ಪ್ರಸಕ್ತ ಮುಂಗಡ ಪತ್ರದಲ್ಲಿ ಈ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟಿರುವ ಮೊತ್ತವೂ ಸಾಕಾಗುತ್ತಿಲ್ಲ. ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮುಸ್ಲೀಮರ ವಿರುದ್ಧ ಅನಗತ್ಯ ಹೇಳಿಕೆ ನೀಡುತ್ತಿದ್ದಾರೆ. ಅವರು ಮುಖ್ಯಮಂತ್ರಿ ಆಗುವುದಿಲ್ಲ. ಒಂದೊಮ್ಮೆ ಆದರೆ, ಮಸೀದಿಗಳನ್ನು ಬುಲ್ಡೋಜ್ ಮಾಡುವುದಾಗಿ ಹೇಳುತ್ತಿದ್ದಾರೆ. ಅದು ಸಾಧ್ಯವಿಲ್ಲ. ಉಪಚುನಾವಣೆಯಲ್ಲಿ ಸೋಲುವ ಭೀತಿಯಿಂದ ಉಚ್ಚಾಟಿತ ನಾಯಕರನ್ನು ಕರೆಸಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿಗೆ ಮಾನ–ಮರ್ಯಾದೆ ಇಲ್ಲ ಎಂದು ಸಿದ್ದರಾಮಯ್ಯ ಖಾರವಾಗಿ ನುಡಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಪ್ರತಿನಿತ್ಯ ನಿಂದಿಸುವ ಯತ್ನಾಳ್, ಆ ಪಕ್ಷದ ಸ್ಟಾರ್ ಪ್ರಚಾರಕರಾಗಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಗೆ ಸೋಲಿನ ಭಯ ಕಾಡುತ್ತಿದೆ. ನಮ್ಮ ಅಭ್ಯರ್ಥಿಗಳಿಗೆ ನಿರೀಕ್ಷೆಗೂ ಮೀರಿ ಜನ ಸ್ಪಂದನೆ ದೊರೆತಿದೆ. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲಿದೆ. ಕಾಂಗ್ರೆಸ್ ಕಾರ್ಯಕ್ರಮಗಳು ಬಡವರಿಗಾಗಿ ರೂಪಿಸಿಸಲ್ಪಟ್ಟಿವೆ. ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಯೋಜನೆಗಳನ್ನು ಕೊಟ್ಟಿದ್ದೇವೆ. ಇವು ಸಾಮಾಜಿಕ ಬದ್ಧತೆಯ ಹೂಡಿಕೆಯಾಗಿವೆ. ಬಿಜೆಪಿ ಗ್ಯಾರಂಟಿ ಯೋಜನೆ ವಿರೋಧಿಸುತ್ತಿದೆ. ಅಭಿವೃದ್ಧಿಯೆಂದರೆ ಕೇವಲ ರಸ್ತೆ, ಸೇತುವೆ, ಕಟ್ಟಡಗಳ ನಿರ್ಮಾಣ ಮಾತ್ರವಲ್ಲ. ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸುವುದಾಗಿದೆ.



ಗ್ಯಾರಂಟಿಗೆ 1.31 ಲಕ್ಷ ಕೋಟಿ: ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದಿದ್ದರು. ಆದರೆ, ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು ಇದುವರೆಗೆ 1.31 ಲಕ್ಷ ಕೋಟಿ ರೂ. ಕೊಟ್ಟಿದ್ದೇವೆ. ಜೊತೆಗೆ, ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಪೊಲೀಸ್ ವ್ಯವಸ್ಥೆಗೆ, ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಗಳ ವೆಚ್ಚ ಕಡಿಮೆ ಮಾಡಿಲ್ಲ. ಕಳೆದ ವರ್ಷ 42,000 ಕೋಟಿ ರೂ. ವೆಚ್ಚ ಮಾಡಿದ್ದರೆ, ಈ ವರ್ಷ 44,000 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. ಅಭಿವೃದ್ಧಿ ಕೆಲಸಗಳು ಕುಂಠಿತವಾಗಿಲ್ಲ.

> “ ಡಾ.ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಹಾಗೂ ಸ್ವಾತಂತ್ರ್ಯ ಬಂದಾಗಿನಿಂದ ದೇಶದ ಒಟ್ಟು ಸಾಲ 53 ಲಕ್ಷದ 11,000 ಕೋಟಿ ರೂ. ಸಾಲ ಇದ್ದದ್ದು, 2026 ಮಾರ್ಚ್‌ಗೆ 218 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರ 12 ವರ್ಷಗಳಲ್ಲಿ 165 ಲಕ್ಷ ಕೋಟಿರೂ. ಸಾಲ ಮಾಡಿದೆ. ರಾಜ್ಯದಲ್ಲಿ ಬಿಜೆಪಿ 9 ವರ್ಷ ಅಧಿಕಾರದಲ್ಲಿದ್ದರೂ ಅಭಿವೃದ್ಧಿ ಕೈಗೊಂಡಿಲ್ಲ. 2013ರ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ನೀಡಿದ್ದ 165 ಭರವಸೆಗಳಲ್ಲಿ 158 ಈಡೇರಿಸಲಾಗಿದೆ. ಬಿಜೆಪಿ ನೀಡಿದ ಭರವಸೆಗಳಲ್ಲಿ ಶೇ.10ರಷ್ಟೂ ಈಡೇರಿಸಲಿಲ್ಲ. ಆ ಪಕ್ಷದ ನಾಯಕರು ಜನತೆ ಮುಂದೆ ಸತ್ಯ ನುಡಿಯಬೇಕೇ ಹೊರತು ಸುಳ್ಳು ಹೇಳಬಾರದು.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿದ್ದರಾಮಯ್ಯ ಸಾಲ ಮಾಡಿದ್ದಾರೆ ಎಂಬುದಾಗಿ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ರಾಜ್ಯಗಳು ಆರ್ಥಿಕ ಸಂಕಷ್ಟದಲ್ಲಿದ್ದಾಗ 2002ರಲ್ಲಿ ಜಾರಿಯಾದ ಆರ್ಥಿಕ ಹೊಣೆಗಾರಿಕೆ ಕಾಯ್ದೆ ಪ್ರಕಾರ ಮೂರು ಮಾನದಂಡ ಈಡೇರಿಸಬೇಕು. ಆರ್ಥಿಕ ಕೊರತೆ ಜಿಡಿಪಿಯ ಶೇ.3ರ ಒಳಗಿರಬೇಕು. 33 ಲಕ್ಷ 5,500 ಲಕ್ಷ ಕೋಟಿ ರೂ. ಪೈಕಿ ಶೇ.25ರಷ್ಟು ಸಾಲ ಇರಬೇಕು. ಬಿಜೆಪಿ ಪ್ರಸಕ್ತ ಬಜಟ್ ಓದಿಕೊಳ್ಳಲಿ. ಜಿಡಿಪಿಐ ಶೇಕಡ 25ಕ್ಕಿಂತ ಸಾಲ ಹೆಚ್ಚಾಗಬಾರದು. ನಮ್ಮ ಸಾಲ ಶೇ.24.94 ರಲ್ಲಿದೆ. ಸಾಲ ಮಿತಿಮೀರಿಲ್ಲ. ರಾಜ್ಯ ಮಿತಿಮೀರಿ ಸಾಲ ಮಾಡಲು ಸಾಧ್ಯವಿಲ್ಲ. ಸಾಲದ ಮಿತಿಯನ್ನು ಕೇಂದ್ರ ಸರ್ಕಾರದ ಆರ್ಥಿಕ ಇಲಾಖೆ ನಿಗದಿ ಮಾಡುತ್ತದೆ. ಇದು ಬಿಜೆಪಿಗೆ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಸಾಲ ಮಾಡಿದ್ದೇನೆ ಎನ್ನುವುದು ಹಸಿ ಸುಳ್ಳು, ಆರ್ಥಿಕ ಹೊಣೆಗಾರಿಕೆ ಕಾಯ್ದೆ ಮಾನದಂಡ ಮೀರಿಲ್ಲ. ಆರ್ಥಿಕ ಶಿಸ್ತು ಕಾಪಾಡಿಕೊಂಡಿದ್ದೇವೆ.

ಕೇಂದ್ರ ಸರ್ಕಾರಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದೇವೆ. ಕೇಂದ್ರ ಸರ್ಕಾರದ ಜಿಡಿಪಿ ಬೆಳವಣಿಗೆ ಶೇ.7.14, ಕರ್ನಾಟಕದ ಜಿಡಿಪಿ ಶೇ.8.1 ಇದೆ. ಇದರಲ್ಲಿ ಯಾವುದು ಹೆಚ್ಚು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ ನಡೆದಿದೆ. ನಮ್ಮ ಗ್ಯಾರಂಟಿಗಳು ಜನರಿಗೆ ಅನುಕೂಲ ಕಲ್ಪಿಸಿದೆ. ಶಕ್ತಿ ಯೋಜನೆ ಮಹಿಳೆಯರಿಗೆ ಸ್ವಾವಲಂಬನೆ ನೀಡಿದೆ. ಕಾಂಗ್ರೆಸ್ ಟೀಕೆ ಮಾಡುವ ಬದಲು, ಬಿಜೆಪಿ ತಮ್ಮ ಸಾಧನೆಗಳನ್ನು ಜನರ ಮುಂದೆ ಹೇಳಲಿ. ನನ್ನ ಅವಧಿಯಲ್ಲಿ ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಪ್ರಮಾಣ ಹೆಚ್ಚಿಸಿದ್ದನ್ನು, ಬಿಜೆಪಿ ಸರ್ಕಾರ ಕಡಿತ ಮಾಡಿತು, ಆಹಾರ ಭದ್ರತಾ ಕಾಯ್ದೆ, ಉದ್ಯೋಗ ಹಕ್ಕು, ಶಿಕ್ಷಣ ಹಕ್ಕುಗಳನ್ನು ಜಾರಿಗೆ ತಂದಿದ್ದು ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪ್ರಸ್ತುತ ದಿನಮಾನಗಳಲ್ಲಿ ವೈದ್ಯಕೀಯ ಕ್ಷೇತ್ರವೂ ವ್ಯಾಪಾರೀಕರಣಗೊಂಡಿದೆ

● ಮೆಡಿಕಲ್ ಅಸೆಸ್ಮೆಂಟ್ ಹಾಗೂ ರೇಟಿಂಗ್ ಬೋರ್ಡ್ ಅಧ್ಯಕ್ಷ ಡಾ.ಎಂ.ಕೆ.ರಮೇಶ್ ವಿಷಾದ ● ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಪದವೀಧರರ ದಿನಾಚರಣೆ



ಜೆಎಸ್‌ಎಸ್ ಮೆಡಿಕಲ್ ಕಾಲೇಜು ಆವರಣದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರು, ಏ.4(ವಿವಿಹೆಚ್)– ವೈದ್ಯಕೀಯ ಪದವಿ ಮುಗಿಸಿರುವ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸವಿದ್ದರೆ ಯಾವುದನ್ನಾದರೂ ಸಾಧಿಸಬಹುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಮೆಡಿಕಲ್ ಅಸೆಸ್ಮೆಂಟ್ ಮತ್ತು ರೇಟಿಂಗ್ ಬೋರ್ಡ್ ಅಧ್ಯಕ್ಷ ಡಾ.ಎಂ.ಕೆ.ರಮೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಆವರಣದಲ್ಲಿ ಶನಿವಾರ ನಡೆದ ಪದವೀಧರರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ವೈದ್ಯಕೀಯ ಸೇವೆಯಲ್ಲಿರುವವರು ಪುಸ್ತಕಗಳನ್ನು ಓದಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಜ್ಞಾನ ಹೆಚ್ಚಾದಂತೆ ಆತ್ಮ ವಿಶ್ವಾಸ ವೃದ್ಧಿಯಾಗುತ್ತದೆ. ಆತ್ಮ ವಿಶ್ವಾಸದಿಂದ ಕೆಲಸ ಮಾಡಿದಾಗ ನಿಮ್ಮಲ್ಲಿನ ಸಾಮರ್ಥ್ಯ ಹೊರಹಾಕಲ್ಪಡುತ್ತದೆ. ವಾರ್ಡಿನಲ್ಲಿ ರೋಗಿಗಳ ಜತೆ ಹೆಚ್ಚು ಸಮಯ ಕಳೆಯಬೇಕು. ಆಗ ನಿಮ್ಮಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಪರಿಣಿತಿ ಲಭಿಸುತ್ತದೆ. ಇದರಿಂದ ಸಮಾಜ ನಿಮ್ಮನ್ನು ಹೆಚ್ಚು ಗೌರವಿಸುವುದಲ್ಲದೇ ನಿಮ್ಮ ಮೇಲೆ ಬಹಳ ನಂಬಿಕೆ ಇಡುತ್ತದೆ ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳಿಗೆ ವೈದ್ಯಕೀಯ ಧರ್ಮ–ನೀತಿ ಮತ್ತು ಸಮಾಜ ಸೇವೆಯ ಮನೋಭಾವ ಇರಬೇಕು. ಪ್ರಸ್ತುತ ದಿನಮಾನದಲ್ಲಿ ಪ್ರತಿ ಕ್ಷೇತ್ರವು ವ್ಯಾಪಾರಿಕರಣವಾಗಿ ಬದಲಾಗಿದೆ. ವೈದ್ಯಕೀಯ ಕ್ಷೇತ್ರವು ವ್ಯಾಪಾರೀಕರಣಗೊಂಡಿದೆ. ಹೀಗಿದ್ದರೂ ನಾವು ನಮ್ಮ ಮೌಲ್ಯಗಳನ್ನು ಬಿಡಬಾರದು ಎಂದರು.

ಈ ಹಿಂದೆ ಹಗಲು–ರಾತ್ರಿ ಎನ್ನದೇ ವೈದ್ಯರು ಸೇವಾ ಮನೋಭಾವದಿಂದ ಕೆಲಸ ಮಾಡುತ್ತಿದ್ದರು. ರೈತರು ಅವರಿಗೆ ಹಣ ನೀಡುವ ಬದಲು ಗೌರವಪೂರ್ವಕ ವಾಗಿ ತಾವು ಬೆಳೆದ ಬೆಳೆಗಳು, ಆಹಾರ ಪದಾರ್ಥಗಳನ್ನು ನೀಡುತ್ತಿದ್ದರು. ಪ್ರತಿಫಲಾಪೇಕ್ಷೆ ಇಲ್ಲದೇ ಸೇವೆ ಮಾಡುವ ಮನಸ್ಥಿತಿ ಬೆಳೆಸಿಕೊಂಡಾಗ ಮಾತ್ರ ಯಶಸ್ಸು ಹರಸಿ ಬರುತ್ತದೆ ಎಂದರು.

ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆ ರಾಷ್ಟ್ರವಾದ ಭಾರತ, 2047ರ ವೇಳೆಗೆ ಅಭಿವೃದ್ಧಿಶೀಲ ರಾಷ್ಟ್ರವಾಗಿ ಹೊರಹೊಮ್ಮಲಿದೆ. ಈಗಾಗಲೇ ಅಭಿವೃದ್ಧಿ ಹೊಂದಿದ ದೇಶಗಳಿಂದಲೂ ಜನರು ಚಿಕಿತ್ಸೆಗಾಗಿ ಭಾರತಕ್ಕೆ ಬರುತ್ತಿರುವುದು ಇಲ್ಲಿನ ವೈದ್ಯಕೀಯ ಸೇವೆಗೆ ಹಿಡಿದ ಕೈಗನ್ನಡಿಯಾಗಿದೆ. ಭಾರತದ ವೈದ್ಯರು ಉತ್ತಮ ಕೌಶಲ್ಯ ಹೊಂದಿದ್ದಾರೆ. ಜೊತೆಗೆ ಉತ್ತಮ ಇಂಗ್ಲಿಷ್ ಮಾತನಾಡಬಲ್ಲರು. ಇದಲ್ಲದೇ ನಮ್ಮ ದೇಶದಲ್ಲಿ ಚಿಕಿತ್ಸಾ ವೆಚ್ಚ ಪಾಶ್ಚಾತ್ಯ ದೇಶಗಳಿಗಿಂತ ತುಂಬಾ ಕಡಿಮೆ. ಆದ್ದರಿಂದ ಹಲವರು ಚಿಕಿತ್ಸೆಗಾಗಿ ಭಾರತಕ್ಕೆ ಬರುತ್ತಿದ್ದಾರೆ. ಆ ಮೂಲಕ ದೇಶವು ಆರೋಗ್ಯ ಪ್ರವಾಸೋದ್ಯಮ ಹಬ್ ಆಗಿ ಬೆಳೆಯುತ್ತಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಇಂದಿನ ದಿನಗಳಲ್ಲಿ ಹೆಚ್ಚಾಗಿ ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದಾರೆ. ಯುವ ಸಮೂಹ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ, ತಂತ್ರಜ್ಞಾನ ಸದ್ಬಳಕೆಗೆ ಮುಂದಾಗಬೇಕು. ಅದರಲ್ಲೂ ವೈದ್ಯಕೀಯ ಕ್ಷೇತ್ರದವರು ನವೀನ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಬೇಕು, ಹೊಸ ತಂತ್ರಜ್ಞಾನಗಳನ್ನು ಕಲಿಯಬೇಕು. ಒತ್ತಡವನ್ನು ಸಮರ್ಥವಾಗಿ ನಿಭಾಯಿಸಬೇಕು ಎಂದು ಸಲಹೆ ನೀಡಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್‌ಮಠ್, ಜೆಎಸ್‌ಎಸ್–ಎಎಚ್‌ಇಆರ್ ಕುಲಪತಿ ಡಾ.ಎಚ್.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್, ಪರೀಕ್ಷ ನಿಯಂತ್ರಕ ಸುಧೀಂದ್ರ ಭಟ್, ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ, ಉಪಪ್ರಾಂಶುಪಾಲೆ ಡಾ.ಎಂ.ಎನ್.ಸುಮಾ, ಡಾ.ಮಾಂತಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಆಡಳಿತಾಧಿಕಾರಿ ಎಸ್.ಆರ್.ಸತೀಶ್ ಚಂದ್ರ ಉಪಸ್ಥಿತರಿದ್ದರು.

ಚಿನ್ನದ ಪದಕ, ನಗದು ಬಹುಮಾನ ಪಡೆದ ವಿದ್ಯಾರ್ಥಿಗಳು



ಶ್ರೀಗಳೊಂದಿಗೆ ಚಿನ್ನದ ಪದಕ ಹಾಗೂ ನಗದು ಬಹುಮಾನ ಪಡೆದ ವಿದ್ಯಾರ್ಥಿಗಳು

ಜೆಎಸ್‌ಎಸ್ ಮೆಡಿಕಲ್ ಕಾಲೇಜು ಆವರಣದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ 195 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ನೀಡಲಾಯಿತು. ಇದರಲ್ಲಿ 4 ಪ್ರತಿಭಾವಂತ ವಿದ್ಯಾರ್ಥಿಗಳಿಗೆ 11 ಚಿನ್ನದ ಪದಕಗಳು ಹಾಗೂ 13 ನಗದು ಬಹುಮಾನಗಳನ್ನು ಪ್ರದಾನ ಮಾಡಲಾಯಿತು.

ಡಾ.ಪೂರ್ಣ ಬನ್ಸಾಲ್ 7 ಚಿನ್ನದ ಪದಕ ಹಾಗೂ 6 ನಗದು ಬಹುಮಾನವನ್ನು ಪಡೆದುಕೊಂಡರು. ಡಾ.ಪ್ರಖರ್ ಗುಪ್ತ 2 ಚಿನ್ನದ ಪದಕ, ಒಂದು ನಗದು ಬಹುಮಾನ, ಡಾ.ಸಾಂಡ್ರ ಆನ್ ಸ್ಯಾಮ್ ಒಂದು ಚಿನ್ನ, ಎರಡು ನಗದು, ಡಾ.ಯಶಿಕಾ ಶರ್ಮಾ ಒಂದು ಚಿನ್ನದ ಪದಕ, ಡಾ.ಸ್ನೇಹಾ ಮನೋಜ್ ಕುಮಾರ್ ಎರಡು ನಗದು, ಡಾ.ಶರಣ್ಯ ಬೋಸ್ ಒಂದು ನಗದು, ದಿಯಕ್ಷಾ ಅರೋರಾ ಒಂದು ನಗದು ಬಹುಮಾನವನ್ನು ಪಡೆದುಕೊಂಡರು.

ವೀಕ್ಷಕರ ಕಣ್ಮನ ಸೆಳೆದ ವಿಶೇಷ ಚೇತನರ ಗೀಟು–ಗೀಚು ಕಲಾ ಪ್ರದರ್ಶನ

ಮೈಸೂರು, ಏ.4(ಎಂಟಿವೈ)– ಅನುಕಂಪಕ್ಕಿಂತ ಸೂಕ್ತ ಪ್ರೋತ್ಸಾಹ ನೀಡಿದರೆ ವಿಶೇಷ ಚೇತನರು ಸಾಮಾನ್ಯರಂತೆ ಸಾಧನೆ ಮೆರೆಯಬಲ್ಲರು ಎಂಬುದನ್ನು ಮೈಸೂರಿನ 'ಮೈತ್ರಿ ಚಾರಿಟಬಲ್ ಟ್ರಸ್ಟ್'ನ ವಿಶೇಷ ಶಾಲೆ ಮಕ್ಕಳು ಸಾಬೀತುಪಡಿಸಿದ್ದಾರೆ.

ಮೈಸೂರಿನ ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ 'ಮೈತ್ರಿ ಚಾರಿಟಬಲ್ ಟ್ರಸ್ಟ್' ಆಯೋಜಿಸಿದ್ದ 'ಗೀಟು–ಗೀಚು' ಕಲಾ ಪ್ರದರ್ಶನದಲ್ಲಿ ವಿಶೇಷ ಚೇತನರು ತಮ್ಮ ಕಲ್ಪನಾಲೋಕದಲ್ಲಿ ರಚಿಸಿದ ವಿಶಿಷ್ಟ ಕಲಾ ಚಿತ್ರಗಳು ವೀಕ್ಷಕರ ಕಣ್ಮನ ಸೆಳೆದವು.

ಮೈಸೂರಿನ ವಿವೇಕಾನಂದ ವೃತ್ತದ ಬಳಿಯಿರುವ ಈ ವಿಶೇಷ ಶಾಲೆಯ ಮಕ್ಕಳು ಎರಡು ವರ್ಷಗಳ ಸತತ ಪ್ರಯತ್ನದೊಂದಿಗೆ ರಚಿಸಿರುವ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಕುದುರೆ, ಚಿಟ್ಟೆ, ಪ್ರಕೃತಿ ಹೀಗೆ ತಮ್ಮದೆ ಕಲ್ಪನೆಯಲ್ಲಿ ಮೂಡಿಬಂದಿರುವ 36 ಚಿತ್ರಗಳೂ ವಿಶಿಷ್ಟವಾಗಿವೆ. ಕೆಲ ಚಿತ್ರಗಳು ಸಂತಸ ಭಾವ ಮೂಡಿಸಿದರೆ, ಒಂದಷ್ಟು ಚಿತ್ರಗಳು ಮೌನಕ್ಕೆ ಜಾರಿಸುವಂತಿವೆ. ಮುಗ್ಧಮಕ್ಕಳು ಕುಂಚದಲ್ಲಿ ಮೂಡಿಸಿದ ಭಾವಪಟಗಳು ಅವರ ಪ್ರೌಢಿಮೆಯನ್ನು ಸಾಕ್ಷೀಕರಿಸುವಂತಿವೆ.

ಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಮಾತನಾಡಿ, ವಿಶೇಷ ಚೇತನ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಬೇಕು. ಸಹಾನುಭೂತಿ ತೋರುವುದಷ್ಟೇ ಅಲ್ಲದೆ ಅವರಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಈ ನಿಟ್ಟಿನಲ್ಲಿ ಹಲವು ವರ್ಷಗಳಿಂದ ನಾನು ಪ್ರತಿವಾರ ವಿಶೇಷ ಮಕ್ಕಳೊಂದಿಗೆ ಕಾಲ ಕಳೆಯುತ್ತಾ, ಇವರ ಹಿತಕ್ಕಾಗಿ ಶ್ರಮಿಸುವವರಿಗೆ ಸಹಕಾರ ನೀಡುತ್ತಾ ಬಂದಿದ್ದೇನೆ ಎಂದು ತಿಳಿಸಿದರು.

ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಪೃಥ್ವಿ ಸುಧೀಂದರ್ ಮಾತನಾಡಿ, ಮೈತ್ರಿ ವಿಶೇಷ ಮಕ್ಕಳ ಶಾಲೆಯ 45ನೇ ವಾರ್ಷಿಕೋತ್ಸವದ ಅಂಗವಾಗಿ ಚಿತ್ರಕಲಾ ಪ್ರದರ್ಶನ ನಡೆಸಲಾಗುತ್ತಿದೆ. ವಿಶೇಷ ಚೇತನ ಮಕ್ಕಳು ಪ್ರಪಂಚವನ್ನು ನೋಡುವ ರೀತಿಯೇ ಭಿನ್ನ. ಹೀಗಾಗಿ ವರ್ಷಗಳ ಕಾಲ ಪ್ರೋತ್ಸಾಹಿಸಿ, ಅವರಿಂದ ಚಿತ್ರ ರಚನೆ ಮಾಡಿಸಿ, ಬಣ್ಣ ಹಚ್ಚಿಸಿ ಪ್ರದರ್ಶನಕ್ಕಿಡಲಾಗಿದೆ ಎಂದರು.

ವಿಶೇಷ ಚೇತನ ಮಕ್ಕಳನ್ನು ಸಮಾಜದಿಂದ ದೂರ ಇಡಬಾರದು. ಇವರೂ ಎಲ್ಲರಂತೆ ಸಮಾಜದ ಮುಖ್ಯ ಭೂಮಿಕೆಗೆ ಬರಬೇಕು ಎಂಬುದು ನಮ್ಮ ಟ್ರಸ್ಟ್‌ನ ಧ್ಯೇಯವಾಗಿದೆ. ಈ ಉದ್ದೇಶದಿಂದಲೇ ಮಧು ಬೆನಿ, ಕಾಫಿ ಪೇಟಿಂಗ್, ಗೊಂಡ್ ಆರ್ಟ್, ಬೋಹೊ ಆರ್ಟ್‌ನಂತಹ ವಿಭಿನ್ನ ರೀತಿಯ ಪೇಟಿಂಗ್‌ಗಳನ್ನು ಕಲಿಸಲಾಗುತ್ತಿದೆ. ಕೌಶಲಾಭಿವೃದ್ಧಿಗಾಗಿ ಕರಕುಶಲ ಜ್ಯೂವೆಲರ್ಸ್, ಪೇಪರ್ ಬ್ಯಾಗ್, ತಾಂಬೂಲು ನೀಡುವ ಚೀಲಗಳು, ಎನ್ವಲಪ್ ಕವರ್‌ಗಳನ್ನು ತುಂಡು ಬಟ್ಟೆಯಲ್ಲಿ ಹೊಲೆಯುವುದನ್ನು ಕಲಿಸಲಾಗುತ್ತಿದೆ. ವಿಶೇಷ ಚೇತನರೂ ಎಲ್ಲರಂತೆ ಬದುಕು ನಡೆಸುವ ಮೂಲಕ ಪೋಷಕರಿಗೆ ನೆರವಾಗುವಂತೆ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಈ ವೇಳೆ ಮೈತ್ರಿ ಶಾಲೆಯಲ್ಲಿ ಕಳೆದ 15 ವರ್ಷದಿಂದ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಅನುರಾಧ ಗಿರೀಶ್ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ನವ ಪ್ರೇರಣಾ ಫೌಂಡೇಷನ್‌ನ ಸಂಸ್ಥಾಪಕರಾದ ಶಾಶ್ವತಿ ಸಿಂಗ್, ಉದ್ಯಮಿ ಅಜಿತ್ ಪೈ ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಮೈತ್ರಿ ವಿಶೇಷ ಮಕ್ಕಳ ಶಾಲೆಯ ವಿದ್ಯಾರ್ಥಿಗಳು ರಚಿಸಿದ ಕಲಾಚಿತ್ರಗಳ ಪ್ರದರ್ಶನಕ್ಕೆ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ, ಶುಭಾ ಸಂಜಯ್ ಅರಸ್ ಚಾಲನೆ ನೀಡಿ, ವೀಕ್ಷಿಸಿದರು.

ಗಣತಿದಾರರು, ಮೇಲ್ವಿಚಾರಕರ ತರಬೇತಿ ಕೇಂದ್ರಕ್ಕೆ ಎಡಿಸಿ ಭೇಟಿ



ಮೈಸೂರು ಜಿಲ್ಲೆ ಹುಣಸೂರಿನ ಗಣತಿದಾರರು ಹಾಗೂ ಮೇಲ್ವಿಚಾರಕರ ತರಬೇತಿ ಕೇಂದ್ರಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಶನಿವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು, ಏ.4(ಬಿಎಲ್‌ಯು)– ಮೈಸೂರು ಜಿಲ್ಲೆ, ಹುಣಸೂರಿನ ಗಣತಿದಾರರು ಹಾಗೂ ಮೇಲ್ವಿಚಾರಕರ ತರಬೇತಿ ಕೇಂದ್ರಕ್ಕೆ ಶನಿವಾರ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಈ ವೇಳೆ ಜನಗಣತಿ ಕುರಿತ ತರಬೇತಿ ಪಡೆಯುವವರಿಗೆ ಯಾವೆಲ್ಲಾ ಮಾಹಿತಿ ನೀಡಲಾಗುತ್ತಿದೆ, ತರಬೇತಿಯ ಪ್ರಗತಿ ಯಾವ ಮಟ್ಟದಲ್ಲಿದೆ ಎಂಬುದರ ಬಗ್ಗೆ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದರು. ಅಲ್ಲದೆ ತರಬೇತಿ ನಿರತರಿಗೆ ಸೂಕ್ತ ಮಾರ್ಗದರ್ಶನ ನೀಡಿದರು. ನೀವುಗಳು ವೆಬ್‌ಪೋರ್ಟಲ್ ಮೂಲಕ ಸ್ವಯಂ ಗಣತಿ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಈ ವೇಳೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ಎಂಬಿಬಿಸಿ ತಂಡಕ್ಕೆ ದ್ವಿತೀಯ ಸ್ಥಾನ



ಶ್ರೀರಂಗಪಟ್ಟಣ: ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆಯ ಕುಂದಾಪುರ ಗ್ರಾಮದಲ್ಲಿ ನಡೆದ ರಾಜ್ಯ ಮಟ್ಟದ ಹೊನಲು ಬೆಳಕಿನ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಹೊಂಗಹಳ್ಳಿ ಗ್ರಾಮದ 'ಮಾರುತಿ ಎಂಬಿಬಿಸಿ ಕ್ಲಬ್' ತಂಡವು ದ್ವಿತೀಯ ಸ್ಥಾನ ಪಡೆದು ಸಾಧನೆ ಮಾಡಿದೆ.

ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ತಂಡವು ಫೈನಲ್ ಪ್ರವೇಶಿಸುವ ಮೂಲಕ ಗಮನ ಸೆಳೆಯಿತು. ತಂಡದ ನಾಯಕ ಎಂ.ನಾಗೇಶ್ ತಮ್ಮ ಅತ್ಯುತ್ತಮ ಆಟದ ಪ್ರದರ್ಶನಕ್ಕಾಗಿ 'ಟೂರ್ನಿಯ ಅತ್ಯುತ್ತಮ ಆಟಗಾರ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ರೋಚಕ ಪಂದ್ಯಗಳು: ಮೊದಲ ಸುತ್ತಿನ ಪಂದ್ಯದಲ್ಲಿ ಕರೂರು ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿದ ಮಾರುತಿ ಎಂಬಿಬಿಸಿ ಕ್ಲಬ್ ತಂಡವು, ಎರಡನೇ ಸುತ್ತಿನಲ್ಲಿ ಬಲಿಷ್ಠ ಆಳ್ವಾಸ್ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು. ಅತ್ಯಂತ ಜಿದ್ದಾಜಿದ್ದಿನಿಂದ ಕೂಡಿದ್ದ ಸೆಮಿಫೈನಲ್ ಪಂದ್ಯದಲ್ಲಿ ಕೆ.ಆರ್. ನಗರ ತಂಡವನ್ನು ಸೋಲಿಸಿ ಫೈನಲ್ ತಲುಪಿತು. ಅಂತಿಮವಾಗಿ ನಡೆದ ಫೈನಲ್ ಹಣಾಹಣಿಯಲ್ಲಿ ಭದ್ರಾವತಿ ತಂಡದ ವಿರುದ್ಧ ಹೋರಾಡಿ ಸೋಲೊಪ್ಪಿಕೊಳ್ಳುವ ಮೂಲಕ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟಿತು.

ತಂಡದ ಪರವಾಗಿ ನಾಯಕ ಎಂ.ನಾಗೇಶ್, ಹಿರಿಯ ಆಟಗಾರ ಪಿ.ನರಸಿಂಹ, ಬಾಲಾಜಿ, ಗುರುಪ್ರಸಾದ್ ಆರ್. ಹಾಗೂ ಯಶವಂತ್ ಅವರು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದರು. ತಾಲೂಕಿನ ಗ್ರಾಮೀಣ ಭಾಗದ ತಂಡವೊಂದು ರಾಜ್ಯ ಮಟ್ಟದಲ್ಲಿ ಈ ಸಾಧನೆ ಮಾಡಿರುವುದು ಸಾರ್ವಜನಿಕರ ಹಾಗೂ ಕ್ರೀಡಾಭಿಮಾನಿಗಳ ಶ್ಲಾಘನೆಗೆ ಪಾತ್ರವಾಗಿದೆ.


ಸಾರ್ವಜನಿಕ ಪ್ರಕಟಣೆ


ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ಮರಿದೇವರು ಅವರ ಮಗ ಶ್ರೀ. ವಿನಯ್ ಎಂ., ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದಲ್ಲಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡ ಸರ್ವೆ ನಂ. 107 ಮತ್ತು ಇತರ ಸರ್ವೆ ನಂಬರ್‌ಗಳಲ್ಲಿ ನಿರ್ಮಿಸಲಾದ "ಸ್ಕೈಟಾಪ್ ಗ್ರೀನ್ ಸಿಟಿ" ಬಡಾವಣೆಯಲ್ಲಿರುವ ಖಾಲಿ ನಿವೇಶನ ಸಂಖ್ಯೆ. 20. ಹಾಲಿ ಇಲವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಸ್ವತ್ತಿನ ಸಂಖ್ಯೆ: 15220040 3160020973. ನಿವೇಶನದ ವಿಸ್ತೀರ್ಣ ಪೂರ್ವ ಪಶ್ಚಿಮ: 18 ಮೀಟರ್ ಮತ್ತು ಉತ್ತರ ದಕ್ಷಿಣ: 12 ಮೀಟರ್, ಒಟ್ಟು ವಿಸ್ತೀರ್ಣ 216 ಚದರ ಮೀಟರ್‌ವುಳ್ಳ ಸ್ವತ್ತಿನ ಚಕ್ಕುಬಂದಿ, ಪೂರ್ವಕ್ಕೆ: ನಿವೇಶನ ಸಂಖ್ಯೆ. 15, ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ನಿವೇಶನ ಸಂಖ್ಯೆ. 19 ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ. 21.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು
Mob: 9844640641. email: sldlawfirm2021@gmail.com





ಮೈಸೂರು ಮಿತ್ರ ಭಾನುವಾರ 5 ಏಪ್ರಿಲ್ 2026

ಶ್ರೀ ಬಡಗೊಡಮ್ಮ ದೇವಿಯ ಅದ್ದೂರಿ ರಥೋತ್ಸವ



ಬಡಗೊಡಮ್ಮ ದೇವಿಯ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು

ನಾಗಮಂಗಲ: ತಾಲೂಕಿನ ಗ್ರಾಮ ದೇವತೆ ಬಡಗೊಡಮ್ಮ ದೇವಿಯ ಜಾತ್ರಾ ಮಹೋತ್ಸವ ರಾಜ್ಯದ ವಿವಿಧ ಭಾಗಗಳಿಂದ ಬಂದಂತಹ ಸಾವಿರಾರು ಜನರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ನೂರಾರು ವರ್ಷಗಳ ಇತಿಹಾಸವಿರುವ ಬಡಗೊಡಮ್ಮ ಜಾತ್ರೆಯು ಪ್ರತಿವರ್ಷ ಯುಗಾದಿ ಹಬ್ಬ ಮುಗಿದ 15 ದಿನಗಳ ನಂತರ ಆರಂಭ ವಾಗುವ ಜಾತ್ರಾ ಮಹೋತ್ಸವ ವಾರದವರೆಗೆ ನಡೆಯುವುದು ವಾಡಿಕೆ. ಪ್ರತಿ ವರ್ಷ ನಡೆಯುವ ಬಡಗೊಡಮ್ಮ ಜಾತ್ರೆ ಹಾಗೂ ಕೊಂಡೋತ್ಸವ ಅಂಗವಾಗಿ ಪ್ರತಿದಿನ ವಿವಿಧ ಪೂಜಾ ಕೈಂಕರ್ಯಗಳು ಪೂರ್ಣಗೊಂಡಿದ್ದು ಶನಿವಾರ ಮುಂಜಾನೆ ಸೂರ್ಯೋದಯ ಶುಭ ಬ್ರಾಹ್ಮಿ ಮಹೋತ್ಸವದಲ್ಲಿ ಅರ್ಚಕ ರಾದ ಗುಡ್ಡಪ್ಪ, ಮಾಸ್ತಿಯ ಅಗ್ನಿಕೊಂಡ ವನ್ನು ಯಶಸ್ವಿಯಾಗಿ ಹಾಯ್ದರು.

ಶುಕ್ರವಾರ ರಾತ್ರಿ ಪಟ್ಟಣದ ಪ್ರಮುಖ ರಾಜ ಬೀದಿಗಳಲ್ಲಿ ಬಂಡಿ ಉತ್ಸವ ನಡೆದು ಬಳಿಕ ಸಂಜೆ 5 ಗಂಟೆಗೆ ಕೊಂಡದ ಸೌದೆಗೆ ಪೂಜೆ ಸಲ್ಲಿಸಿ ಅಗ್ನಿಸ್ಪರ್ಷ ನೆರವೇರಿಸಲಾಯಿತು. ಈ ಜಾತ್ರೆಯಲ್ಲಿ ಸುತ್ತಮುತ್ತ ಗ್ರಾಮಗಳಾದ ಉಪ್ಪಾರಹಳ್ಳಿ, ಬದರಿ ಕೊಪ್ಪಲು, ಸಾರಿ ಮೇಗಲ ಕೊಪ್ಪಲು, ಮಾಯಣ್ಣ ಗೌಡನ ಕೊಪ್ಪಲು, ಮಾದಲಹಳ್ಳಿ ನಾಗಮಂಗಲಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು.

ಉಪ್ಪಾರಹಳ್ಳಿ ಗ್ರಾಮದ ಕೃಷ್ಣಮೂರ್ತಿ, ರಾಜಮುಡಿ, ಅಶೋಕ್, ವಸಂತ ಲಕ್ಷ್ಮಿ ಅಶೋಕ್, ಜಯರಾಜ್. ಎನ್.ಸ್ವಾಮಿ, ಎಸ್. ನಾರಾಯಣ, ಟಿ.ಸತೀಶ, ಟಿ.ಸುರೇಶ, ಜಯ ರಾಮ್, ಸಂಪತ್, ಚಂದ್ರು, ಕುಮಾರ, ನಾಗ ರಾಜು, ರವಿ, ಮಂಜಣ್ಣ ಶೇಖರ್, ರಾಜಣ್ಣ, ತಿರುಮಲ, ಪ್ರಧಾನ ಕಾರ್ಯದರ್ಶಿ ಸ್ವಾಮಿ ಎನ್ ಗೌರವಾಧ್ಯಕ್ಷ ಪಟೇಲ್ ಶ್ರೀನಿವಾಸ್, ಸಂಘದ ಸದಸ್ಯರು, ಸುತ್ತಮುತ್ತಲಿನ ಗ್ರಾಮಸ್ಥರು, ಭಕ್ತಾದಿಗಳು ಉಪಸ್ಥಿತರಿದ್ದರು.

2.20 ಕೋಟಿ ಮೌಲ್ಯದ ಚಿನ್ನಾಭರಣ, ದ್ವಿಚಕ್ರ ವಾಹನಗಳ ವಶ

ಮಂಡ್ಯ, ಏ.4– ಜಿಲ್ಲೆಯ ನಾಲ್ಕು ಪೊಲೀಸ್ ಉಪ ವಿಭಾಗಗಳಲ್ಲಿ ನಡೆದಿರುವ ಕಳ್ಳತನ ಪ್ರಕರಣಗಳಲ್ಲಿ 28 ಮಂದಿ ಆರೋಪಿಗಳನ್ನು ಬಂಧಿಸಿ, ಚಿನ್ನಾಭರಣ, ಬೆಳ್ಳಿ, ದ್ವಿಚಕ್ರ ವಾಹನಗಳು ಸೇರಿದಂತೆ ಒಟ್ಟು 2.20 ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದ್ದಾರೆ.

ಜಿಲ್ಲೆಯ ಮಂಡ್ಯ, ಶ್ರೀರಂಗಪಟ್ಟಣ, ನಾಗಮಂಗಲ, ಮಳವಳ್ಳಿ ಉಪ ವಿಭಾಗಗಳಿಂದ ಒಟ್ಟಾರೆ 39 ಪ್ರಕರಣಗಳನ್ನು ಭೇದಿಸಿರುವ ಪೊಲೀಸರು, 1484 ಕೆ.ಜಿ. ಚಿನ್ನಾಭರಣ, 950 ಗ್ರಾಂ ಬೆಳ್ಳಿ, 26 ದ್ವಿಚಕ್ರ ವಾಹನಗಳು ಹಾಗೂ 30 ಸಾವಿರ ರೂ. ನಗದು ಹಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರು, 251 ಗ್ರಾಂ ತೂಕದ ಚಿನ್ನಾಭರಣ, 79 ಗ್ರಾಂ ತೂಕದ ಚಿನ್ನದ ಗಟ್ಟಿ ಸೇರಿ ಒಟ್ಟು 330 ಗ್ರಾಂ ಚಿನ್ನ, ನಗರದ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ



ಆರೋಪಿಗಳಿಂದ ವಶಪಡಿಸಿಕೊಂಡ ಚಿನ್ನಾಭರಣಗಳೊಂದಿಗೆ ತನಿಖಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ

950 ಗ್ರಾಂ ತೂಕದ ಬೆಳ್ಳಿ ಪದಾರ್ಥಗಳು, ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ಹಲಗೂರು ಪೊಲೀಸ್ ಠಾಣೆ ವ್ಯಾಪ್ತಿಯ 1.05 ಗ್ರಾಂ ತೂಕದ ಚಿನ್ನಾಭರಣ, ದ್ವಿಚಕ್ರ ವಾಹನ, ಮದ್ದೂರು ಪೊಲೀಸ್ ಠಾಣೆಯ ಪ್ರಕರಣದಲ್ಲಿ 50 ಗ್ರಾಂ ಚಿನ್ನದ ಮಾಂಗಲ್ಯ ಸರ, 32 ಗ್ರಾಂ ಚಿನ್ನದ ಸರ ಸೇರಿದಂತೆ 82 ಗ್ರಾಂ ಚಿನ್ನಾಭರಣ, ಕೆಸ್ತೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 11.2 ಗ್ರಾಂ ಚಿನ್ನದ ಸರ, 2 ದ್ವಿಚಕ್ರ ವಾಹನಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಬೆಸಗರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಟ್ಟು 4 ಪ್ರಕರಣಗಳಲ್ಲಿ 156.36 ಗ್ರಾಂ ತೂಕದ ಚಿನ್ನಾಭರಣ, 30 ಸಾವಿರ ನಗದು, 2 ದ್ವಿಚಕ್ರ ವಾಹನಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಮೇಲುಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿಯ ಮಲ್ಲೇನಹಳ್ಳಿ ಗ್ರಾಮದ ಮಧು ಬಿನ್ ಹೊಂಬಾಳಯ್ಯ ಎಂಬಾತನನ್ನು ಬಂಧಿಸಿದ್ದು, ಆತನಿಂದ 3.50 ಲಕ್ಷ ರೂ. ಮೌಲ್ಯದ 11 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಈತನನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಬೇಕಾಗಿದೆ. ಶ್ರೀರಂಗಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 200 ಗ್ರಾಂ ಚಿನ್ನಾಭರಣ ಹಾಗೂ 6 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ನಾಗಮಂಗಲ ಟೌನ್ ಪೊಲೀಸ್ ಠಾಣೆಯ 2 ಪ್ರಕರಣಗಳಲ್ಲಿ 743.914 ಗ್ರಾಂ ತೂಕದ ಚಿನ್ನದ ಒಡವೆಗಳು 2 ದ್ವಿಚಕ್ರ ವಾಹನ ಸೇರಿದಂತೆ ಒಟ್ಟು 1.06 ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು. ಅಪರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಸಿ.ಇ.ತಿಮ್ಮಯ್ಯ, ಎಸ್.ಇ.ಗಂಗಾಧರಸ್ವಾಮಿ, ಡಿವೈಎಸ್ಪಿ ಚಲುವರಾಜು, ಕೃಷ್ಣಕುಮಾರ್, ಯಶ್ವಂತ್ ಕುಮಾರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಗೋಷ್ಠಿಯಲ್ಲಿ ಇದ್ದರು. ಇದೇ ವೇಳೆ ಚಿನ್ನಾಭರಣ, ದ್ವಿಚಕ್ರ ವಾಹನಗಳನ್ನು ಕಳೆದುಕೊಂಡಿದ್ದ ವಾರಸುದಾರರಿಗೆ ವಸ್ತುಗಳನ್ನು ಹಸ್ತಾಂತರಿಸಲಾಯಿತು.

ನಗರಸಭೆಗೆ ಗೊರವನಹಳ್ಳಿ ಸೇರ್ಪಡೆ ವಿರೋಧಿಸಿ ಗ್ರಾಮಸ್ಥರಿಂದ ಪ್ರತಿಭಟನೆ



ನಗರಸಭೆಗೆ ಗೊರವನಹಳ್ಳಿಯನ್ನು ಸೇರಿಸಿರುವುದನ್ನು ವಿರೋಧಿಸಿ ಶಾಸಕರ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮದ್ದೂರು: ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಶನಿವಾರ ಶಾಸಕ ಕೆ.ಎಂ.ಉದಯ್ ಗೊರವನಹಳ್ಳಿಗೆ ಭೂಮಿ ಪೂಜೆ ನೆರವೇರಿಸಲು ಬಂದ ವೇಳೆಯೇ ಗ್ರಾಮದ ಕೆಲ ಗ್ರಾಮಸ್ಥರು ಮದ್ದೂರು ನಗರಸಭೆಗೆ ಗೊರವನಹಳ್ಳಿಯನ್ನು ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿ ಬೇಡವೇ ಬೇಡ ನಗರಸಭೆ ಬೇಡ ಎಂದು ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು. ಈ ವೇಳೆ ಶಾಸಕರ ಬೆಂಬಲಿಗರು ನಗರಸಭೆಗೆ ಸೇರುಸುವಂತೆ ಘೋಷಣೆ ಕೂಗಿದರು.

ಈ ವೇಳೆ ಒಂದೇ ಸ್ಥಳದಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ ಹಾಗೂ ಗೊರವನಹಳ್ಳಿಯನ್ನು ನಗರಸಭೆ ಸೇರ್ಪಡೆ ವಿರೋಧಿಸಿ ಪ್ರತಿಭಟನೆ ನಡೆದ ಹಿನ್ನೆಲೆಯಲ್ಲಿ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸಿಪಿಐಗಳಾದ ನವೀನ್‌ಕುಮಾರ್ ಹಾಗೂ ನಾರಾಯಣಿ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಅನ್ನು ನಿಯೋಜಿಸಲಾಗಿತ್ತು. ನಂತರ ವೇದಿಕೆ ಕಾರ್ಯಕ್ರಮ ಶಾಂತಿಯುತವಾಗಿ ನಡೆಯಿತು.

ಮದ್ಯ ಮಾರಾಟ ನಿಷೇಧಿಸುವಂತೆ ಆಗ್ರಹಿಸಿ ಅಬಕಾರಿ ಇಲಾಖೆಗೆ ಮುತ್ತಿಗೆ

ಕೆ.ಆರ್.ಪೇಟೆ, ಏ.4–ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಮೂಡನಹಳ್ಳಿ ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸುವಂತೆ ಒತ್ತಾಯಿಸಿ ಗ್ರಾಮದ ಮಹಿಳೆಯರು ಹಾಗೂ ಯುವಕರು ಅಬಕಾರಿ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮದ ನೂರಾರು ಮಹಿಳೆಯರು ಹಾಗೂ ಯುವಕರು ಪ್ರತಿಭಟನೆ ನಡೆಸಿ, ಮೂಡನಹಳ್ಳಿ ಗ್ರಾಮದ ಬೀದಿ ಬೀದಿಗಳಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿರುವ ಮದ್ಯ ಮಾರಾಟವನ್ನು ಬಂದ್ ಮಾಡುವ ಆದೇಶ ಹೊರಡಿಸುವವರೆಗೂ ಇಲ್ಲಿಂದ ಹೋಗುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತರು. ಗ್ರಾಮದಿಂದ ಪ್ರಮುಖ ರಸ್ತೆ ಮೂಲಕ ಕೆಆರ್ ಪೇಟೆ ಪಟ್ಟಣದ ಶಾಸಕರಾದ ಹೆಚ್ ಟಿ ಮಂಜು ಅವರ ಮನೆಯವರೆಗೆ ಪಾದ ಯಾತ್ರೆ ಮೂಲಕ ಆಗಮಿಸಿ ಶಾಸಕರಿಗೆ ಮನವಿ ಸಲ್ಲಿಸಿ ನಂತರ ಅಬಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮಸ್ಥರ ಮನವಿ ಆಲಿಸಿದ ಶಾಸಕ ಹೆಚ್.ಟಿ ಮಂಜು ಅಬಕಾರಿ ಡಿಸಿ ಅವರಿಗೆ ವಿಡಿಯೋ ಕರೆ ಮಾಡಿ ಮಾತನಾಡಿ ತಕ್ಷಣವೇ ಮೂಡನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ



ಮೂಡನಹಳ್ಳಿ ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸುವಂತೆ ಒತ್ತಾಯಿಸಿ ಜಿಲ್ಲಾ ಅಬಕಾರಿ ಡಿವೈ.ಎಸ್.ಪಿ.ಯವರಿಗೆ ಗ್ರಾಮಸ್ಥರು ಮನವಿ ಸಲ್ಲಿಸಿದರು.

ವನ್ನು ಜನರ ಭಾವನೆಗೆ ಬೆಲೆ ಕೊಟ್ಟು ಮದ್ಯ ಮಾರಾಟವನ್ನು ನಿಲ್ಲಿಸಿ ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಕಟ್ಟು ನಿಟ್ಟಿನ ಕ್ರಮ ವಹಿಸುವಂತೆ ಖಡಕ್ ಸೂಚನೆ ನೀಡಿದರು.

ಕುಡಿತದ ಚಟದಿಂದ ಯುವಕರು, ಮನೆಯ ಯಜಮಾನರು ಸಹ ಹಾಳಾಗುತ್ತಿದ್ದಾರೆ.ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಅಕ್ರಮ ಮದ್ಯ ಮಾರಾಟದಿಂದಾಗಿ ಮೂಡನಹಳ್ಳಿ ಗ್ರಾಮದಲ್ಲಿ ಅಶಾಂತಿ ಸೃಷ್ಟಿಯಾಗಿದೆ. ಗ್ರಾಮದ ನೆಮ್ಮದಿ ಹಾಳಾಗಿದೆ ಎಂದು ಗಂಭೀರ ಆರೋಪ ಮಾಡಿದ ಪ್ರತಿಭಟನಾಕಾರರು ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸದಿದ್ದರೆ ಉಗ್ರ ಹೋರಾಟವನ್ನು ಮಾಡುವುದಾಗಿ ಗ್ರಾಮಸ್ಥರು ಖಡಕ್ಕಾಗಿ ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಅಬಕಾರಿ ಡಿವೈಎಸ್.ಪಿ. ರಾಧಾಮಣಿ ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಮೂಡನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಅಲ್ಲದೆ ಪ್ರತಿನಿತ್ಯ ಅಬಕಾರಿ ಅಧಿಕಾರಿಗಳು ಹಾಗೂ ಪೊಲೀಸರ ಬೀಟ್ ವ್ಯವಸ್ಥೆ ಕಲ್ಪಿಸಿ ಅಕ್ರಮ ಮದ್ಯಮಾರಾಟವನ್ನು ಸಂಪೂರ್ಣ ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಲಕ್ಷ್ಮೀದೇವಿ ಜಾತ್ರೆಗೆ ಕಿಕ್ಕಿರಿದು ಸೇರಿದ್ದ ಭಕ್ತರು

ಕಿಕ್ಕೇರಿ: ಭಾರತೀಪುರ ಗ್ರಾಮದ ಲಕ್ಷ್ಮೀದೇವಿ ಅಮ್ಮನವರ ಜಾತ್ರೆಗೆ ಭಕ್ತಸಾಗರ ಹರಿದುಬಂದಿತು. ಶನಿವಾರ ಭಕ್ತರು ಬಿರು ಬಿಸಿಲನ್ನು ಲೆಕ್ಕಿಸದೆ ಭಾಗವಹಿಸಿದ್ದರು. ಇಳಿ ಹೊತ್ತಿನ ಭಾಸ್ಕರನ ಹೊಂಗಿರಣದ ಪ್ರಾಶಮಾನದಲ್ಲಿ ಅಮ್ಮನವರ ರಥವು ವಿಜೃಂಭಣೆಯಿಂದ ರಥಬೀದಿಯಲ್ಲಿ ಸಾಗಿತು.

ದಾರಿಯುದ್ದಕ್ಕೂ ಲಕ್ಷ್ಮೀದೇವಿ ಉಘೇ, ಉಘೇ ಎಂದು ಜಯಘೋಷ ಕೂಗುತ್ತ ರಥವನ್ನು ಎಳೆದರು. ಭಕ್ತರು ಹಣ್ಣು ಜವನ ಎಸೆಯುವ ಮೂಲಕ ಭಕ್ತಿ ಮೆರೆದು. ಹಲವರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಬಾಳೆಹಣ್ಣು ಮೇಲೆ ತಮ್ಮ ಬಯಕೆ ಬರೆದು ರಥಕ್ಕೆ ಎಸೆದರು.

ರಥೋತ್ಸವಕ್ಕೂ ಮುನ್ನ ಧ್ವಜಪಟ ಪೂಜೆ, ಕಳಶ ಪೂಜೆ, ಗ್ರಾಮದ ಅಷ್ಟದಿಕ್ಕುಗಳಿಗೆ ಬಲಿಪೂಜೆ, ಧೂಪ ಪೂಜೆ ನಡೆಯಿತು. ಗುಡಿಯಿಂದ ಅಮ್ಮನವರನ್ನು ಸರ್ವಾಲಂಕಾರದಿಂದ ಶೃಂಗರಿಸಿ ಮೆರವಣಿಗೆ ಮಾಡಲಾಯಿತು. ತರುವಾಯ ದೇವಿಯನ್ನು ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ನೂತನ ಜೋಡಿ, ಮುಟಾಣಿಗಳು ತವರೂರಿನ ಸಂಭ್ರಮದ ಜಾತ್ರೆಗೆ ನೆಂಟರಿಷ್ಟರನ್ನು ಸಂಭ್ರಮದಿಂದ ಬರಮಾಡಿಕೊಂಡು ಸಂಭ್ರಮಪಟ್ಟರು. ದಾನಿಗಳು ಸ್ವಯಂಪ್ರೇರಣೆಯಿಂದ ನೀರುಮಜ್ಜಿಗೆ, ಕೋಸಂಬರಿ, ಪಾನಕ, ಚಿತ್ರಾನ್ನ, ಮೊಸರನ್ನದಂತಹ ಅರವಟ್ಟಿಗೆ ಕಾರ್ಯಕ್ರಮವನ್ನು ನಡೆಸಿ ಭಕ್ತರ ದಾಹ ತಣಿಸಿದರು.



ಭಾರತೀಪುರ ಗ್ರಾಮದಲ್ಲಿ ಗ್ರಾಮದೇವಿ ಲಕ್ಷ್ಮೀದೇವಿ ಅಮ್ಮನವರ ರಥೋತ್ಸವ ಶನಿವಾರ ವಿಜೃಂಭಣೆ ಯಿಂದ ಜರುಗಿತು. ಸುತ್ತಮುತ್ತಲ ಗ್ರಾಮಗಳಿಂದ ಭಕ್ತರು ಆಗಮಿಸಿದ್ದರು.

ಒಂದನೇ ಪುಟದಿಂದ

ಆಟೋ ಗ್ಯಾಸ್‌ಗೆ ಮೈಸೂರಲ್ಲೂ ಪರದಾಟ

'ನೋ ಸ್ಟಾಕ್' ಫಲಕ ಹಾಕಿದ್ದವು. ಆದರೆ ಥಿಂಕ್ ಗ್ಯಾಸ್ ಸೇರಿದಂತೆ ಇತರೆ ಹಲವು ಕಂಪನಿಗಳ ಎಲ್‌ಪಿಜಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ. ನಗರದ 8 ಸೇರಿದಂತೆ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ 40 ಫಿಲ್ಲಿಂಗ್ ಸ್ಟೇಷನ್‌ಗಳಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ತೀವ್ರತರ ಸಮಸ್ಯೆ ಇಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ಕೆಲವು ಕಂಪನಿಗಳ ಪೂರೈಕೆಯಲ್ಲಿನ ವಿಳಂಬದಿಂದ ಫಿಲ್ಲಿಂಗ್ ಸ್ಟೇಷನ್ ಬಳಿ ಆಟೋ ಹಾಗೂ ಕಾರುಗಳು ಸಾಲುಗಟ್ಟಿದ್ದವು. ಆದರೆ ಬೆಂಗಳೂರಿನಂತೆ ಎರಡು–ಮೂರು ತಾಸು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಸದ್ಯ ಮೈಸೂರಲ್ಲಿ ನಿರ್ಮಾಣವಾಗಿಲ್ಲ. 15–20 ನಿಮಿಷಗಳಲ್ಲಿ ವಾಹನಗಳಿಗೆ ಎಲ್‌ಪಿಜಿ ತುಂಬಿಸಿಕೊಳ್ಳಬಹುದಾದ ಸ್ಥಿತಿ ಇದೆ. ಸ್ಟೇಷನ್‌ವೊಂದರ ಮಾಲೀಕರು 'ಮಿತ್ರ'ನೊಂದಿಗೆ ಮಾತನಾಡಿ, ಗ್ಯಾಸ್ ಪೂರೈಕೆಯಾದಂತೆ ಆಟೋಗಳಿಗೆ ಹಾಕಿಕೊಡಲಾಗುತ್ತಿದೆ. ಪರಿಸ್ಥಿತಿ ಸುಧಾರಣೆಯಲ್ಲಿದ್ದು, ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

> ಆಟೋ ಎಲ್‌ಪಿಜಿ ಗ್ಯಾಸ್ ಲೀಟರ್‌ಗೆ 83 ರೂ. ಇತ್ತು. ಈಗ 90 ರೂ. ಆಗಿದೆ. ಜೊತೆಗೆ ಕ್ಯೂನಲ್ಲಿ ನಿಂತು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಸ್ಟೇಷನ್‌ನಲ್ಲಿ ಗ್ಯಾಸ್ ದೊರೆತರೆ, ಮತ್ತೊಂದರಲ್ಲಿ ಸಿಗುತ್ತಿಲ್ಲ. ಬೆಳಗ್ಗೆ ಐದಾರೂ ಗಂಟೆಗೆ ಬಂದು ಕ್ಯೂ ನಿಲ್ಲುವಂತಾಗಿದೆ. ಗ್ಯಾಸ್ ಪೂರೈಕೆಯಲ್ಲಿ ಕೊರತೆ ಮುಂದುವರೆದಿದೆ. ನೋಡಿ ಈಗ ಆಟೋದಲ್ಲಿ ಗ್ಯಾಸ್ ಖಾಲಿಯಾಗಿದೆ. ಇಲ್ಲಿ (ಧನ್ವಂತರಿ ರಸ್ತೆಯ ಸ್ಟೇಷನ್) ಬಂದರೆ ಮುಚ್ಚಿದ್ದಾರೆ. ಈಗ ಮತ್ತೊಂದು ಕಡೆಗೆ ಹೋಗಿ ನೋಡಬೇಕು. ಎಲ್ಲಿಯೂ ಇಲ್ಲವಂದರೆ ಆಟೋ ನಿಲ್ಲಿಸಬೇಕಷ್ಟೇ. ಇಂತಹ ಪರಿಸ್ಥಿತಿಯಿಂದ ಜೀವನಕ್ಕೆ ಬಹಳ ಕಷ್ಟವಾಗಿದೆ.
>
> –ಇಕ್ಬಲ್ ಅಹಮ್ಮದ್, ಆಟೋ ಚಾಲಕರು.

> ಆಟೋ ಎಲ್‌ಪಿಜಿ ಗ್ಯಾಸ್ ಮೊದಲಿನಂತೆ ಎಲ್ಲೆಡೆ ಸಿಗುತ್ತಿಲ್ಲ. ಅಭಾವ ಸೃಷ್ಟಿಯಾಗಿದೆ. ಒಂದೊಂದು ಕಡೆ ಸಿಕ್ಕರೂ ಒಂದೊಂದು ದಿನ ಒಂದೊಂದು ದರ ನಿಗದಿ ಮಾಡಲಾಗುತ್ತಿದೆ. ಪೂರೈಕೆ ಸಹಜವಾಗಿದ್ದಾಗ ಲೀಟರ್‌ಗೆ 53 ರೂ. ಇತ್ತು. ಬಳಿಕ 63 ರೂ. ಆಯಿತು. ನಂತರ 73 ರೂ., 83 ರೂ.ಗೆ ಏರಿಕೆಯಾಯಿತು. ಈಗ 88ರಿಂದ 90 ರೂ. ಆಗಿದೆ. ಹೀಗಾಗಿ ನಮ್ಮ ಪರಿಸ್ಥಿತಿ ಕಷ್ಟಕರವಾಗಿದೆ.
>
> –ಶಿವಕುಮಾರ್, ಆಟೋ ಚಾಲಕರು.

ಗ್ಯಾಸ್ ಟ್ರಬಲ್‌ನಿಂದ ತರಕಾರಿ ಬೆಲೆ ಇಳಿಕೆ

ಇಳಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ತರಕಾರಿ ಬೆಲೆ ಕಡಿಮೆಯಾಗಿದೆ ಎನ್ನುತ್ತಾರೆ ಇಲ್ಲಿಗೆ ತರಕಾರಿ ಮಾರಾಟಕ್ಕೆ ತಂದಿರುವ ರೈತರು.

ಬೆಳೆದ ತರಕಾರಿಗಳನ್ನು ಮಾರುಕಟ್ಟೆಗೆ ತಂದು ಮಾರಿದರೂ ಬೆಳೆದ ಖರ್ಚು ಕೂಡ ಸಿಗುತ್ತಿಲ್ಲ. ಇದರಿಂದ ಕಷ್ಟ ಆಗಿದೆ ಎಂದು ರೈತರು ಸಂಕಷ್ಟ ಹಂಚಿಕೊಂಡಿದ್ದಾರೆ. ಸಾಕಷ್ಟು ತರಕಾರಿ ಬೆಲೆ ಕಡಿಮೆಯಾಗಿದೆ ಎಂದು ರೈತ ರಮೇಶ್ ಬೇಸರ ವ್ಯಕ್ತಪಡಿಸಿದರು.

ರೈತ ಜಲೇಂದ್ರ ಮಾತನಾಡಿ, ಟೋಮೋಟೋ ಮಾರಾಟಕ್ಕೆ ತಂದಿದ್ದೇವೆ. ಕೇಳುವವರೇ ಇಲ್ಲ. ಹೋಟೆಲ್ ಬಾಗಲು ಹಾಕಿದ್ದೇವೆಂದು ಕಡಿಮೆ ಬೆಲೆಗೆ ಕೇಳುತ್ತಾರೆ. ಕೇರಳದಿಂದ ಈ ಮೊದಲಿನಂತೆ ವ್ಯಾಪಾರಸ್ಥರು ಇಲ್ಲಿಗೆ ಖರೀದಿಸಲು ಬರುತ್ತಿಲ್ಲ. ಇಲ್ಲಿ ಮಧ್ಯವರ್ತಿಗಳು ಜಾಸ್ತಿ ಇದ್ದು, ಅವರು ನಮ್ಮ ಬಳಿ ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆ ಮಾರಾಟ ಮಾಡಿಕೊಳ್ಳುತ್ತಾರೆ. ನಾವು ಇಲ್ಲಿ ಕಾದು ಕುಳಿತುಕೊಳ್ಳಲು ಸಾಧ್ಯವಾಗಲ್ಲ ಎಂದು ತಮ್ಮ ಅಳಲು ತೋಡಿಕೊಂಡರು.

ರೈತ ಸಾಗರ್ ಮಾತನಾಡಿ, ಟೊಮೆಟೊಗೆ ದರವೇ ಇಲ್ಲ. ಹೂಕೋಸು ಕೇಳುವವರೇ ಇಲ್ಲ. ತೆಂಗಿನ ಸಸಿ ಬುಡಕ್ಕೆ ಟೋಮೋಟೋ ಸುರಿದಿದ್ದೇವೆ. ಎಂಜಿ ರಸ್ತೆ ಮಾರುಕಟ್ಟೆಗೆ ತರಕಾರಿ ಪೂರೈಸುತ್ತೇವೆ. ಈಗ ಟೊಮೆಟೊ ಗೆ ಬೆಲೆಯೇ ಇಲ್ಲ. ಕ್ರೇಟ್ ಟೊಮೆಟೊ 500ರಿಂದ 600 ರೂ. ಬೆಲೆ ಇತ್ತು. ಸುಮಾರು 20ರಿಂದ 25 ದಿನಗಳಿಂದ ಟೊಮೆಟೊ ಬೆಲೆಯಲ್ಲಿ ಇಳಿಕೆಯಾಗಿದೆ. ಈಗ ಕ್ರೇಟ್ ಟೊಮೆಟೊ ಕೇವಲ 150ರಿಂದ 200 ರೂ.ಗೆ ಇಳಿದಿದೆ. ಒಂದು ಕ್ರೇಟ್‌ನಲ್ಲಿ 28 ಕೆಜಿ ಇರಲಿದೆ. ಹೋಟೆಲ್‌ಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾದ ಹಿನ್ನೆಲೆಯಲ್ಲಿ ಬಹುತೇಕ ಎಲ್ಲಾ ತರಕಾರಿ ಬೆಲೆಯಲ್ಲಿ ಕುಸಿತವಾಗಿದೆ. ಎಂಜಿ ರಸ್ತೆ ಮಾರುಕಟ್ಟೆಯಿಂದ ಕೇರಳ ಮತ್ತು ತಮಿಳುನಾಡು ವ್ಯಾಪಾರಸ್ಥರು ಬಂದು ಖರೀದಿ ಮಾಡುತ್ತಿದ್ದರು. ಆದರೆ ಈಗ ಅವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಇಂದು ಕೆಜಿ ಟೊಮೆಟೊ 10 ಇತ್ತು ಎಂದರು.

ಹೋಟೆಲ್ ಮುಚ್ಚಿದ ಪರಿಣಾಮ: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರಿನ ದೇವರಾಜ ಮಾರುಕಟ್ಟೆಯ ತರಕಾರಿ ವ್ಯಾಪಾಸ್ಥರೂ ಆದ ಎಪಿಎಂಸಿ ವರ್ತಕ ಇಬ್ರಾಹಿಂ ಇಬ್ಬು, ದೇವರಾಜ ಮಾರುಕಟ್ಟೆಯಲ್ಲಿ ಕೆಲ ತರಕಾರಿಗಳ ಬೆಲೆಯಲ್ಲಿ ಇಳಿಕೆಯಾಗಿದೆ. ಟೊಮೆಟೊ ಬೆಲೆ ಗಣನೀಯ ಇಳಿಕೆಯಾಗಿದೆ. ಗ್ಯಾಸ್ ಪೂರೈಕೆ ಸಮಸ್ಯೆ ಎದುರಾಗುವ ಮುನ್ನ ಕೆಜಿಗೆ 20 ರೂ. ಇದ್ದ ಟೋಮಾಟೋ ಬೆಲೆ ಈಗ 10 ರೂ.ಗೆ ಇಳಿದಿದೆ. ಎಲ್ಲೆಡೆ ಹೆಚ್ಚಿನ ಸಂಖ್ಯೆಯಲ್ಲಿ ಹೋಟೆಲ್‌ಗಳು ಮುಚ್ಚಿರುವುದು ಈ ರೀತಿ ಬೆಲೆ ಇಳಿಯಲು ಕಾರಣ. ಅಲ್ಲದೆ, ತಮಿಳುನಾಡು ಹಾಗೂ ಕೇರಳದಿಂದ ಹೋಟೆಲ್ ಉದ್ಯಮಿಗಳು ಎಪಿಎಂಸಿಗೆ ಭೇಟಿ ನೀಡಿ ಖರೀದಿ ಮಾಡುವುದು ಕಡಿಮೆಯಾಗಿದೆ ಎಂದು ಹೇಳಿದರು.

ಬೀನ್ಸ್ ಕೆಜಿಗೆ 50 ರೂ. ಇದ್ದು, ಒಂದು ವರ್ಷದಿಂದ ಇದೇ ಬೆಲೆ ಇದೆ. ಕ್ಯಾರೆಟ್ ಬೆಲೆಯಲ್ಲಿ ಇಳಿಕೆಯಾಗಿದ್ದು, ಇಂದು ಕೆಜಿಗೆ 20 ರೂ. ಇದೆ. ಈ ಹಿಂದೆ ಕೆಜಿಗೆ 35ರಿಂದ 40 ರೂ. ಇತ್ತು. ಬೀಟ್‌ರೂಟ್ ಕೆಜಿ 30 ರೂ. ಇದ್ದು, ಈ ಹಿಂದೆ 20 ರೂ. ಇತ್ತು. ಈಗ ಏರಿಕೆಯಾಗಿದೆ. ಎಲೆಕೋಸು ಕೆಜಿ 15 ರೂ. ಇದೆ. ಇದರ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದರು.

ನುಗ್ಗೆಕಾಯಿ ಬೆಲೆ ಇಳಿಕೆ: ಹಸಿಮೆಣಸಿನಕಾಯಿ ಒಂದು ವರ್ಷದಿಂದ ಕೆಜಿ 50 ರೂ. ಇದೆ. ಕೆಜಿ ನುಗ್ಗೆಕಾಯಿ 100ರಿಂದ 150 ರೂ. ಇತ್ತು. ಈಗ ಕೇವಲ 20 ರೂ. ಆಗಿದೆ. ಸೀಮೆಬದನೆಕಾಯಿ ಕೆಜಿ 20 ರೂ. ಇದೆ. ಮುಂಚೆ 12 ರೂ. ಇತ್ತು. ಹೂಕೋಸು ಕೆಜಿ 20 ರೂ. ಇದ್ದು, ಈ ಹಿಂದೆ 30 ರೂ. ಇತ್ತು. ಒಟ್ಟಾರೆ ಅನೇಕ ತರಕಾರಿ ಬೆಲೆಯಲ್ಲಿ ಕುಸಿತ ಉಂಟಾಗಿದೆ. ಸ್ಥಳೀಯವಾಗಿ ವಹಿವಾಟು ಬಹುತೇಕ ಸಹಜ ಎನ್ನಬಹುದು. ಆದರೆ ಹೊರಗಡೆಯಿಂದ ವರ್ತಕರು ಎಪಿಎಂಸಿಗೆ ಬರುತ್ತಿಲ್ಲ. ಮೊದಲು ನಾಲ್ಕು ಜನ ತಲಾ ಒಂದು ಲೋಡು ಖರೀದಿ ಮಾಡುತ್ತಿದ್ದರೆ, ಈಗ ನಾಲ್ಕು ಜನರು ಸೇರಿ ಒಂದು ಲೋಡು ಖರೀದಿ ಮಾಡುವಂತಾಗಿದೆ ಎಂದು ವಿವರಿಸಿದರು.

ಟೊಮೆಟೊ ಮತ್ತು ಕ್ಯಾರೆಟ್ ಬೆಲೆ ಗಣನೀಯವಾಗಿ ಇಳಿಕೆಯಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಟೊಮೆಟೊ ಹೊರಗೆ ಹೋಗುತ್ತಿತ್ತು. ಆದರೆ ಆ ರೀತಿ ಸನ್ನಿವೇಶ ಈಗ ಇಲ್ಲವಾಗಿದೆ. 6 ತಿಂಗಳಿಂದ ಈರುಳ್ಳಿ ಕೆಜಿ 19ರಿಂದ 20 ರೂ. ಇದೆ. ಆಲೂಗಡ್ಡೆ ಕೆಜಿ 16 ರೂ. ಇದ್ದು, ಮುಂಚೆ 25 ರೂ. ಇತ್ತು ಎಂದು ಹೇಳಿದರು.

ಭೂಮಿಯ ಡ್ರೋನ್ ಸರ್ವೆ

ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ದೊರೆತ ಬಳಿಕ ಉದ್ದೇಶಿತ ಬಡಾವಣೆ ನಿರ್ಮಾಣಕ್ಕೆ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. ಈ ಯೋಜನೆಗಾಗಿ ಈಗಾಗಲೇ ಬಜೆಟ್‌ನಲ್ಲಿ 470 ಕೋಟಿ ರೂ. ಮೀಸಲಿಡಲಾಗಿದೆ.

ಎರಡು ಹಂತದಲ್ಲಿ ನಿರ್ಮಾಣ: 50:50 ಅನುಪಾತದಡಿ ಹೊಸ ಬಡಾವಣೆ ನಿರ್ಮಾಣಕ್ಕಾಗಿ ಗುರುತಿಸಲಾಗಿರುವ 2113 ಎಕರೆ ಭೂಮಿಯಲ್ಲಿ ಈಗಾಗಲೇ 600 ಎಕರೆಯಷ್ಟು ಭೂಮಿ ನೀಡಲು ಭೂ ಮಾಲೀಕರು ಒಪ್ಪಿಗೆ ಸೂಚಿಸಿದ್ದಾರೆ. ಸರ್ವೆ ಮುಗಿದ ನಂತರ ಉಳಿದವರೂ ಭೂಮಿ ನೀಡಲು ಮುಂದೆ ಬರುವ ವಿಶ್ವಾಸ ಅಧಿಕಾರಿಗಳಲ್ಲಿದೆ. ಎಂಡಿಎ ಎರಡು ಹಂತಗಳಲ್ಲಿ ಬಡಾವಣೆ ನಿರ್ಮಾಣ ಯೋಜನೆಯನ್ನು ಕೈಗೊಳ್ಳುವ ಉದ್ದೇಶ ಹೊಂದಿದೆ.

15 ಸಾವಿರ ನಿವೇಶನ: ಉದ್ದೇಶಿತ 2113 ಎಕರೆ ಪ್ರದೇಶದಲ್ಲಿ ನಿಯಮಾ ನುಸಾರ ಸುಮಾರು 30 ಸಾವಿರ ನಿವೇ ಶನ ಅಭಿವೃದ್ಧಿಪಡಿಸಬಹುದಾಗಿದ್ದು, ಇದರಲ್ಲಿ ಶೇ.50ರಷ್ಟು ನಿವೇಶನಗಳನ್ನು ಎಂಡಿಎ ಪಡೆದು ಆಕಾಂಕ್ಷಿಗಳಿಗೆ ಹಂಚಿಕೆ ಮಾಡಲಿದೆ. ಉಳಿದ ಶೇ.50ರಷ್ಟು ನಿವೇಶನಗಳ ಮಾರಾಟದ ಹಕ್ಕು ಭೂ ಮಾಲೀಕರಿಗೆ ಸಿಗಲಿದೆ.

ಗುಡ್‌ವಿಲ್‌ಗಾಗಿ ಬೇಡಿಕೆಯಿಟ್ಟ ರೈತರು: ಹೊಸ ಬಡಾವಣೆಗೆ ಭೂಮಿ ನೀಡಲು ಎಕರೆಗೆ 10 ಲಕ್ಷ ರೂ. ಗುಡ್‌ವಿಲ್ (ಮುಂಗಡ) ನೀಡುವಂತೆ ರೈತರು ಬೇಡಿಕೆ ಇಟ್ಟಿದ್ದಾರೆ. ಬಡಾವಣೆ ನಿರ್ಮಾಣಕ್ಕಾಗಿ ಕನಿಷ್ಟ ಎರಡು ವರ್ಷ ಬೇಕಾಗಬಹುದು. ಅಲ್ಲಿಯುವರೆಗೆ ಜೀವನ ನಿರ್ವಹಣೆ ಕಷ್ಟವಾಗುವುದರಿಂದ ಗುಡ್‌ವಿಲ್ ರೂಪದಲ್ಲಿ ಹಣ ನೀಡುವಂತೆ ಕೋರಿದ್ದಾರೆ. ರೈತರ ಬೇಡಿಕೆಯನ್ನು ಎಂಡಿಎ, ಸರ್ಕಾರದ ಗಮನಕ್ಕೆ ತರಲು ಮುಂದಾಗಿದೆ. ಒಂದು ವೇಳೆ ರೈತರ ಬೇಡಿಕೆಯನ್ನು ಸರ್ಕಾರ ಪುರಸ್ಕರಿಸಿದರೆ ಎಂಡಿಎ ಎಕರೆಗೆ 10 ಲಕ್ಷ ರೂ. ಮುಂಗಡ ನೀಡಿ, ಯೋಜನೆಯನ್ನು ಕೈಗೆತ್ತಿಕೊಳ್ಳಲಿದೆ. ಡ್ರೋನ್ ಸರ್ವೆ ವೇಳೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಮಂಜು, ಕಾರ್ಯದರ್ಶಿ ಜಾನ್ಸನ್, ನಗರ ಯೋಜನಾ ಸದಸ್ಯ ಶಿವರಾಮ್, ಡ್ರೋನ್ ಸರ್ವೆ ಉಸ್ತುವಾರಿ ರಾಜಗುರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ವ್ಯವಸ್ಥಾಪಕರು, ವಿಶೇಷ ರಾಜಸ್ವ ನಿರೀಕ್ಷಕರು, ಸ್ಥಳೀಯ ಮುಖಂಡರು ಮತ್ತು ಜಮೀನಿನ ಮಾಲೀಕರು ಉಪಸ್ಥಿತರಿದ್ದರು.

> **ಡ್ರೋನ್ ಸರ್ವೆ ನಂತರ ಸರ್ಕಾರಕ್ಕೆ ವರದಿ**
>
> **ಹೊಸ ಬಡಾವಣೆ ನಿರ್ಮಿಸಲು ದೊಡ್ಡಮಾರಗೌಡನಹಳ್ಳಿ, ಕಮರವಳ್ಳಿ, ಬೊಮ್ಮೇನಹಳ್ಳಿ, ನಾಗವಾಲ ಗ್ರಾಮಗಳಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ 2113 ಎಕರೆ ಭೂಮಿ ಗುರುತಿಸಲಾಗಿದ್ದು, ಈ ಭೂಮಿ ಸರ್ವೆ ಕಾರ್ಯವನ್ನು ಡ್ರೋನ್ ಮೂಲಕ ನಡೆಸಲಾಗುತ್ತಿದೆ. ಒಂದು ವಾರ ಸರ್ವೆ ನಡೆಯಲಿದ್ದು, ಇದಕ್ಕೆ ಸಂಬಂಧಿಸಿದ 30 ಸಾವಿರ ಫೋಟೋ ಹಾಗೂ ಇನ್ನಿತರ ಮಾಹಿತಿ ಸಂಗ್ರಹಿಸಲಾಗುವುದು. ಸರ್ವೆ ಮುಗಿದ ನಂತರ ಅನುಮೋದನೆಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು.**
>
> **–ಕೆ.ಆರ್.ರಕ್ಷಿತ್, ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ**

ಬೈಕ್ ಟಚ್ ನೆಪ: ಚಾಕು ಇರಿದು ವ್ಯಕ್ತಿಯ ಬರ್ಬರ ಕೊಲೆ

ಬೆಂಗಳೂರು, ಏ.4: ಕ್ಷುಲ್ಲಕ ಕಾರಣಕ್ಕೆ ಯುವಕನ ಬರ್ಬರ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಬೆಂಗಳೂರಿನ ಜೆ.ಸಿ. ನಗರದ ಮುಖ್ಯರಸ್ತೆಯಲ್ಲಿ ನಡೆದಿದೆ. 22 ವರ್ಷದ ವಿಜಯ್ ಕೊಲೆಯಾದ ವ್ಯಕ್ತಿಯಾಗಿದ್ದು, ಮಧ್ಯಾಹ್ನ 12 ಗಂಟೆ ಸುಮಾರಿಗೆ ವಿಜಯ್‌ಗೆ ಚಾಕು ಇರಿದು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಆರೋಪಿಗಳಾದ ಕಿರಣ್ ಮತ್ತು ವಿನೋದ್ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿದಿದೆ.

ಸಿಎಂ ಸಿದ್ದರಾಮಯ್ಯ ಮಾಡಿರುವುದು ಬರೋಬ್ಬರಿ 5 ಲಕ್ಷ ಕೋಟಿ ಸಾಲ!



ಎಂಎಲ್ಸಿ ಸಿ.ಟಿ.ರವಿ ವಾಗ್ದಾಳಿ

ಬೆಂಗಳೂರು,ಏ.4(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತದಲ್ಲೇ ಮಾಡಿರುವ ಸಾಲ 5 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಒಟ್ಟು ಸಾಲ 8 ಲಕ್ಷ 32 ಸಾವಿರ ಕೋಟಿ ರೂ. ಇದೆ. ಇದರಲ್ಲಿ ಸಿದ್ದರಾಮಯ್ಯ ಮಾಡಿದ ಸಾಲ 5 ಲಕ್ಷ ಕೋಟಿ ರೂ.ಗೂ ಹೆಚ್ಚು, 2023–24ರಲ್ಲಿ 90,280 ಕೋಟಿ ರೂ., 2024–25ರಲ್ಲಿ ಒಂದು ಲಕ್ಷ 7 ಸಾವಿರ ಕೋಟಿ ರೂ., 2025–26ರಲ್ಲಿ ಒಂದು ಲಕ್ಷ 16 ಸಾವಿರ ಕೋಟಿ ರೂ., 2026–27ರಲ್ಲಿ ಒಂದು ಲಕ್ಷ 32 ಸಾವಿರ ಕೋಟಿ ರೂ. ಎಂದು ವಿವರ ನೀಡಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಯಾಗಿ 8 ವರ್ಷದಲ್ಲಿ ಮಾಡಿದ ಸಾಲ ಶೇ.60ರಷ್ಟು, ಜೆ.ಎಚ್. ಪಟೇಲ್, ಎಸ್.ಎಂ.ಕೃಷ್ಣ, ಧರ್ಮಸಿಂಗ್, ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್.ಯಡಿ ಯೂರಪ್ಪ, ಸದಾನಂದಗೌಡ, ಜಗ ದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಅವರ ಕಳೆದ 30 ವರ್ಷಗಳ ಆಡಳಿತಾ ವಧಿಯಲ್ಲಿ ಮಾಡಿದ ಒಟ್ಟು ಸಾಲ ಶೇ.40ರಷ್ಟು ಎಂಬ ವಿವರ ನೀಡಿದರು. ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹಗರಣ ಮೊತ್ತ 6 ಸಾವಿರ ಕೋಟಿ ರೂ., ಮುಡಾ ಹಗರಣ, ಡ್ರಗ್ಸ್ ಹಗರಣ, ರೈತರ ಆತ್ಮಹತ್ಯೆಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿ ಇರುವುದು ಒಳ್ಳೆಯ ಸುದ್ದಿಯೇ! ಸರ್ಕಾರಿ ನೌಕರರು, ಪ್ರಾಮಾಣಿಕ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದು, ಒಳ್ಳೆಯ ಸುದ್ದಿಯೇ!! ವಾಟರ್‌ಮನ್ ಸಂಬಳ ಇಲ್ಲದೆ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದು ಒಳ್ಳೆಯ ಸುದ್ದಿಯೇ, ಶಾಸಕರೊಬ್ಬರ ಭ್ರಷ್ಟಾಚಾರ ಕಿರುಕುಳಕ್ಕೆ ಬೇಸರಗೊಂಡು ಒಬ್ಬ ಸಬ್‌ಇನ್‌ಸ್ಪೆಕ್ಟರ್ ಆತ್ಮಹತ್ಯೆ ಮಾಡಿಕೊಂಡದ್ದು ಒಳ್ಳೆಯ ಸುದ್ದಿಯೇ. ಬಾಣಂತಿಯರು, ಹಸುಗೂಸುಗಳ ಸರಣಿ ಸಾವು, ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಸರಬರಾಜು ಇಲ್ಲದಿರುವುದು ಒಳ್ಳೆಯ ಸುದ್ದಿಗಳೇ. ಭ್ರಷ್ಟಾಚಾರ, ಬೆಲೆ ಏರಿಕೆ, ಆರ್‌ಸಿಬಿ ವಿಜಯೋತ್ಸವ ಆಚರಣೆಯಲ್ಲಿ ಕಾಲ್ತುಳಿತದಿಂದ 11 ಮಂದಿ ಅಮಾಯಕರ ಸಾವಿಗೆ ಕಾರಣವಾದಂತಹ ಕಾರಣಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸುದ್ದಿಯಲ್ಲಿ ಇತ್ತು. ಮುಖ್ಯಮಂತ್ರಿ ಮತ್ತು ಸಂಪುಟ ಸಚಿವರು ಮಾಡಿದ ಒಳ್ಳೆಯ ಕಾರ್ಯಗಳನ್ನು ಹೇಳಲಿ. ಉಪಚುನಾವಣೆ ಇರದಿದ್ದರೆ ವೈದ್ಯಕೀಯ ಕಾಲೇಜಿಗೆ ಅಡಿಗಲ್ಲೂ ಬೀಳುತ್ತಿರಲಿಲ್ಲ. 2014ರ ಚುನಾವಣೆಯಲ್ಲೇ ಬಾಗಲಕೋಟೆಗೆ ವೈದ್ಯ ಕೀಯ ಕಾಲೇಜು ನೀಡುವುದಾಗಿ ಭಾಷಣ ಮಾಡಿದ್ದು ನೆನಪಿದೆಯೇ ಎಂದರು.

ಶರಣ್ಯಗಾಗಿ ಶೋಧ ಕಾರ್ಯ ಮುಂದುವರಿಕೆ

ಗೋಪಿ ಕೂಡ ಕೊಡಗಿಗೆ ಬಂದಿದ್ದು, ಮಗಳು ಸುರಕ್ಷಿತವಾಗಿ ಬರುತ್ತಾಳೆ ಎಂಬ ವಿಶ್ವಾಸದಲ್ಲಿದ್ದಾರೆ. ರಕ್ಷಣಾ ತಂಡಗಳು ಮಗಳು ಶರಣ್ಯ ಅವರನ್ನು ಸುರಕ್ಷಿತವಾಗಿ ಕರೆತರುವಲ್ಲಿ ಸಫಲರಾಗುತ್ತಾರೆ ಎಂಬ ಭರವಸೆ ವ್ಯಕ್ತಪಡಿಸಿದರು.

ಕೇರಳದ ಕ್ಯಾಲಿಕಟ್‌ನ ನಾದಾಪುರಂ ನಿವಾಸಿ ಶರಣ್ಯ, ಅವಿವಾಹಿತೆ. ಕೊಚ್ಚಿನ್‌ನಲ್ಲಿ ಐ.ಟಿ ಉದ್ಯೋಗಿ. ಶರಣ್ಯ ಪರಿಸರ ಪ್ರೇಮಿ. ಈ ಹಿಂದೆ ಹಲವು ಕಡೆಗಳಲ್ಲಿ ಟ್ರೆಕ್ಕಿಂಗ್‌ಗೆ ತೆರಳಿದ್ದರು. ಆದರೆ, ಕೊಡಗಿನ ತಡಿಯಂಡಮೋಳ್ ಬೆಟ್ಟಕ್ಕೆ ಬರುವ ಬಗ್ಗೆ ಕುಟುಂಬಸ್ಥರಿಗೆ ಯಾವುದೇ ಮಾಹಿತಿ ನೀಡಿರಲಿಲ್ಲ ಎಂದು ಆಕೆಯ ಸಹೋದರ ಶ್ಯಾಮ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ತಂಡಗಳಿಂದ ಶೋಧ ಕಾರ್ಯ: ಅರಣ್ಯ ಇಲಾಖೆ ಡಿಎಫ್‌ಓ ಅಭಿಷೇಕ್ ನೇತೃತ್ವದಲ್ಲಿ ಒಂದು ತಂಡ ಬೆಟ್ಟದ ತಪ್ಪಲಿನಲ್ಲಿ ಥರ್ಮಲ್ ಡ್ರೋಣ್ ಹಾಗೂ ಸಾಮಾನ್ಯ ಡ್ರೋಣ್ ಮೂಲಕ ಶೋಧ ಕಾರ್ಯ ನಡೆಸಿತು. ಮೋಡ ಕವಿದ ವಾತಾವರಣ, ಮಂಜು ಮುಸುಕಿದ ಬೆಟ್ಟದ ಆಳವಾದ ಕಣಿವೆ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದು, ಯಾವುದೇ ಸುಳಿವು ಪತ್ತೆಯಾಗಿಲ್ಲ. ಭಾಗಮಂಡಲ ಮುಂಡ್ರೋಟು ಅರಣ್ಯ ಪ್ರದೇಶದಲ್ಲಿ ಕರ್ತವ್ಯದಲ್ಲಿರುವ ಒಟ್ಟು 18 ಅರಣ್ಯ ಸಿಬ್ಬಂದಿ ಒಳಗೊಂಡ 3 ತಂಡಗಳನ್ನು ಕೂಡ ಶೋಧ ಕಾರ್ಯಾಚರಣೆಗೆ ಬಳಸಿಕೊಳ್ಳಲಾಯಿತು. ಈ ತಂಡ ಮುಂಡ್ರೋಟು ಅರಣ್ಯದೊಳಗಿಂದ ತಡಿಯಂಡಮೋಳ್ ಬೆಟ್ಟ ವ್ಯಾಪ್ತಿ ಉದ್ದಕ್ಕೂ ಶೋಧ ಕಾರ್ಯಾ ಚರಣೆ ನಡೆಸಿದರು.

ನಕ್ಸಲ್ ದಳದಿಂದ ಶೋಧ: ಜಿಲ್ಲಾ ಪೊಲೀಸ್ ಇಲಾಖೆ ಶರಣ್ಯ ನಾಪತ್ತೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಶೋಧ ಕಾರ್ಯಕ್ಕೆ ನಕ್ಸಲ್ ನಿಗ್ರಹ ದಳವನ್ನು ನಿಯೋಜಿಸಿದೆ. ಕುಟ್ಟ, ವಿರಾಜಪೇಟೆ ಆರ್ಜಿ ಗ್ರಾಮದಲ್ಲಿರುವ ಎಎನ್‌ಎಫ್ ಸಿಬ್ಬಂದಿ ಈ ಕಾರ್ಯದಲ್ಲಿ ತೊಡಗಿದ್ದಾರೆ. ಈ ತಂಡ ಕೊಡಗು–ಕೇರಳ ಗಡಿ ಹಂಚಿಕೆಯಾಗಿರುವ ತಡಿಯಂಡಮೋಳ್ ಬೆಟ್ಟ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಅನುಭವ ಹೊಂದಿದ್ದು, ಇಲ್ಲಿನ ಎಲ್ಲಾ ಪ್ರದೇಶಗಳ ಬಗ್ಗೆ ಸೂಕ್ಷ್ಮ ಅರಿವನ್ನು ಕೂಡ ಹೊಂದಿದೆ.

ಗ್ರಾಮಸ್ಥರಿಂದ ದೈವದ ಮೊರೆ: ಈ ನಡುವೆ ಕಕ್ಕಬ್ಬೆ ಯುವಕಪಾಡಿ ಗ್ರಾಮದ ಬೆಟ್ಟ ಪ್ರದೇಶದಲ್ಲಿ ವಾಸಿಸುವ ಕುಡಿಯ ಜನಾಂಗದವರು ಶರಣ್ಯ ಪತ್ತೆಗಾಗಿ ತಮ್ಮ ಕುಲ ದೈವದ ಮೊರೆ ಹೋಗಿದ್ದಾರೆ. ತಮ್ಮ ದೈವ ನೆಲದಲ್ಲಿ ಮಲೆ ಬೀರ, ಮಲೆ ತಮ್ಮಚ್ಚ ದೇವರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಶರಣ್ಯ ಶೀಘ್ರ ಸುರಕ್ಷಿತವಾಗಿ ಮರಳಬೇಕು. ಆಕೆಯನ್ನು ಹುಡುಕಲು ಕಾಡಿಗೆ ತೆರಳಿದ ಗ್ರಾಮಸ್ಥರಿಗೆ ಆನೆ, ಕಾಡು ಕೋಣ, ಹಾವು ಸೇರಿದಂತೆ ಯಾವುದೇ ವನ್ಯ ಜೀವಿಗಳಿಂದ ತೊಂದರೆ ಎದುರಾಗಬಾರದು. ಮುಂದಿನ ಹಬ್ಬದ ವೇಳೆಗೆ ದೈವಕ್ಕೆ ಹರಕೆ ನೀಡುವುದಾಗಿ ಕುಡಿಯ ಜನಾಂಗದ ಹಿರಿಯರು ಪ್ರಾರ್ಥಿಸಿ ತೂಗು ದೀಪಕ್ಕೆ ಅಕ್ಕಿ ಹಾಕಿ ಬೇಡಿದರು.

ದಾರಿ ತಪ್ಪಲು ಸಾಧ್ಯವೇ ಇಲ್ಲದ, ಅಂತಹ ಕಷ್ಟಕರವಲ್ಲದ ಚಾರಣ ಮಾರ್ಗವಾಗಿರುವ ತಡಿಯಂಡಮೋಳ್‌ನಲ್ಲಿ 3 ದಿನಗಳಿಂದ ನಾಪತ್ತೆಯಾಗಿರುವ ಶರಣ್ಯ ಬಗ್ಗೆ ಇದೀಗ ಕುತೂಹಲ ತೀವ್ರಗೊಂಡಿದೆ.

ಜಯಲಕ್ಷ್ಮೀ ವಿಲಾಸ ಅರಮನೆ ಸಂಬಂಧ ಯಾವುದೇ ಒಪ್ಪಂದವಾಗಿಲ್ಲ; ಕುಲಸಚಿವರ ಸ್ಪಷ್ಟನೆಗೆ ಸಿಂಡಿಕೇಟ್ ಸದಸ್ಯ ಟಿ.ಆರ್.ಚಂದ್ರಶೇಖರ್ ಪ್ರತಿಕ್ರಿಯೆ

ಕಾನೂನಿನ ಅಜ್ಞಾನ ಕ್ಷಮಾರ್ಹವಲ್ಲ; ವಿವಿ ಆಸ್ತಿ ಸಂಬಂಧಿತ ನಿರ್ಧಾರ ಪಾರದರ್ಶಕವಾಗಿರಲಿ

ಮೈಸೂರು, ಏ.4– ಮೈಸೂರು ಮಾನಸಗಂಗೋತ್ರಿಯ ಜಯಲಕ್ಷ್ಮೀವಿಲಾಸ ಅರಮನೆ ಕಟ್ಟಡ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಖಾಸಗಿ ಸಂಸ್ಥೆ ನಡುವೆ ಯಾವುದೇ ಒಪ್ಪಂದವಾಗಿಲ್ಲ ಎಂಬ ವಿವಿಯ ಕುಲಸಚಿವರ ಸ್ಪಷ್ಟನೆಗೆ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್. ಚಂದ್ರಶೇಖರ್ ಶನಿವಾರ ಪ್ರತಿಕ್ರಿಯೆ ನೀಡಿದ್ದಾರೆ.

ಜಯಲಕ್ಷ್ಮೀವಿಲಾಸ ಅರಮನೆ ವಿಚಾರವಾಗಿ ವಿವಿಯ ಕುಲಸಚಿವರಾದ ಎಂ.ಕೆ.ಸವಿತಾ ಅವರು ಏ.2ರಂದು ನೀಡಿರುವ ಸ್ಪಷ್ಟನೆ ಪತ್ರಿಕೆಗಳಲ್ಲಿ ವರದಿಯಾಗಿದ್ದು, ಅದನ್ನು ನಾನು ಗಮನಿಸಿದ್ದೇನೆ. ಅವರು ಪತ್ರದಲ್ಲಿ ನನ್ನಿಂದ ಸ್ಪಷ್ಟೀಕರಣ ಕೇಳಿರುವ ಹಿನ್ನೆಲೆಯಲ್ಲಿ ಕೆಲ ಅಂಶಗಳನ್ನು ಸ್ಪಷ್ಟಪಡಿಸುತ್ತಿದ್ದೇನೆ. ಜಯಲಕ್ಷ್ಮೀ ವಿಲಾಸ ಅರಮನೆಯನ್ನು ಖಾಸಗಿ ವ್ಯಕ್ತಿಗಳಿಗೆ ದೀರ್ಘಾವಧಿಗೆ ಉಚಿತ ಲೀಸ್‌ಗೆ ಎಂಓಯು ಮೂಲಕ ನೀಡುವ ಪ್ರಸ್ತಾವನೆ ವಿಶ್ವವಿದ್ಯಾನಿಲಯದ ಐತಿಹಾಸಿಕ ಪರಂಪರೆ, ಸಾರ್ವಜನಿಕ ಆಸ್ತಿ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ನೇರವಾಗಿ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ಮತ್ತು ಮಹತ್ವದ ವಿಷಯವಾಗಿದೆ. ಹೀಗಾಗಿ, ಸಿಂಡಿಕೇಟ್ ಸದಸ್ಯನಾಗಿ ಕಾನೂನುಬದ್ಧ ಪ್ರಕ್ರಿಯೆಗಳು, ಆಡಳಿತಾತ್ಮಕ ಪಾರದರ್ಶಕತೆ ಮತ್ತು ವಿಶ್ವವಿದ್ಯಾನಿಲಯ ಕಾಯ್ದೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯವನ್ನು ಒತ್ತಿಹೇಳುವುದು ನನ್ನ ಕರ್ತವ್ಯವಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 –ಸೆಕ್ಷನ್ 14ರ ಪ್ರಕಾರ ಕುಲಸಚಿವರು ವಿಶ್ವವಿದ್ಯಾನಿಲಯದ ದಾಖಲೆಗಳ ಸಂರಕ್ಷಕರಾಗಿದ್ದು, ಸಿಂಡಿಕೇಟ್ ಸಭೆಯ ಅಜೆಂಡಾ, ದಾಖಲೆಗಳು ಮತ್ತು ಕಾರ್ಯವಿಧಾನಗಳನ್ನು ನಿಯಮಾನುಸಾರ ಸಿದ್ಧಪಡಿಸಿ ಮಂಡಿಸುವುದು ಅವರ ಕಾನೂನು




ಬದ್ಧ ಕರ್ತವ್ಯ. ಆದರೆ 2026ರ ಮಾರ್ಚ್ 13ರ ಸಿಂಡಿಕೇಟ್ ಸಭೆಯಲ್ಲಿ ಜಯಲಕ್ಷ್ಮೀ ವಿಲಾಸ ಅರಮನೆಯನ್ನು 40 ವರ್ಷಗಳ ಉಚಿತ ಲೀಸ್ ಮೂಲಕ ಖಾಸಗಿ ವ್ಯಕ್ತಿಗಳಿಗೆ ನೀಡುವಂತಹ ಅತ್ಯಂತ ಮಹತ್ವದ ವಿಷಯವನ್ನು, ಯಾವುದೇ ಪೂರ್ವ ಸೂಚನೆ, ಲಿಖಿತ ಅಜೆಂಡಾ ಅಥವಾ ಸಂಬಂಧಿತ ದಾಖಲೆಗಳಿಲ್ಲದೆ ಟೇಬಲ್ ಅಜೆಂಡಾ ರೂಪದಲ್ಲಿ ಮಂಡಿಸಿ, ನಿರ್ಧಾರ ಕೈಗೊಳ್ಳಲಾಗಿದೆ. ಇದು ಆಡಳಿತಾತ್ಮಕ ಪಾರದರ್ಶಕತೆ ಮತ್ತು ನಿಯಮಾತ್ಮಕ ಪ್ರಕ್ರಿಯೆಗಳ ವಿರುದ್ಧವಾಗಿದೆ.

ಸದರಿ ಸಭೆಯಲ್ಲಿ ಸದರಿ ವಿಷಯದ ಚರ್ಚೆಯಲ್ಲಿ ನಾನು ಮಾತ್ರ ಸ್ಪಷ್ಟವಾಗಿ ವಿರೋಧ ವ್ಯಕ್ತಪಡಿಸಿದ್ದೇನೆ ಎಂಬುದು ಸಭೆಯ ದಾಖಲಾತಿಗಳಿಂದಲೇ ಸ್ಪಷ್ಟವಾಗುತ್ತದೆ. ಮಾ.27ರ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಎಂಓಯು ಪರಿಶೀಲನೆಗಾಗಿ ನನಗೆ ನೀಡಲು ನಿರಾಕರಿಸಲಾಯಿತು. ಆದರೆ ಅದೇ ವೇಳೆ ಇತರೆ ಸದಸ್ಯರಿಗೆ ನೀಡಲಾಗಿದೆ ಎಂದು ಸಭೆಯಲ್ಲಿಯೇ ಘೋಷಿಸಲಾಗಿದೆ. ವಿವಿ ಆಸ್ತಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಎಲ್ಲಾ ಸದಸ್ಯರಿಗೆ ಸಮಾನವಾಗಿ ದಾಖಲೆಗಳ ಕಲ್ಪಿಸುವುದು ಆಡಳಿತಾತ್ಮಕವಾಗಿ ಕಡ್ಡಾಯವಾಗಿದೆ.

ಸಾಮಾನ್ಯ ಆಡಳಿತಾತ್ಮಕ ಕ್ರಮದ ಪ್ರಕಾರ ಯಾವುದೇ ಎಂಓಯು ಕುಲಸಚಿವರ ಅನುಮತಿಯೊಂದಿಗೆ ಮಾತ್ರ ತಯಾರಾಗಿರುತ್ತದೆ. ಒಂದು ವೇಳೆ ಅದು ಕೇವಲ ಕುಲಪತಿಯವರಿಂದ ಮಾತ್ರ ತಯಾರಾಗಿದ್ದರೆ, ಅದು ಕೂಡ ಆಡಳಿತಾತ್ಮಕವಾಗಿ ಗಂಭೀರ ವಿಷಯವಾಗುತ್ತದೆ. ಹಾಗಾಗಿದ್ದರೆ ನೀವು ಅದರ ಬಗ್ಗೆ ಸಭೆಯಲ್ಲಿ ಸ್ಪಷ್ಟವಾಗಿ ವಿರೋಧ ವ್ಯಕ್ತಪಡಿಸುವ ಅವಕಾಶವಿತ್ತು. ಆದರೆ ಅಂತಹ ವಿರೋಧ ನಿಮ್ಮಿಂದ ದಾಖಲಾಗದಿರುವುದರಿಂದ, ಸದರಿ ಎಂಓಯು ಕುಲಸಚಿವರ ಆಡಳಿತಾತ್ಮಕ ಅನುಮತಿಯೊಂದಿಗೆ ಸಿದ್ಧಪಡಿಸಲಾಗಿದೆ ಎಂಬ ಅಭಿಪ್ರಾಯ ಮೂಡುವುದು ಸಹಜವಾಗಿದೆ.



ಎಂ.ಕೆ.ಸವಿತಾ



ಡಾ.ಚಂದ್ರಶೇಖರ್

> “ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ, 2000, ಸೆಕ್ಷನ್ 14ರ ಪ್ರಕಾರ ರಿಜಿಸ್ಟ್ರಾರ್ ವಿಶ್ವವಿದ್ಯಾಲಯದ ದಾಖಲೆಗಳ ಕಸ್ಟೋಡಿಯನ್ ಆಗಿರುತ್ತಾರೆ. ಸೆಕ್ಷನ್ 29–ವಿಶ್ವವಿದ್ಯಾಲಯದ ಆಸ್ತಿಗೆ ಸಂಬಂಧಿಸಿದಂತೆ ಸಿಂಡಿಕೇಟ್‌ಗೆ ಅಧಿಕಾರಗಳಿವೆ. ಇದರನ್ವಯ ವಿಶ್ವವಿದ್ಯಾನಿಲಯದ ಆಸ್ತಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಸಂಪೂರ್ಣ ಪಾರದರ್ಶಕತೆ ಮತ್ತು ಕಾನೂನುಬದ್ಧ ಪ್ರಕ್ರಿಯೆಗಳ ಅನುಸರಣೆ ಅತ್ಯಂತ ಅವಶ್ಯಕವಾಗಿದೆ. ಈ ಸಂದರ್ಭದಲ್ಲಿ ‘ಕಾನೂನಿನ ಅಜ್ಞಾನವು ಕ್ಷಮಾರ್ಹವಲ್ಲ(Ignorance of Law is Not an Excuse)’ ಎಂಬ ಮೂಲಭೂತ ಕಾನೂನು ತತ್ವವೂ ಈ ಎಲ್ಲಾ ಬೆಳವಣಿಗೆಗೆ ಅನ್ವಯಿಸುತ್ತದೆ.
> –ಡಾ.ಟಿ.ಆರ್.ಚಂದ್ರಶೇಖರ್, ಸಿಂಡಿಕೇಟ್ ಸದಸ್ಯ

ಸಾಮಾನ್ಯ ಆಡಳಿತಾತ್ಮಕ ಪದ್ಧತಿಯ ಪ್ರಕಾರ ಹಿಂದಿನ ಸಭೆಯ ನಡಾವಳಿಗಳನ್ನು ನಂತರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು ಕಡ್ಡಾಯವಾಗಿದೆ. ಆದರೆ 13.03.2026ರ ಸಭೆಯ ನಡಾವಳಿಗಳನ್ನು 27.03.2026ರ ಸಭೆಯಲ್ಲಿ ಮಂಡಿಸದಿರುವುದು ಆಡಳಿತಾತ್ಮಕವಾಗಿ ಗಂಭೀರ ಪ್ರಶ್ನೆಗಳಿಗೆ ಕಾರಣವಾಗುತ್ತದೆ. ವಿಶೇಷವಾಗಿ, ಆ ನಡಾವಳಿಯಲ್ಲಿ ಜಯಲಕ್ಷ್ಮೀ ವಿಲಾಸ ಅರಮನೆಯನ್ನು ಖಾಸಗಿ ವ್ಯಕ್ತಿಗಳಿಗೆ ಉಚಿತವಾಗಿ ನೀಡುವ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುವ ವಿಷಯ ದಾಖಲಾಗಿರುವ ಹಿನ್ನೆಲೆಯಲ್ಲಿ, ಅದನ್ನು ಮಂಡಿಸದಿರುವುದು ಪ್ರಶ್ನಾರ್ಥಕ ಮಾತ್ರವಲ್ಲದೆ ಅದನ್ನು ಮಂಡಿಸಿದರೆ ಸಾರ್ವಜನಿಕವಾಗಿ ಬಹಿರಂಗವಾಗುತ್ತದೆ ಎಂಬ ಕಾರಣದಿಂದ ಉದ್ದೇಶಪೂರಕವಾಗಿ ಮಂಡಿಸಲಾಗಿಲ್ಲ ಎಂಬ ಅಭಿಪ್ರಾಯ ಮೂಡಿಸುತ್ತಿದೆ.

ಈ ವಿಷಯದಲ್ಲಿ ನಾನು ವ್ಯಕ್ತಪಡಿಸಿರುವ ಪ್ರಶ್ನೆಗಳು ಅಥವಾ ವಿರೋಧಗಳು ವ್ಯಕ್ತಿಗತ ಉದ್ದೇಶದಿಂದ ಕೂಡಿಲ್ಲ. ವಿಶ್ವವಿದ್ಯಾನಿಲಯದ ಐತಿಹಾಸಿಕ ಆಸ್ತಿಯನ್ನು ಸಂರಕ್ಷಿಸುವುದು, ಆಡಳಿತಾತ್ಮಕ ಪಾರದರ್ಶಕತೆ ಕಾಪಾಡುವುದು, ವಿವಿ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಬೇಕೆಂಬ ಸಾರ್ವಜನಿಕ ಹಿತಾಸಕ್ತಿ ಉದ್ದೇಶದಿಂದ ಮಾತ್ರ ವ್ಯಕ್ತಪಡಿಸಿದ್ದೇನೆ. ಆದಾಗ್ಯೂ ಕುಲಪತಿ ಅವರಿಗೆ ಸದರಿ ಪ್ರಸ್ತಾವನೆಯು ತೀರಾ ಅವಶ್ಯಕತೆ ಇದೆ ಎಂದಾದರೆ ತಾವು ಜಯಲಕ್ಷ್ಮೀ ವಿಲಾಸ ಅರಮನೆಗೆ ಸಂಬಂಧಿಸಿದ ಈ ವಿಷಯದಲ್ಲಿ ಸಂಪೂರ್ಣ ದಾಖಲೆ, ಪ್ರಕ್ರಿಯೆಗಳು ಮತ್ತು ವಿವರಗಳನ್ನು ವಿಶ್ವವಿದ್ಯಾನಿಲಯ ಕಾಯ್ದೆ ಹಾಗೂ ನಿಯಮಗಳ ಪ್ರಕಾರ ಸಿಂಡಿಕೇಟ್ ಮುಂದೆ ಮಂಡಿಸುವಂತೆ ಮತ್ತೊಮ್ಮೆ ವಿನಂತಿಸುತ್ತೇನೆ. ಹಾಗೆಯೇ ನಿಮ್ಮ ಪತ್ರವನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ, ನನ್ನ ಈ ಸ್ಪಷ್ಟೀಕರಣವನ್ನೂ ಸಾರ್ವಜನಿಕ ದಾಖಲೆಗಾಗಿ ಮಾಧ್ಯಮಗಳಿಗೆ ತಲುಪಿಸುವಂತೆ ವಿನಂತಿಸುತ್ತೇನೆ. ನಿಯಮ ಅನುಸರಿಸದಿದ್ದರೆ ಈ ವಿಷಯವನ್ನು ಮಾನ್ಯ ಕುಲಾಧಿಪತಿಗಳು, ಸರ್ಕಾರ ಮತ್ತು ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಚಂದ್ರಶೇಖರ್ ಪತ್ರದಲ್ಲಿ ತಿಳಿಸಿದ್ದಾರೆ.

ಏ.7, ಶರಣ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ

ಮೈಸೂರು, ಏ.4(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ಏ.7ರಂದು ಸಂಜೆ 5ಗಂಟೆಗೆ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶಿವರಾತ್ರಿ ರಾಜೇಂದ್ರ ಸಭಾಂಗಣದಲ್ಲಿ ಶರಣ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ನಗರ ಘಟಕದ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಮಲಮ್ಮ ಮತ್ತು ಜಿ.ಎ.ಶಿವಲಿಂಗಯ್ಯ ಶರಣ ದತ್ತಿ ಪ್ರಶಸ್ತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್, ಹಿರಿಯ ಸಾಹಿತಿ ಗುಲ್ಬರ್ಗದ ಪ್ರೊ. ಕಲ್ಯಾಣರಾವ ಜಿ. ಪಾಟೀಲ್, ವಚನ ಸಾಹಿತ್ಯ ಸಂಶೋಧನೆಯಲ್ಲಿ ಪಿಎಚ್.ಡಿ ಪಡೆದಿರುವ ಬೆಂಗಳೂರು ಗ್ರಾಮಾಂತರದ ಡಾ.ಎಸ್.ದೇವಿಕಾ ಮತ್ತು ಹಾವೇರಿಯ ಡಾ.ಕಾಂತೇಶರೆಡ್ಡಿ ಗೋಡಿಹಾಳ ಅವರಿಗೆ ಪ್ರದಾನ ಮಾಡಲಾಗುವುದು ಎಂದರು.

ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರೊ.ಬಿ.ಜಯಪ್ರಕಾಶ್‌ಗೌಡ, ಡಾ.ಸಿ.ಸೋಮಶೇಖರ್, ಪ್ರೊ.ಜಿ.ಎ. ಶಿವಲಿಂಗಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಹೆಳವರಹುಂಡಿ ಸಿದ್ದಪ್ಪ ನಂದೀಶ್, ಶೋಭಾರಾಣಿ ಜಯಪ್ರಕಾಶ್, ಡಾ.ಲೋಕೇಶಪ್ಪ, ಡಾ.ಮುದ್ದು ಮಲ್ಲೇಶ್ ಉಪಸ್ಥಿತರಿದ್ದರು.

ಬ್ಯಾಂಕ್ ಲಾಕರ್‌ನಿಂದ ಮನೆಗೆ ಒಯ್ಯುತ್ತಿದ್ದ ಮಹಿಳೆಯಿಂದ

18 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರಲ್ಲಿ ವ್ಯಾಪಕವಾಗಿದೆ ಖದೀಮರ ಹಾವಳಿ



ಮೈಸೂರು, ಏ.4(ಬಿಎಲ್‌ಯು)– ಮಹಿಳೆಯೊಬ್ಬರು ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣವನ್ನು ಮನೆಗೆ ತೆಗೆದುಕೊಂಡು ಹೋಗುವ ವೇಳೆ ಖದೀಮರು ಎಗರಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ರಾಮಕೃಷ್ಣನಗರದ ನಿವಾಸಿ ಹೇಮಲತಾ ಅವರು ಸುಮಾರು 18 ಲಕ್ಷ ಮೌಲ್ಯದ 262 ಗ್ರಾಂ ಚಿನ್ನಾಭರಣ ಕಳೆದುಕೊಂಡವರು. ನಗರ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುವಾಗ ಇಲ್ಲವೇ ಬಸ್‌ಗಾಗಿ ತಂಗುದಾಣದಲ್ಲಿ ಕಾದು ಕುಳಿತಿದ್ದಾಗ ಖದೀಮರು ಚಿನ್ನಾಭರಣ ಕಳವು ಮಾಡಿದ್ದಾರೆ.

ಹೇಮಲತಾ ಅವರು ನಗರದ ಬಲ್ಲಾಳ್ ವೃತ್ತ (ಅಶೋಕ ವೃತ್ತ)ದ ಕೆನರಾ ಬ್ಯಾಂಕ್‌ನ ಲಾಕರ್‌ನಲ್ಲಿ ಇಟ್ಟಿದ್ದ ಚಿನ್ನಾಭರಣವನ್ನು ಗುರುವಾರ ತೆಗೆದುಕೊಂಡು ಮನೆಗೆ ವಾಪಸ್ಸಾಗಲು ಸುಮಾರು 45 ನಿಮಿಷ ಬಲ್ಲಾಳ್ ವೃತ್ತದ ತಂಗುದಾಣದಲ್ಲಿ ಕಾದು ಕುಳಿತಿದ್ದಾರೆ. ಮಧ್ಯಾಹ್ನ 2.30ಕ್ಕೆ ಬಂದ ಬಸ್ ಹತ್ತಿ, ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ಪರಮಹಂಸರ ವೃತ್ತದಲ್ಲಿ ಇಳಿದಿದ್ದಾರೆ. ಆ ವೇಳೆ ತಮ್ಮ ಬ್ಯಾಗ್ ಪರಿಶೀಲಿಸಿದಾಗ ಜಿಪ್ ತೆರೆದು ಅದರಲ್ಲಿದ್ದ ಚಿನ್ನಾಭರಣ ಕಳವು ಮಾಡಿರುವುದು ತಿಳಿದಿದೆ. ಈ ಸಂಬಂಧ ಹೇಮಲತಾ ಅವರು ನೀಡಿರುವ ದೂರಿನನ್ವಯ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಬ್ಯಾಂಕ್‌ನ ಆವರಣ ಹಾಗೂ ಬಲ್ಲಾಳ್ ವೃತ್ತದ ತಂಗುದಾಣದ ಬಳಿಯ ಆಸುಪಾಸಿನಲ್ಲಿರುವ ಸಿಸಿಟಿವಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸಿ, ಖದೀಮರ ಪತ್ತೆಗೆ ಬಲೆ ಬೀಸಿದ್ದಾರೆ.

ಹೊಂಚು ಹಾಕಿ ಸಂಚು ಹೂಡುತ್ತಾರೆ: ಒಂಟಿ ಮಹಿಳೆಯರು, ಹಿರಿಯರು ಬ್ಯಾಂಕ್ ಹಾಗೂ ಎಟಿಎಂಗಳಿಗೆ ಹೋಗಿ ಬರುವುದನ್ನು ಹೊಂಚು ಹಾಕಿ ಗಮನಿಸುವ ಖದೀಮರು, ನಂತರ ಅವರನ್ನು ಶೋಧಿಸಲು ಸಂಚು ರೂಪಿಸುತ್ತಾರೆ. ಅದರಲ್ಲೂ ರಶ್ ಇರುವ ಬಸ್‌ಗಳಲ್ಲಿ ನಿರ್ಭಯವಾಗಿ ಕೈಚಳಕ ತೋರುತ್ತಾರೆ. ಕ್ಷಣಾರ್ಧದಲ್ಲಿ ಬ್ಯಾಗ್ ಶೋಧಿಸಿ, ಮೌಲ್ಯಯುತ ವಸ್ತುಗಳನ್ನು ಎಗರಿಸಿ, ಮುಂದಿನ ಸ್ಟಾಪ್‌ನಲ್ಲಿ ಇಳಿದು ಪರಾರಿಯಾಗುತ್ತಾರೆ. ಅದರಲ್ಲೂ ಮಹಿಳಾ ದುಷ್ಕರ್ಮಿಗಳೇ ಹೆಚ್ಚಾಗಿ ಬಸ್‌ಗಳಲ್ಲಿ ಕಳ್ಳತನಕ್ಕಿಳಿದಿದ್ದಾರೆ. ಬಸ್ ನಿಲ್ದಾಣಗಳಲ್ಲಿ, ಬಸ್ ಹತ್ತುವಾಗ ಹಾಗೂ ಪ್ರಯಾಣಿಸುವಾಗ ಚಿನ್ನದ ಸರವನ್ನು ಕಳ್ಳತನ ಮಾಡಿರುವ ಸಾಕಷ್ಟು ಪ್ರಕರಣಗಳಿವೆ. ಈ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು ಎಂದು ಪೊಲೀಸರು ತಿಳಿಸಿದ್ದಾರೆ.

ಇರಾನ್ ಬಾಬ್ ಅಲ್–ಮಂಡೇಬ್ ಜಲಸಂಧಿ ಬಂದ್ ಮಾಡುವ ಸುಳಿವು!



ಟೆಹ್ರಾನ್: ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಹೋರಾಡುತ್ತಿರುವ ಇರಾನ್, ಹಾರ್ಮುಜ್ ಜಲಸಂಧಿಯನ್ನು ನಿರ್ಬಂಧಿಸುವ ಮೂಲಕ ಪಶ್ಚಿಮ ಏಷ್ಯಾಗೆ ಭಾರಿ ಪೆಟ್ಟು ನೀಡಿದೆ.

ಇದೀಗ ತನ್ನ ವಿರೋಧಿಗಳ ಮೇಲೆ ಒತ್ತಡ ಹೆಚ್ಚಿಸಲು ಮತ್ತೊಂದು ಜಲ ಸಂಧಿ ಬಂದ್ ಮಾಡುವ ಬಗ್ಗೆ ಸುಳಿವು ನೀಡಿದೆ.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ಅವರು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಮಾಡಲಾದ ಪೋಸ್ಟ್‌ನಲ್ಲಿ ಜಾಗತಿಕ ಆರ್ಥಿಕತೆಯ ಜೀವನಾಡಿ ಬಾಬ್ ಅಲ್–ಮಂಡೇಬ್ ಜಲಸಂಧಿಯನ್ನು ಬಂದ್ ಮಾಡುವ ಸುಳಿವು ನೀಡಿದ್ದಾರೆ.

ಹಾರ್ಮುಜ್ ಜಲಸಂಧಿಯನ್ನು ನಿರ್ಬಂಧಿಸಿರುವುದರಿಂದ ಅಂತರರಾಷ್ಟ್ರೀಯ ಸಾಗಣೆ ಮೇಲೆ ತೀವ್ರ ಆರ್ಥಿಕ ಮತ್ತು ಲಾಜಿಸ್ಟಿಕ್ ಒತ್ತಡ ಬೀರುತ್ತಿರುವುದರಿಂದ ಅವರಈ ಹೇಳಿಕೆ ಮತ್ತಷ್ಟು ಆತಂಕ ಸೃಷ್ಟಿಸಿದೆ. ಜಾಗತಿಕ ಪೂರೈಕೆ ಸರಪಳಿಯನ್ನು ದುರ್ಬಲಗೊಳಿಸುವ ಬಗ್ಗೆ ಪಣತೊಟ್ಟ ಗಾಲಿಬಾಫ್, ಈ ಮಾರ್ಗದ ಮೇಲೆ ವಿಶ್ವದ ಅವಲಂಬನೆಯ ವ್ಯಾಪ್ತಿಯನ್ನು ಪ್ರಶ್ನಿಸಿದರು. ಜಾಗತಿಕ ತೈಲ, ಎಲ್‌ಎನ್‌ಜಿ, ಗೋಧಿ, ಅಕ್ಕಿ ಮತ್ತು ರಸಗೊಬ್ಬರ ಸಾಗಣೆಗಳಲ್ಲಿ ಎಷ್ಟು ಪಾಲು ಬಾಬ್ ಅಲ್–ಮಂಡೇಬ್ ಜಲಸಂಧಿ ಮೂಲಕ ಸಾಗಿಸಲಾಗುತ್ತಿದೆ ಗೊತ್ತಾ? ಎಂದು ಕೇಳಿದರು. ಈ ಜಲ ಸಂಧಿ ಮೂಲಕ ಯಾವ ದೇಶಗಳು, ಕಂಪನಿಗಳು ಅತಿ ಹೆಚ್ಚು ಸಾಗಣೆ ಮಾಡುತ್ತವೆ' ಎಂದು ಪ್ರಶ್ನಿಸಿದ ಸ್ಪೀಕರ್, ಇಸ್ಲಾಮಿಕ್ ಗಣರಾಜ್ಯವು ಮತ್ತಷ್ಟು ಹತೋಟಿ ಸಾಧಿಸಲು ಅತ್ಯಂತ ಪರಿಣಾಮಕಾರಿಯಾದ ಮಾರ್ಗಗಳನ್ನು ಹುಡುಕುತ್ತಿದೆ ಎಂದು ಹೇಳಿದ್ದಾರೆ. ಬಾಬ್ ಅಲ್–ಮಂಡೇಬ್ ಜಲಸಂಧಿಯು ಕೆಂಪು ಸಮುದ್ರವನ್ನು ಅಡೆನ್ ಕೊಲ್ಲಿಗೆ ಸಂಪರ್ಕಿಸುತ್ತದೆ, ಇದು ಯೆಮೆನ್ ಜಲಮಾರ್ಗದ ಒಂದು ಬದಿಯಲ್ಲಿದೆ

ಮಧ್ಯರಾತ್ರಿ ನಂತರ 6 ಸೆಕೆಂಡ್‌ನಲ್ಲಿ 17 ಲಕ್ಷ ಮತದಾನ ನಡೆದಿತ್ತು!

ಆಂಧ್ರದ 2024ರ ಸಾರ್ವತ್ರಿಕ ಚುನಾವಣೆ ಕುರಿತು ಆರ್ಥಿಕ ತಜ್ಞ ಪರಕಾಳ ಪ್ರಭಾಕರ್ ಗಂಭೀರ ಆರೋಪ

ನವದೆಹಲಿ: ಆಂಧ್ರ ಪ್ರದೇಶದ ವಿಧಾನ ಸಭೆಗೆ 2024ರಲ್ಲಿ ನಡೆದ ಚುನಾವಣೆಯಲ್ಲಿ ಮಧ್ಯರಾತ್ರಿ ಬಳಿಕ ಕೇವಲ 6 ಸೆಕೆಂಡ್‌ಗಳಲ್ಲಿ 17 ಲಕ್ಷ ಮತ ಚಲಾವಣೆಯಾಗಿವೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ, ಆರ್ಥಿಕ ತಜ್ಞ ಪರಕಾಳ ಪ್ರಭಾಕರ್ ಗಂಭೀರ ಆರೋಪ ಮಾಡಿದ್ದಾರೆ.

ದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ಸಾಮಾನ್ಯವಾಗಿ ಸಾರ್ವತ್ರಿಕ ಚುನಾವಣೆಗಳ ಮತದಾನ ಬೆಳಿಗ್ಗೆ 8ರಿಂದ ಸಂಜೆ 6 ಅಥವಾ 7 ಗಂಟೆವರೆಗೆ ನಡೆಯುತ್ತದೆ. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮತದಾನದ ಅವಧಿಯಲ್ಲಿ ಕೊಂಚ ವ್ಯತ್ಯಾಸವಿರಬಹುದು. ಆದರೆ, 2024ರಲ್ಲಿ ಆಂಧ್ರಪ್ರದೇಶದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಮಧ್ಯರಾತ್ರಿಯಲ್ಲೂ ಮತದಾನ ನಡೆದಿದೆ. ಮಧ್ಯರಾತ್ರಿ ಬಳಿಕ ಸುಮಾರು 17 ಲಕ್ಷ ಮತ ಚಲಾವಣೆಯಾಗಿದೆ. ಈ ಮತಗಳು ಕೇವಲ 6 ಸೆಕೆಂಡುಗಳಲ್ಲಿ ಚಲಾವಣೆಯಾಗಿವೆ. ಇದು ವಿಚಿತ್ರ ಎನಿಸಿದರೂ ನಿಜ ಎಂದಿದ್ದಾರೆ.

ಮತದಾನದ ವೇಳೆ ಇವಿಎಂಗಳು ರೀಸೆಟ್ ಆಗಲು ಕನಿಷ್ಠ 14 ಸೆಕೆಂಡುಗಳು ಬೇಕಿರುವಾಗ, ಕೇವಲ 6 ಸೆಕೆಂಡುಗಳಲ್ಲಿ ಲಕ್ಷ ಲಕ್ಷ ಮತಗಳು ಹೇಗೆ ಚಲಾವಣೆಯಾದವು? ಆ ಸಮಯದಲ್ಲಿ ಒಬ್ಬ ಮತದಾರ ವಾಸ್ತವಿಕವಾಗಿ ಮತಗಟ್ಟೆ ಒಳಗೆ ಬಂದು ಮತ ಚಲಾಯಿಸಿ, ನಿರ್ಗಮಿಸಲು ಸಾಧ್ಯವೇ?. ಅಲ್ಲದೇ, ರಾತ್ರಿ 8 ಗಂಟೆ ನಂತರ ಏನೋ ಅಸಾಮಾನ್ಯವಾದ ಘಟನೆ ನಡೆದಿದೆ. 3,500 ಮತಗಟ್ಟೆಗಳಲ್ಲಿ ತಡರಾತ್ರಿ 2 ಗಂಟೆವರೆಗೆ ಮತದಾನವಾಗಿದೆ ಎಂದು ಪ್ರಭಾಕರನ್ ಆರೋಪಿಸಿದ್ದಾರೆ.

2024ರ ಮೇ 13 ರಂದು ಸಂಜೆ 5 ಗಂಟೆಗೆ ಮತದಾನ ಮುಗಿದ ನಂತರ ಶೇ.68.04ರಷ್ಟು ಮತದಾನ ನಡೆದಿದೆ ಎಂದು ಆಂಧ್ರಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದರು. ಬಳಿಕ, ರಾತ್ರಿ 8 ಗಂಟೆಯ ಪ್ರಕಟಣೆಯಲ್ಲಿ ಭಾರತೀಯ ಚುನಾವಣಾ ಆಯೋಗವು ಶೇ.68.12ರಷ್ಟು ಮತದಾನವಾಗಿದೆ ಎಂದು ತಿಳಿಸಿತು. ರಾತ್ರಿ 11.45ಕ್ಕೆ ಮತದಾನದ ಪ್ರಮಾಣವನ್ನು ಪರಿಷ್ಕರಿಸಿದ ಆಯೋಗ, ಶೇ. 76.50ರಷ್ಟು ಮತದಾನವಾಗಿದೆ ಎಂದು ಹೇಳಿತು. ನಾಲ್ಕು ದಿನಗಳ ನಂತರ ಬಿಡುಗಡೆಯಾದ ಅಂತಿಮ ಮತದಾನದ ಪ್ರಮಾಣದಲ್ಲಿ ಶೇ.81.79ರಷ್ಟು ಮತದಾನವಾಗಿದೆ ಎಂದು ಉಲ್ಲೇಖಿಸಲಾಗಿದೆ ಎಂದರು.

ಈ ಚುನಾವಣೆಯಲ್ಲಿ ಚಂದ್ರಬಾಬು ನಾಯ್ಡು ನೇತೃತ್ವದ ಎನ್‌ಡಿಎ ಮೈತ್ರಿಕೂಟವು 175 ಕ್ಷೇತ್ರಗಳ ಪೈಕಿ 164ರಲ್ಲಿ ಪ್ರಚಂಡ ಗೆಲುವು ಸಾಧಿಸುವ ಮೂಲಕ ಅಧಿಕಾರಕ್ಕೆ ಬಂದಿತ್ತು. ಈ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಚಂದ್ರಬಾಬು ನಾಯ್ಡು ನಾಲ್ಕನೇ ಬಾರಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಮರಳಿದ್ದರು. ಟಿಡಿಪಿ 135 ಸ್ಥಾನಗಳನ್ನು ಪಡೆದರೆ, ಬಿಜೆಪಿ ಎಂಟು ಸ್ಥಾನಗಳು ಮತ್ತು ಪವನ್ ಕಲ್ಯಾಣ್ ಅವರ ಜನಸೇನಾ 21 ಸ್ಥಾನಗಳನ್ನು ಗೆದ್ದಿತ್ತು.

ಮೈಸೂರಿನ ಲಲಿತ ಮಹಲ್ ಹೆಲಿಪ್ಯಾಡ್ ಬಳಿಯ 14 ಎಕರೆ ಭೂಮಿ ವಿಚಾರವಾಗಿ ಸುಳ್ಳು ಸುದ್ದಿ ಹರಡಲಾಗಿದೆ

ಪ್ರಮೋದಾ ದೇವಿ ಒಡೆಯರ್ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ

ಜನರನ್ನು ವಂಚಿಸುವ ವ್ಯವಸ್ಥಿತ ಷಡ್ಯಂತ್ರ ಆರೋಪ; ಸೈಬರ್ ಠಾಣೆಗೆ ದೂರು

ಮೈಸೂರು, ಏ.4(ಬಿಎಲ್‌ಯು)– ಮೈಸೂರಿನ ಕುರುಬರಹಳ್ಳಿ ಸರ್ವೆ ನಂ.4ರಲ್ಲಿ ತಮ್ಮ ಸ್ವಾಧೀನದಲ್ಲಿರುವ 14 ಎಕರೆ ಭೂಮಿಯನ್ನು ಜಂಟಿ ಉದ್ಯಮ (ಜಾಯಿಂಟ್ ವೆಂಚರ್)ಕ್ಕೆ ನೀಡಲಾಗುತ್ತಿದೆ ಎಂಬ ಸುಳ್ಳು ಮಾಹಿತಿಯನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಡುತ್ತಿದ್ದು, ಇದನ್ನು ಯಾರೂ ನಂಬಬೇಡಿ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾನೂನುಬದ್ಧವಾಗಿ ನಮ್ಮ ಸ್ವಾಧೀನದಲ್ಲಿರುವ 14 ಎಕರೆ ಭೂಮಿಗೆ ಸಂಬಂಧಿಸಿದಂತೆ ಸುಳ್ಳು ವೀಡಿಯೋ ಸೃಷ್ಟಿಸಿಕೊಂಡು, ಅದನ್ನು ವಾಟ್ಸಾಪ್ ಮೂಲಕ ಹಂಚಲಾಗಿದೆ. ಈ ಮೂಲಕ ಸಾರ್ವಜನಿಕ ವಲಯಕ್ಕೆ ತಪ್ಪು ಮಾಹಿತಿ ಹರಡುತ್ತಿದ್ದಾರೆ. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಹೆಲಿಪ್ಯಾಡ್ (ಲಲಿತ ಮಹಲ್ ಹೆಲಿಪ್ಯಾಡ್) ಬಳಿಯ ನಮ್ಮ ಆಸ್ತಿಯ ಹೆಸರಿನಲ್ಲಿ ದುಷ್ಕರ್ಮಿಗಳು ಜನರನ್ನು ವಂಚಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದಿದ್ದಾರೆ.

ಮೈಸೂರಿನ ಪ್ರಧಾನ ಹಿರಿಯ ಸಿವಿಲ್ ಹಾಗೂ ಸಿಜೆಎಂ ನ್ಯಾಯಾಲಯದಲ್ಲಿ ಈ ಆಸ್ತಿಗೆ ಸಂಬಂಧಿಸಿದ ಪ್ರಕರಣ (ಓ.ಎಸ್. ಸಂಖ್ಯೆ 1400/2024) ವಿಚಾರಣೆ ಹಂತದಲ್ಲಿದೆ. ಆಸ್ತಿಯ ಸ್ವರೂಪ ಮತ್ತು ಸ್ವಾಧೀನಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳುವ ಮಧ್ಯಂತರ ಆದೇಶ ನ್ಯಾಯಾಲಯದಿಂದ ಜಾರಿಯಲ್ಲಿದೆ ಎಂದು ತಿಳಿಸಿದ್ದಾರೆ. ಆದರೆ, ಲಲಿತ ಮಹಲ್ ಬಳಿಯ 14 ಎಕರೆ ಭೂಮಿಯನ್ನು ಜಂಟಿ ಉದ್ಯಮಕ್ಕಾಗಿ ನೀಡಲಾಗುತ್ತಿದ್ದು, ಇದಕ್ಕಾಗಿ 20 ಕೋಟಿ ಮರುಪಾವತಿಸಬಹುದಾದ ಮುಂಗಡ(ಅಡ್ವಾನ್ಸ್) ನೀಡಿದರೆ ಸ್ವತಃ ಪ್ರಮೋದಾದೇವಿ ಒಡೆಯರ್ ಅವರಿಂದಲೇ ಎನ್‌ಓಸಿ (ನಿರಪೇಕ್ಷಣಾ ಪತ್ರ) ಕೊಡಿಸುತ್ತೇವೆ ಎಂದು ಸುಳ್ಳು ಸುದ್ದಿ ಹರಡಿ, ಜನರ ದಿಕ್ಕು ತಪ್ಪಿಸುವುದರ ಜೊತೆಗೆ ವ್ಯವಸ್ಥಿತವಾಗಿ ವಂಚಿಸುವ ಷಡ್ಯಂತರ ನಡೆಸಲಾಗಿದೆ ಎಂದು ಹೇಳಿದ್ದಾರೆ.



> “ನಮಗೆ ಸೇರಿದ ಆಸ್ತಿ ಹಾಗೂ ನನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದು, ಇದು ಅಪರಾಧ ಕೃತ್ಯಕ್ಕೆ ಸಮ. ಅಲ್ಲದೆ ಸಾರ್ವಜನಿಕರನ್ನು ಸುಳ್ಳು ಮಾಹಿತಿ ಮೂಲಕ ವಂಚಿಸಲು ಯತ್ನಿಸಿರುವುದು ಕ್ರಿಮಿನಲ್ ಅಪರಾಧ. ಈ ಬಗ್ಗೆ ಈಗಾಗಲೇ ಸೈಬರ್ ಪೊಲೀಸರಿಗೆ ದೂರು ನೀಡಲಾಗಿದೆ. ಸಾರ್ವಜನಿಕರು ಇಂತಹ ಸುಳ್ಳು ಸುದ್ದಿಯನ್ನು ನಂಬಬಾರದು. ಅಲ್ಲದೆ ನಮಗೆ ಸೇರಿರುವ ಆಸ್ತಿಗೆ ಸಂಬಂಧಿಸಿದಂತೆ ಬೇರೆಯವರು ನಡೆಸುವ ಯಾವುದೇ ವಹಿವಾಟಿನಲ್ಲಿ ಭಾಗವಹಿಸಬಾರದು. –ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥೆ


ಏ.7ರಂದು ಮೈಸೂರಲ್ಲಿ ‘ಅಪ್ರೆಂಟಿಸ್‌ಶಿಪ್ ಮೇಳ’

ಮೈಸೂರು, ಏ.4– ಕೈಗಾರಿಕ ಸಂಸ್ಥೆ ಮತ್ತು ಉದ್ಯೋಗ ಇಲಾಖೆಯ ವತಿಯಿಂದ ಅಪ್ರೆಂಟಿಸ್‌ಶಿಪ್ ಮೇಳವನ್ನು ಏ.7ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಎನ್.ಆರ್.ಮೊಹಲ್ಲಾ, ಮೈಸೂರು ಇಲ್ಲಿ ಆಯೋಜಿಸಲಾಗಿದ್ದು, ವಿವಿಧ ಪ್ರತಿಷ್ಠಿತ ಉದ್ದಿಮೆಗಳು ಪಾಲ್ಗೊಳ್ಳುತ್ತಿವೆ. ಮೇಳದಲ್ಲಿ ಎಸ್‌ಎಸ್‌ಎಲ್‌ಸಿ/ಪಿಯುಸಿ/ಐ.ಟಿ.ಐ/ಡಿಪ್ಲೋಮಾ/ಇತರೇ ಪದವಿಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಉಪಪ್ರಾಚಾರ್ಯ ಬೋಪಯ್ಯ ಮೊ.ಸಂ. 9945711787 ಹಾಗೂ ತರಬೇತಿ ಅಧಿಕಾರಿ ಮೊಸಂ.9945616088 ನಾಗೇಶ್ ಎಂ.ಹೆಚ್. ಅವರನ್ನು ಸಂಪರ್ಕಿಸುವುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ವಿಷಪೂರಿತ ಮದ್ಯ ಸೇವನೆ; ಮೂವರು ಸಾವು



ಉತ್ತರ ಪ್ರದೇಶ: ಮೀರಟ್‌ದೌರಾಲಾ ಪೊಲೀಸ್ ಠಾಣೆ ಪ್ರದೇಶದಲ್ಲಿ ಸ್ಥಳೀಯವಾಗಿ ತಯಾರಿಸಿದ ವಿಷಪೂರಿತ ಮದ್ಯ ಸೇವಿಸಿ ಮೂವರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಮದ್ಯ ಸೇವಿಸಿದ ನಂತರ ತೀವ್ರವಾಗಿ ಅಸ್ವಸ್ಥಗೊಂಡಿದ್ದ ಮೂವರನ್ನು ಟೋಲ್ ಪ್ಲಾಜಾ ಬಳಿಯ ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವುದಾಗಿ ತಿಳಿದು ಬಂದಿದೆ. ಮೃತಪಟ್ಟವರನ್ನು ಅಂಕಿತ್, ಜಿತೇಂದ್ರ ಮತ್ತು ಬಾಬುರಾಮ್ ಎಂದು ಗುರುತಿಸಲಾಗಿದೆ.

ಈ ಸಂಬಂಧ ದೂರು ದಾಖಲಿಸಿಕೊಂಡಿರುವ ಮೀರಟ್ ಪೊಲೀಸರು, ಯಾವ ವ್ಯಕ್ತಿಯಿಂದ ಮದ್ಯ ಖರೀದಿಸಿದ್ದರು ಎಂಬುದನ್ನು ಪತ್ತೆ ಹಚ್ಚಲು ಮುಂದಾಗಿದ್ದಾರೆ. ಪೊಲೀಸ್ ಮತ್ತು ಅಬಕಾರಿ ಇಲಾಖೆಯ ಪ್ರಾಥಮಿಕ ವಿಚಾರಣೆಯಲ್ಲಿ ಟೆಟ್ರಾ–ಪ್ಯಾಕ್‌ನಲ್ಲಿ ಸ್ಥಳೀಯ ಸರಾಯಿಯನ್ನು ತುಂಬಿ ಮಾರಾಟ ಮಾಡಲಾಗಿದೆ ಎಂದು ತಿಳಿದುಬಂದಿದೆ. ಮತ್ತೊಂದೆಡೆ ದಿಲ್ಖುಶ್ ಮತ್ತು ಬಂಟಿ ಜೀರಾ ಮಸಾಲಾ ಬ್ರಾಂಡ್ ಸರಾಯಿಯನ್ನು ವಶಕ್ಕೆ ಪಡೆದು ವಿಧಿವಿಜ್ಞಾನ ಕೇಂದ್ರದಲ್ಲಿ ಪರೀಕ್ಷೆ ನಡೆಸಿದಾಗ ಇದರ ಸೇವನೆಯಿಂದಲೇ ಆ ಮೂವರ ಸಾವು ಸಂಭವಿಸಿರುವುದಾಗಿ ತಿಳಿದು ಬಂದಿದೆ.

ವಾಷಿಂಗ್ಟನ್ ಡಿ.ಸಿ ಮೇಯರ್ ಹುದ್ದೆಗೆ ತಮಿಳುನಾಡು ಮೂಲದ ರಿನಿ ಸಂಪತ್ ಸ್ಪರ್ಧೆ



ವಾಷಿಂಗ್ಟನ್: ಇಲ್ಲಿನ ವಾಷಿಂಗ್ಟನ್ ಡಿಸಿಯ ಮೇಯರ್ ಹುದ್ದೆಗೆ ತಮಿಳುನಾಡು ಮೂಲದ ರಿನಿ ಸಂಪತ್ ಸ್ಪರ್ಧಿಸಲಿದ್ದಾರೆ. ಸರ್ಕಾರಿ ಗುತ್ತಿಗೆದಾರೆ ಆಗಿರುವ 31 ವರ್ಷದ ಅವರು ಡೆಮಾಕ್ರಟಿಕ್ ಪಕ್ಷದ ಸದಸ್ಯೆ. ನಗರದ ಮೂಲ ಭೂತ ಸೌಕರ್ಯಗಳನ್ನು ಸರಿಪಡಿಸಿ ನವ ವಾಷಿಂಗ್ಟನ್ ರೂಪಿಸುವ ಭರವಸೆ ನೀಡಿದ್ದಾರೆ.

ನಾನು ರಾಜಕಾರಣಿ ಅಲ್ಲ. ನನ್ನೊಂದಿಗೆ ಯಾವುದೇ ವಿಶೇಷ ಹಿತಾಸಕ್ತಿಯ ಗುಂಪುಗಳಿಲ್ಲ. ನಗರದ ಸಮಸ್ಯೆಗಳನ್ನು ಬಗೆಹರಿಸಲು ಅವಿಶ್ರಾಂತವಾಗಿ ಶ್ರಮಿಸಿದ ವ್ಯಕ್ತಿಗೆ ಅವಕಾಶ ಕೊಡುವ ಸಮಯ ಎಂದು ಅವರು ತಮ್ಮ ಪ್ರಚಾರ ವೆಬ್‌ಸೈಟ್‌ನಲ್ಲಿ ಬರೆದುಕೊಂಡಿದ್ದಾರೆ. ತಮಿಳುನಾಡಿನ ಥೇನಿಯಲ್ಲಿ ಜನಿಸಿ, 7ನೇ ವರ್ಷಕ್ಕೆ ಅಮೆರಿಕಕ್ಕೆ ವಲಸೆ ಹೋದರು. ನಮಗೆ ಗೆಲ್ಲಲು ಸಾಧ್ಯವಿದೆ ಎನ್ನುವುದು ಸ್ಪಷ್ಟವಾಗಿದೆ. ಕೇವಲ 4 ವಾರಗಳಲ್ಲಿ, ವಾಷಿಂಗ್ಟನ್ ಡಿ.ಸಿಯ ಇತಿಹಾಸದಲ್ಲೇ ಮೇಯರ್ ಚುನಾವಣೆಯ ಕಣಕ್ಕೆ ಇಳಿದ ದಕ್ಷಿಣ ಏಷ್ಯಾ ಮೂಲದ ಮೊದಲ ಅಭ್ಯರ್ಥಿ ಎಂಬ ಹೆಗ್ಗಳಿಕೆಗೆ ನಾವು ಪಾತ್ರರಾಗಿದ್ದೇವೆ. ಕಡಿಮೆ ಸಂಪನ್ಮೂಲ, ಜನ ಬೆಂಬಲಿತ ಅಭಿಯಾನವು ಏನನ್ನು ಸಾಧಿಸಬಹುದು ಎಂಬುದಕ್ಕೆ ಇದೇ ಸಾಕ್ಷಿ. ಪ್ರತಿಯೊಬ್ಬ ಮತದಾರರನ್ನು ತಲುಪಲು ಅಗತ್ಯವಿರುವ ಸಂಪನ್ಮೂಲಗಳು ನಮ್ಮ ಬಳಿ ಇದ್ದಿದ್ದರೆ ನಾವು ಇನ್ನೇನು ಸಾಧಿಸಬಹುದಿತ್ತು ಎಂದು ಒಮ್ಮೆ ಕಲ್ಪಿಸಿಕೊಳ್ಳಿ ಎಂದು ಅವರು ಹೇಳಿದ್ದಾರೆ.

ಆರ್‌ಸಿಬಿ–ಸಿಎಸ್‌ಕೆ ಪಂದ್ಯದ ಉಚಿತ ಐಪಿಎಲ್ ಟಿಕೆಟ್‌ಗಾಗಿ ಸಾಲುಗಟ್ಟಿ ನಿಂತ ಶಾಸಕರ ಪಿಎಗಳು



ಬೆಂಗಳೂರು: ಇಂಡಿಯನ್ ಪ್ರಿಮಿಯರ್ ಲೀಗ್ (ಐಪಿಎಲ್) ಟೂರ್ನಿಯ 11ನೇ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಡುವೆ ನಾಳೆ ಪಂದ್ಯ ನಡೆಯಲಿದ್ದು ಈ ಪಂದ್ಯದ ಉಚಿತ ಟಿಕೆಟ್‌ಗಾಗಿ ಕರ್ನಾಟಕದ ಶಾಸಕರ ಪಿಎಗಳು ಕ್ಯೂನಲ್ಲಿ ನಿಂತು ಐಪಿಎಲ್ ಟಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ.

ಸಭಾಧ್ಯಕ್ಷರ ಕಚೇರಿ ಮೂಲಕವೇ ಟಿಕೆಟ್ ಹಂಚಿಕೆ ಮಾಡಲಾಗುತ್ತಿದ್ದು ಮೂವರು ಬಿಜೆಪಿ ಶಾಸಕರನ್ನು ಬಿಟ್ಟರೆ ಉಳಿದಂತೆ 221 ಶಾಸಕರಿಗೂ ಟಿಕೆಟ್ ಹಂಚಿಕೆ ಮಾಡಲಾಗಿದೆ. ವಿಧಾನಸೌಧದ ಸ್ಪೀಕರ್ ಆಪ್ತ ಕಾರ್ಯದರ್ಶಿ ಮಹೇಶ್ ಕರ್ಜಗಿ ಕೊಠಡಿಯಲ್ಲಿ ಪ್ರತಿಯೊಬ್ಬ ಶಾಸಕರಿಗೆ ತಲಾ 3 ಐಪಿಎಲ್ ಟಿಕೆಟ್ ವಿತರಣೆ ಮಾಡಲಾಗಿದೆ ಎಂದು ವರದಿಯಾಗಿದೆ.

ಪಾಕಿಸ್ತಾನ: ಪೆಟ್ರೋಲ್ ಬೆಲೆಯಲ್ಲಿ 80 ರೂ. ಕಡಿತ



ಇಸ್ಲಾಮಾಬಾದ್: ಇಂಧನ ಬೆಲೆಯಲ್ಲಿ ತೀವ್ರ ಏರಿಕೆಗೆ ದೇಶಾದ್ಯಂತ ಭಾರಿ ವಿರೋಧ ವ್ಯಕ್ತವಾದ ಬೆನ್ನಲ್ಲೇ ಪಾಕಿಸ್ತಾನ ಸರ್ಕಾರವು ಪೆಟ್ರೋಲ್ ಬೆಲೆಯಲ್ಲಿ 80 ಪಾಕಿಸ್ತಾನಿ ರೂ. ಕಡಿತ ಮಾಡಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಪ್ರಧಾನಿ ಶೆಹಬಾಜ್ ಷರೀಫ್, ಪೆಟ್ರೋಲ್ ಮೇಲಿನ ತೆರಿಗೆಯನ್ನು ಪ್ರತಿ ಲೀಟರ್‌ಗೆ 80 ಪಾಕಿಸ್ತಾನಿ ರೂ. ಕಡಿತಗೊಳಿಸಲು ಸರ್ಕಾರ ನಿರ್ಧರಿಸಿದೆ. ಇದರಿಂದಾಗಿ ಗ್ರಾಹಕರಿಗೆ ಪ್ರತಿ ಲೀಟರ್ ಪೆಟ್ರೋಲ್ 378 ಪಾಕಿಸ್ತಾನಿ ರೂ.ಗೆ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ. ಪರಿಷ್ಕೃತ ದರವು ಮಧ್ಯರಾತ್ರಿಯಿಂದಲೇ ಜಾರಿಗೆ ಬರಲಿದ್ದು, ದೇಶಾದ್ಯಂತ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಈ ದರ ಅನ್ವಯವಾಗಲಿದೆ ಎಂದು ಹೇಳಿದ್ದಾರೆ. ಗುರುವಾರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಗಣನೀಯವಾಗಿ ಹೆಚ್ಚಿಸಿತ್ತು. ಪೆಟ್ರೋಲ್ ಮೇಲಿನ ತೆರಿಗೆಯನ್ನು ಪ್ರತಿ ಲೀಟರ್‌ಗೆ 105 ಪಾಕಿಸ್ತಾನಿ ರೂ.ನಿಂದ 160ಕ್ಕೆ ಏರಿಸಿದ್ದರಿಂದ ಪೆಟ್ರೋಲ್ ಬೆಲೆಯು 321ರಿಂದ 458 ಪಾಕಿಸ್ತಾನಿ ರೂ.ಗೆ ಏರಿಕೆಯಾಗಿತ್ತು. ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 184.49 ಪಾಕಿಸ್ತಾನಿ ರೂ. ಹೆಚ್ಚಿಸಿತ್ತಾದರೂ, ಅದರ ಮೇಲಿನ ತೆರಿಗೆಯನ್ನು ರದ್ದುಗೊಳಿಸಿತ್ತು. ಕೊಲ್ಲಿ ರಾಷ್ಟ್ರಗಳಲ್ಲಿನ ಪರಿಸ್ಥಿತಿಯೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣ ಎಂದು ಸರ್ಕಾರ ತಿಳಿಸಿತ್ತು.

ಟಿಕೆಟ್ ನೀಡಿಲ್ಲ ಎನ್ನುವುದು ತಪ್ಪು; ನಾನೇ ಬೇಡ ಎಂದಿದ್ದೆ



ಚೆನ್ನೈ: ತಮಿಳುನಾಡು ವಿಧಾನಸಭೆ ಚುನಾವಣೆಗೆ ಬಿಜೆಪಿ ಬಿಡುಗಡೆ ಮಾಡಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ, ಪಕ್ಷದ ಮಾಜಿ ರಾಜ್ಯಾಧ್ಯಕ್ಷ ಕೆ.ಅಣ್ಣಾಮಲೈ ಅವರ ಹೆಸರಿಲ್ಲದಿರುವುದು ಭಾರೀ ಚರ್ಚೆಗೆ ಕಾರಣವಾದ ಬೆನ್ನಲ್ಲೇ ಈ ಬಗ್ಗೆ ಸ್ವತಃ ಅಣ್ಣಾಮಲೈ ಸ್ಪಷ್ಟನೆ ನೀಡಿದ್ದಾರೆ. ಚೆನ್ನೈ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ನನಗೆ ಟಿಕೆಟ್ ನೀಡಲಾಗಿಲ್ಲ ಎನ್ನುವುದು ತಪ್ಪು. ನಾನು ಯಾವುದೇ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಕೋರ್ ಕಮಿಟಿಗೆ ಮುಂಚಿತವಾಗಿಯೇ ಲಿಖಿತವಾಗಿ ತಿಳಿಸಿದ್ದೇನೆ. ನಾನು ಸ್ಪರ್ಧಿಸಲು ಇಚ್ಛಿಸಲಿಲ್ಲ ಎಂಬುದೇ ಸತ್ಯ. ನನಗೇ ಇಚ್ಛೆ ಇಲ್ಲ ಎಂದಾದರೆ ನಾಯಕತ್ವವು ನನಗೆ ಟಿಕೆಟ್ ಹೇಗೆ ನೀಡಬಹುದು ಎಂದು ಪ್ರಶ್ನಿಸಿದರು.

ಪಕ್ಷದ ಕೇಂದ್ರ ನಾಯಕತ್ವವು ತಮ್ಮ ನಿರ್ಧಾರವನ್ನು ಗೌರವಿಸಿರುವುದಕ್ಕೆ ಧನ್ಯವಾದ ತಿಳಿಸುತ್ತೇನೆ. ಎನ್‌ಡಿಎ ಮೈತ್ರಿಯ ಅಭ್ಯರ್ಥಿಗಳ ಪರ ರಾಜ್ಯದಲ್ಲಿ ಪ್ರಚಾರ ನಡೆಸಿ, ಸಕ್ರಿಯವಾಗಿ ಬೆಂಬಲ ನೀಡುತ್ತೇನೆ ಎಂದು ಸ್ಪಷ್ಟಪಡಿಸಿದರು. ಕೊಯಂಬತ್ತೂರಿನ ಪ್ರಮುಖ ಕ್ಷೇತ್ರಗಳನ್ನು ಎಐಎಡಿಎಂಕೆ ಉಳಿಸಿಕೊಂಡ ಹಿನ್ನೆಲೆಯಲ್ಲಿ ಅಣ್ಣಾಮಲೈ ಅಸಮಾಧಾನಗೊಂಡು, ಕೇಂದ್ರ ನಾಯಕತ್ವಕ್ಕೆ ಪತ್ರದ ಮೂಲಕ ತಿಳಿಸಿ, ಚುನಾವಣೆಯಿಂದ ಹಿಂದೆ ಸರಿಯುವ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ. ಸಿಂಗನಲ್ಲೂರು ಕ್ಷೇತ್ರವನ್ನು ಬಿಜೆಪಿಗೆ ನೀಡಬೇಕೆಂಬ ಬೇಡಿಕೆಯೂ ಈಡೇರಿಲ್ಲ ಎಂದು ತಿಳಿದುಬಂದಿದೆ.

ಪ್ರಶಿಕ್ಷಣಾರ್ಥಿಗಳು ಭಾರತೀಯ ಸಂಸ್ಕೃತಿ ಕಾಪಾಡಲು ಏಕತೆಯನ್ನು ಬೆಳೆಸಿಕೊಳ್ಳಿ



ಅಭಿಯಾನದಲ್ಲಿ ಮಾಜಿ ಸಭಾಪತಿ ಕೆ.ಜಿ.ಬೋಪಯ್ಯ ಮಾತನಾಡಿದರು.

ನಾಪೋಕ್ಲು, ಏ.4 (ದುಗ್ಗಳ)– ಪ್ರಶಿಕ್ಷಣಾರ್ಥಿಗಳು ಭಾರತೀಯ ಸಂಸ್ಕೃತಿ ಪರಂಪರೆಯನ್ನು ಕಾಪಾಡಿಕೊಂಡು ಅನೇಕತೆಯಲ್ಲಿ ಏಕತೆಯನ್ನು ಬೆಳೆಸಿಕೊಳ್ಳಬೇಕು ಎಂದು ಮಾಜಿ ಸಭಾಪತಿ ಕೆ.ಜಿ. ಬೋಪಯ್ಯ ಹೇಳಿದರು.

ಭಾರತೀಯ ಜನತಾ ಪಾರ್ಟಿಯ ಇಲ್ಲಿಯ ಕೊಡವ ಸಮಾಜದಲ್ಲಿ ಆಯೋಜಿಸಿದ್ದ ಗ್ರಾಮಾಂತರ ಮಂಡಲ ಮಟ್ಟದ ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನವನ್ನು ಉದ್ಘಾಟಿಸಿ, ಭಾರತ ವೈವಿಧ್ಯತೆಯ ದೇಶ. ಜಾತಿ ಸಮಾಜದ ಬಗ್ಗೆ ಅಭಿಮಾನವಿರಬೇಕು. ಅಂದಾಭಿಮಾನ ಇರಬಾರದು. ಎಂದ ಅವರು ನಮ್ಮ ಆಚಾರ, ವಿಚಾರ, ಸಂಸ್ಕೃತಿಯನ್ನು ಇತರರು ಅನುಸರಿಸುವಂತಾಗಬೇಕು. ಪ್ರತಿಯೊಬ್ಬರು ಸ್ವಾವಲಂಬಿಯಾಗಿ ಬದುಕುವುದರೊಂದಿಗೆ ಸಮಾಜದಲ್ಲಿ ಶಾಂತಿ ಕಾಪಾಡುವುದು ಮುಖ್ಯ ಸಮಾಜದ ಅಭಿವೃದ್ಧಿಗೆ ಒತ್ತು ಕೊಡಿ ಎಂದರು. ಅಭ್ಯಾಸ ವರ್ಗದಲ್ಲಿ ಸಮಸ್ಯೆಗಳನ್ನು ಬದಿಗೊತ್ತಿ ಸಂಪೂರ್ಣವಾಗಿ ತೊಡಗಿಸಿಕೊಂಡು ದೇಶ ಮೊದಲು ನಂತರ ಪಕ್ಷ ಎಂಬುದಕ್ಕೆ ಆದ್ಯತೆ ನೀಡಿ ಎಂದರು.

ಕೊಡಗು ಜಿಲ್ಲಾ ಪ್ರಶಿಕ್ಷಣ ಸಂಚಾಲಕ ಏ.ಕೆ.ಮನು ಮುತ್ತಪ್ಪ ಸ್ವಾಗತಿಸಿ ಪ್ರಾಸ್ತಾವಿಕ ನುಡಿಯಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ, ತಾಲೂಕು ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ ಪ್ರಶಿಕ್ಷಣಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು

ಕಾರಿನ ಮೇಲೆ ಮಗುಚಿದ ಮಿನಿ ಬಸ್

ಪವಾಡ ಸದೃಶವಾಗಿ ಕುಟುಂಬ ಪಾರು



ಕಾರಿನ ಮೇಲೆ ಪ್ರವಾಸಿಗರ ಮಿನಿ ಬಸ್ ಉರುಳಿ ಬಿದ್ದಿರುವುದು.

ಮಡಿಕೇರಿ,ಏ.4– ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಕಾರಿನ ಮೇಲೆ ಪ್ರವಾಸಿಗರ ಮಿನಿ ಬಸ್ ಉರುಳಿ ಬಿದ್ದ ಘಟನೆ ತಾಲೂಕಿನ ಮರಗೋಡು ಗ್ರಾಮದ ಚೊಳ್ಳಂಗೋಡು ಸೇತುವೆ ಬಳಿ ನಡೆದಿದೆ.

ಕಾರಿನಲ್ಲಿದ್ದ ಮರಗೋಡು ನಿವಾಸಿ ಬಡುವಂಡ್ರ ಪುನೀತ್ ಮತ್ತು ಕುಟುಂಬ ರಸ್ತೆ ಬದಿ ಕಾರು ನಿಲ್ಲಿಸಿ ಕೆಳಗೆ ಇಳಿದಿದ್ದರು. ಈ ವೇಳೆ ಇದೇ ಇಳಿಜಾರು ರಸ್ತೆಯಲ್ಲಿ ಬೆಂಗಳೂರಿನಿಂದ 30 ಪ್ರವಾಸಿಗರನ್ನು ಕರೆ ತರುತ್ತಿದ್ದ ಮಿನಿ ಬಸ್ (ಕೆಎ.05, ಎಹೆಚ್–2718) ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿ ನಿಂತಿದ್ದ ಕಾರಿನ ಮೇಲೆ ಮಗುಚಿ ಬಿದ್ದಿದೆ. ಪರಿಣಾಮ ಬಸ್‌ನಲ್ಲಿದ್ದ ಪ್ರವಾಸಿಗರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಕಾರು ಸಂಪೂರ್ಣ ಜಖಂಗೊಂಡಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಬಸ್ ಚಾಲಕ ಸುದೀಪ್ ಎಂಬಾತನ ಅತೀ ವೇಗವೇ ಅಪಘಾತಕ್ಕೆ ಕಾರಣ ಎನ್ನಲಾಗುತ್ತಿದೆ.

ಈ ರಸ್ತೆ ಭಾರೀ ಅಪಾಯಕಾರಿ ತಿರುವು ಸಹಿತ ಇಳಿಜಾರಿನಿಂದ ಕೂಡಿದ್ದು ಸೂಕ್ತ ಸೂಚನಾ ಫಲಕವಿಲ್ಲದೆ ಚಾಲಕರಿಗೆ ಸಮಸ್ಯೆ ಎದುರಾಗುತ್ತಿದೆ. ವರ್ಷದ ಅವಧಿಯಲ್ಲಿ ಇದೇ ಸ್ಥಳದಲ್ಲಿ 5 ಅಪಘಾತ ಸಹಿತ 1 ಸಾವು ಸಂಭವಿಸಿದೆ. ಸೂಕ್ತ ಸೂಚನಾ ಫಲಕ ಅಳವಡಿಸುವಂತೆ ಹಲವು ವರ್ಷಗಳಿಂದ ಆಗ್ರಹಿಸುತ್ತಿದ್ದರೂ ಸಂಬಂಧಿಸಿದ ಇಲಾಖೆ ಸ್ಪಂದಿಸುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಮತ್ತೆ ಅಪಘಾತ ಸಂಭವಿಸಿ ಅನಾಹುತ ಘಟಿಸುವ ಮುನ್ನ ಇಲಾಖೆ ಎಚ್ಚರಿಕೆ ಫಲಕ ಅಳವಡಿಸಬೇಕು ಮತ್ತು ರಸ್ತೆ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದೇವರ ಮೊರೆ ಹೋದ ಕುಡಿಯ ಜನಾಂಗ



ನಾಪೋಕ್ಲು, ಏ.4 (ದುಗ್ಗಳ)– ಕೊಡಗಿನ ತಡಿಯಂಡಮೋಳ್ ಬೆಟ್ಟದಲ್ಲಿ ನಾಪತ್ತೆಯಾಗಿರುವ ಯುವತಿಯ ಪತ್ತೆಗಾಗಿ ಕುಡಿಯ ಜನಾಂಗ ಆಧ್ಯಾತ್ಮದ ಮೊರೆ ಹೊಕ್ಕಿದೆ.

ನಾಪತ್ತೆಯಾಗಿರುವ ಶರಣ್ಯ ಯಾವುದೆ ತೊಂದರೆಗೊಳಗಾಗದೆ ಮರಳಿ ಬರುವಂತಾಗಲಿ ಎಂದು ಕುಡಿಯ ಜನಾಂಗ ತಮ್ಮ ಕುಟುಂಬದ ದೈವಗಳಿಗೆ ವಿಶೇಷ ಪ್ರಾರ್ಥನೆಯನ್ನು ಮಾಡಿ, ಹರಕೆಯನ್ನು ಮಾಡಿಕೊಂಡಿದ್ದಾರೆ ಯುವಕಪಾಡಿ ಗ್ರಾಮದ ಕೋಳಿಂದ ಕುಡಿಯ ಕುಟುಂಬಸ್ಥರು ತಮ್ಮ ಐನ್‌ಮನೆಯಲ್ಲಿ ಸೇರಿ ಕುಡಿಯರ ಕುಲದೈವವಾದ ಮಲೆ ತಮ್ಮಚ್ಚನಿಗೆ ಮತ್ತು ಕರಿಚಾಮುಂಡಿ, ಕನ್ನಿಗಾಲ ತಮ್ಮೆ, ಇಗ್ಗುತ್ತಪ್ಪ, ದೈವ ದೇವರುಗಳಿಗೆ, ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿ ನಾಪತ್ತೆಯಾದ ಶರಣ್ಯ ಹಾಗೂ ಶೋಧನಾ ಕಾರ್ಯಕ್ಕಾಗಿ ಅರಣ್ಯದ ಒಳಗೆ ಹೋಗಿರುವ ವರಿಗೆ ಯಾವುದೇ ಅಡ್ಡಿ ಆತಂಕಗಳು ಬಾರದಂತೆ ಕುಟುಂಬದ ಪಟ್ಟೆದಾರ ಕೆ.ಎ.ಚಿನ್ನಪ್ಪ ವಿಶೇಷ ಪ್ರಾರ್ಥನೆಯನ್ನು ಮಾಡಿ ಕೊಂಡರು

ಗ್ರಾಮದ ದೇವರಾದ ಪನ್ನಗಾಲ ತಮ್ಮೆ, ಹಬ್ಬಕ್ಕೆ ಶುಕ್ರವಾರ ಕಟ್ಟು ಬಿದ್ದಿದ್ದು ಈ ಸಂದರ್ಭದಲ್ಲಿ ಗ್ರಾಮಸ್ಥರು ಯಾರು ಅರಣ್ಯದ ಒಳಗೆ ಹೋಗುವುದಾಗಲಿ, ಮರ ಗಿಡಗಳನ್ನು ಕಡಿಯುವುದಾಗಲಿ, ಶಬ್ದ ಮಾಡುವುದಾಗಲಿ ಮಾಡುವಂತಿಲ್ಲ. ಈ ನಿರ್ಬಂಧ ಕುಡಿಯ ಜನಾಂಗದಲ್ಲಿ ಇದೆ. ಆದರೆ, ತಾವುಗಳು ನಂಬಿದ ದೇವರಿಗೆ ಸೇಂದಿ, ಹಂದಿ, ಕೋಳಿಗಳನ್ನು ಕೊಡುವುದಾಗಿ ಹರಕೆ ಮಾಡಿಕೊಂಡಿದ್ದೇವೆ ಎಂದು ತಾಲೂಕು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಕುಡಿಯರ ಮುತ್ತಪ್ಪ ತಿಳಿಸಿದ್ದಾರೆ.

ಏ.8 ರಂದು ಮಿನಿ ಉದ್ಯೋಗ ಮೇಳ

ಮಡಿಕೇರಿ ಏ.4–ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆ ವತಿಯಿಂದ ಏ.8 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ "ಉದ್ಯೋಗ ಮೇಳ" ನಡೆಯಲಿದೆ. ಈ ಉದ್ಯೋಗ ಮೇಳದಲ್ಲಿ ಜಾಯ್ ಆಲುಕಾಸ್ ಜ್ಯುವೆಲ್ಲರಿ, ಮೈಸೂರು, ಕಲ್ಯಾಣಿ ಮೋಟಾರ್ಸ್ ಕಾರ್ ಶೋ ರೂಂ, ಮಡಿಕೇರಿ, ಕೂರ್ಗ್ ಕ್ಲಿಪ್ಸ್ ರೆಸಾರ್ಟ್, ಮಡಿಕೇರಿ, ಹ್ಯೂಂಡಾಯಿ ಕಾರ್ ಶೋ ರೂಮ್, ಇವೊಲೋಬ್ಯಾಕ್ ರೆಸಾರ್ಟ್, ಮಡಿಕೇರಿ ಇವರು ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಹೆಚ್ಚಿನ ಮಾಹಿತಿಗೆ ಜಾಬ್ ಕೋ ಆರ್ಡಿನೇಟರ್ 8296020826 ಸಂಪರ್ಕಿಸಬಹುದು.

ಕೊಡಗು ಮಿಲಿಟರಿಯಂತೆ ಕ್ರೀಡೆಗೂ ಹೆಸರುವಾಸಿ


ಕುಡಿಯೋಳಂಡ ಕುಟುಂಬಸ್ಥರು ನಿರ್ಮಿಸಿದ ಕ್ರೀಡಾಂಗಣವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು.

ನಾಪೋಕ್ಲು, ಏ.4 (ದುಗ್ಗಳ)– ಕೊಡಗು ಜಿಲ್ಲೆ ಮಿಲಿಟರಿ ಸೇವೆಗೆ ಹೆಸರುವಾಸಿಯಾಗಿರುವಂತೆ ಕ್ರೀಡೆಗೂ ಹೆಸರುವಾಸಿಯಾಗಿದೆ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿರುವ ಶಾಸಕ ಎ.ಎಸ್ ಪೊನ್ನಣ್ಣ ಹೇಳಿದ್ದಾರೆ.

ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಕುಡಿಯೋಳಂಡ ಕುಟುಂಬಸ್ಥರು ಕುಂಡಿಯೊಳಂದ ಕಪ್ ಹಾಕಿ ಉತ್ಸವದ ಗಿನ್ನಿಸ್ ಬುಕ್ ಆಫ್ ರೆಕಾರ್ಡ್ ದಾಖಲೆಯ ಸವಿನೆನಪಿಗಾಗಿ ನೂತನವಾಗಿ ನಿರ್ಮಿಸಿದ ಕ್ರೀಡಾಂಗಣವನ್ನು ಶನಿವಾರ ಉದ್ಘಾಟಿಸಿ, ಹಾಕಿ ಕ್ರೀಡೆಗೆ ಕೋಟಿ ರೂ. ಅನುದಾನ ನೀಡುವ ಮೂಲಕ ಸರ್ಕಾರ ಹಾಕಿ ಕ್ರೀಡೆಯನ್ನು ಉತ್ತೇಜಿಸುತ್ತಿದೆ. ಪ್ರತಿ ವರ್ಷ ಹಾಕಿ ಉತ್ಸವ ನಡೆಯುವ ಸಂದರ್ಭದಲ್ಲಿ ಸರ್ಕಾರದ ಚಿಹ್ನೆ ಹಾಕಿ ಕ್ರೀಡಾ ಇಲಾಖೆಯನ್ನು ಗುರುತಿಸುವ ಕೆಲಸವನ್ನು ಮಾಡಬೇಕು ಎಂದರು.

ಕುಂಡಿಯೊಳಂಡ ಹಾಕಿ ಉತ್ಸವದ ಅಧ್ಯಕ್ಷ ರಮೇಶ್ ಮುದ್ದಯ್ಯ ಮಾತನಾಡಿ, ಯಾವುದೇ ಫಲಾಪೇಕ್ಷೆ ಇಲ್ಲದೆ ಚೋಕಿರ, ಬೊಳ್ಳೆ ಪಂಡ, ಮಕ್ಕಿ ಬ್ರಾಹ್ಮಣ ಸೇರಿದಂತೆ ಐದು ಕುಟುಂಬಸ್ಥರು 52ಎಕರೆ ಜಾಗವನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮೀಸಲಿಟ್ಟಿದ್ದಾರೆ. ಇಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶಿಕ್ಷಣದ ಜೊತೆಗೆ ಕ್ರೀಡೆಗೂ ಉತ್ತೇಜನ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಮಾತ್ರವಲ್ಲ ಕ್ರೀಡಾ ಕ್ಷೇತ್ರಗಳಲ್ಲೂ ಮುಂದೆ ಬರಬೇಕು ಎಂದು ಆಶಿಸಿದರು.

ಉತ್ಸವದ ಸಂಚಾಲಕ ದಿನೇಶ್, ನಿಕಟ ಪೂರ್ವ ಪ್ರಾಂಶುಪಾಲೆ ಡಾ.ಕಾವೇರಿ ಮಾತ ನಾಡಿದರು. ಕುಂಡಿಯೊಳಂಡ ಕುಟುಂಬದ ಮಾಹಿತಿಯನ್ನು ಒಳಗೊಂಡ ಪುಸ್ತಕವನ್ನು ಪೊನ್ನಣ್ಣ ಬಿಡುಗಡೆಗೊಳಿಸಿದರು. ಕುಟುಂಬದ ಹಿರಿಯ ಕೆಎಸ್ ಸುಬ್ಬಯ್ಯ ಅವರನ್ನು ಸನ್ಮಾನಿಸಿದರು.

ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಕಾಲೇಜಿನ ಪ್ರಾಂಶುಪಾಲೆ ಎಚ್.ಸಿ ಪಲ್ಲವಿ ಹಾಗೂ ಕುಂಡಿಯೊಳಂಡ ಕುಟುಂಬಸ್ಥರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕರು, ಕಾಲೇಜು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಪ್ರಸವ ಪೂರ್ವ ಲಿಂಗ ಪತ್ತೆ ಮಾಡಿಸಿದರೆ ಕ್ರಮ


ಡಿಹೆಚ್‌ಓ ಡಾ.ಎಂ.ಸತೀಶ್ ಕುಮಾರ್ ಪಿಸಿ ಮತ್ತು ಪಿಎನ್‌ಡಿಟಿ ಸಲಹಾ ಸಮಿತಿ ಸಭೆ ನಡೆಸಿದರು.

ಮಡಿಕೇರಿ ಏ.4–ಪ್ರಸವ ಪೂರ್ವ ಲಿಂಗ ಪತ್ತೆ ಶಿಕ್ಷಾರ್ಹ ಅಪರಾಧವಾಗಿದ್ದು, ಈ ಸಂಬಂಧ ದೂರುಗಳು ಕೇಳಿ ಬಂದಲ್ಲಿ ನಿಯಮಾನುಸಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಂ.ಸತೀಶ್ ಕುಮಾರ್ ಎಚ್ಚರಿಸಿದ್ದಾರೆ.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯಲ್ಲಿ ಶನಿವಾರ ನಡೆದ ಪಿಸಿ ಮತ್ತು ಪಿಎನ್‌ಡಿಟಿ(ಪ್ರಸವ ಪೂರ್ವ ಲಿಂಗ ಪತ್ತೆ ಮತ್ತು ಹತ್ಯೆ ಕಾಯ್ದೆ) ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪ್ರಸವ ಪೂರ್ವ ಲಿಂಗ ಪತ್ತೆ ಮಾಡಬಾರದು. ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಸಮತೋಲನವಾಗಿರಬೇಕು. ಆ ನಿಟ್ಟಿನಲ್ಲಿ ಗರ್ಭಿಣಿಯರು ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಇದರಿಂದ ಶಿಶುವಿನ ಬೆಳವಣಿಗೆ ಮತ್ತು ತಾಯಿಯ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಜಿಲ್ಲೆಯಲ್ಲಿ 28 ಸ್ಕ್ಯಾನಿಂಗ್ ಕೇಂದ್ರಗಳಿದ್ದು, ಆಗಾಗ ಭೇಟಿ ನೀಡಿ ತಪಾಸಣೆ ನಡೆಸಲಾಗುತ್ತದೆ. ಹೊಸದಾಗಿ ಸ್ಕ್ಯಾನಿಂಗ್ ಕೇಂದ್ರ ಆರಂಭಿಸಲು ಎರಡು ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಬಗ್ಗೆ ಖುದ್ದು ಭೇಟಿ ನೀಡಿ ಪರಿಶೀಲಿಸಲಾಗಿದೆ ಎಂದು ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಡಾ.ಎನ್.ಆನಂದ್ ಹೇಳಿದರು. ಸ್ಕ್ಯಾನಿಂಗ್ ಕೇಂದ್ರ ಮರು ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ಕೇಂದ್ರಗಳಿಗೆ ಪಿಸಿ ಮತ್ತು ಪಿಎನ್‌ಡಿಟಿ ಸಲಹಾ ಸಮಿತಿ ಸದಸ್ಯರ ತಂಡವು ಭೇಟಿ ನೀಡಿ ಪರಿಶೀಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರಾದ ಡಾ.ಸೋಮಶೇಖರ್ ಮಾತನಾಡಿ, ಸ್ಕ್ಯಾನಿಂಗ್ ಕೇಂದ್ರಗಳಿಗೆ ಆಗಾಗ ದಿಢೀರ್ ಭೇಟಿ ನೀಡಿ ತಪಾಸಣೆ ಕೈಗೊಳ್ಳಬೇಕು. ತಾಯಿ ಆರೋಗ್ಯ ಮತ್ತು ಶಿಶುವಿನ ಬೆಳವಣಿಗೆ ಸಂಬಂಧ ತಜ್ಞ ವೈದ್ಯರೇ ಸ್ಕ್ಯಾನಿಂಗ್ ಮಾಡಬೇಕು. ಈ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು ಎಂದು ಸಲಹೆ ಮಾಡಿದರು. ಸ್ಕ್ಯಾನಿಂಗ್ ಕೇಂದ್ರಕ್ಕೆ ಬರುವವರ ಹೆಸರು, ವಿಳಾಸ ಮತ್ತು ಸಮಯ ಎಲ್ಲವನ್ನು ನಿಖರವಾಗಿ ದಾಖಲಿಸಬೇಕು. ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆಯೇ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಕೆ.ಎನ್.ನಳಿನಿ ಕುಮಾರ್ ಮಾತನಾಡಿ ಸ್ಕ್ಯಾನಿಂಗ್ ಕೇಂದ್ರಗಳಿಗೆ ಆಗಾಗ ದಿಢೀರ್ ಭೇಟಿ ನೀಡುವುದರ ಜೊತೆಗೆ ಹೊಸ ಸ್ಕ್ಯಾನಿಂಗ್ ಕೇಂದ್ರ ಆರಂಭಕ್ಕೆ ಅರ್ಜಿ ಸಲ್ಲಿಸಿರುವವರ ಕೇಂದ್ರಗಳನ್ನು ಪರಿಶೀಲಿಸಬೇಕೆಂದರು.

ಸಮಿತಿ ಸದಸ್ಯರಾದ ಗೌರಮ್ಮ ಮಾದಮ್ಮಯ್ಯ, ಜಾಯ್ಸ್ ಮೆನೇಜಸ್ ಮಾಹಿತಿ ನೀಡಿದರು.

ಕೊಳ್ಳೆಗಾಲದ ಬಳಿ ರೇವ್ ಪಾರ್ಟಿ: ಪೊಲೀಸರ ಮಿಂಚಿನ ದಾಳಿ

ಬೆಂಗಳೂರಿನ ರೌಡಿ ಶೀಟರ್ ಸೇರಿದಂತೆ ಡ್ರಗ್ಸ್ ಸೇವಿಸಿದ್ದ 16 ಮಂದಿ ಬಂಧನ, ಓರ್ವ ಪರಾರಿ

- ಪಾರ್ಟಿಯಲ್ಲಿ ಸುಮಾರು 60 ಮಂದಿ ಭಾಗಿ
- ಇವರಲ್ಲಿ ಬಹುತೇಕರು ಬೆಂಗಳೂರಿನವರು
- ಕಾರಿನಲ್ಲಿ ಸಂಗ್ರಹಿಸಿಟ್ಟ ಚರಸ್ ಸೇರಿ ಇತರೆ ಡ್ರಗ್ಸ್ ವಶ
- ಪಾರ್ಟಿಯಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ವೈದ್ಯಕೀಯ ಪರೀಕ್ಷೆ


ಹಾರವನಪುರ (ಲಕ್ಷ್ಮಿಪುರ)ದಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ.


ಮಾಹಿತಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಕೊಳ್ಳೆಗಾಲ ಪೊಲೀಸರು.


ಡ್ರಗ್ಸ್ ಸೇವಿಸಿದ್ದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವ ಪೊಲೀಸರು.

ಕೊಳ್ಳೆಗಾಲ, ಏ.4 (ನಾಗೇಂದ್ರ/ಬಿಎಲ್‌ಯು)– ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ರೇವ್ ಪಾರ್ಟಿ ಮೇಲೆ ಮಿಂಚಿನ ದಾಳಿ ನಡೆಸಿದ ಗ್ರಾಮಾಂತರ ಠಾಣೆ ಪೊಲೀಸರು ಡ್ರಗ್ಸ್ ಸೇವಿಸಿದ್ದ ಬೆಂಗಳೂರಿನ ರೌಡಿ ಶೀಟರ್ ಸೇರಿದಂತೆ 16 ಮಂದಿಯನ್ನು ಶುಕ್ರವಾರ ಬಂಧಿಸಿದ್ದು, ಮತ್ತೋರ್ವ ಆರೋಪಿ ಪರಾರಿಯಾಗಿದ್ದಾನೆ. ದಾಳಿ ವೇಳೆ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೊಳ್ಳೆಗಾಲ ತಾಲೂಕು ಮಧುವನಹಳ್ಳಿ ಗ್ರಾಮದ ಬಳಿಯ ಹಾರವನಪುರ (ಲಕ್ಷ್ಮಿಪುರ) ದ ಗುತ್ತಿಗೆದಾರ ಫಯಾಜ್ ಖಾನ್ ಎಂಬುವರಿಗೆ ಸೇರಿದ ತೋಟದ ಫಂಕ್ಷನ್ ಹಾಲ್‌ನಲ್ಲಿ ಜಹೀರ್ ಅಲಿಯಾಸ್ ಖಾಲು ತನ್ನ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ರೇವ್ ಪಾರ್ಟಿ ಆಯೋಜಿಸಿದ್ದ.


ಪ್ರಮುಖ ಆರೋಪಿ ಜಹೀರ್

ರೇವ್ ಪಾರ್ಟಿಯಲ್ಲಿ ಸಿಲಿಕಾನ್ ಸಿಟಿ ಬೆಂಗಳೂರು ಹಾಗೂ ಕೊಳ್ಳೆಗಾಲದ ಹಲವರು ಭಾಗವಹಿಸಿದ್ದರು. ಈ ಬಗ್ಗೆ ಕೊಳ್ಳೆಗಾಲ ವೃತ್ತ ನಿರೀಕ್ಷಕರಾದ ಶಿವಮಾದಯ್ಯ ಅವರಿಗೆ ಖಚಿತ ಮಾಹಿತಿ ದೊರೆಯಿತು. ಈ ಸಂಬಂಧ ಡಿವೈಎಸ್ಪಿ ಧರ್ಮೇಂದ್ರ ಅವರಿಗೆ ಮಾಹಿತಿ ನೀಡಿದ ಶಿವಾದಯ್ಯ ಅವರು ತಮ್ಮ ಸಿಬ್ಬಂದಿಗಳೊಂದಿಗೆ ರೇವ್ ಪಾರ್ಟಿ ಮೇಲೆ ದಾಳಿ ಮಾಡಲು ಸಿದ್ಧರಾದರು.

ದಾಳಿ ವೇಳೆ ಆರೋಪಿಗಳು ಮಾದಕ ವಸ್ತು ಸೇವನೆ ಮಾಡಿದ್ದಾರೆಯೇ, ಇಲ್ಲವೇ ಎಂದು ಖಚಿತಪಡಿಸಿಕೊಳ್ಳಲು ಹಿರಿಯ ಲ್ಯಾಬ್ ಟೆಕ್ನಿಷಿಯನ್ ಬಾಬು ದೊರೈ ಹಾಗೂ ಪತ್ರಾಂಕಿತ ಅಧಿಕಾರಿಗಳೊಂದಿಗೆ ದಾಳಿಗೆ ಹೊರಟರು.

ಯಳಂದೂರು ಪೊಲೀಸ್ ವೃತ್ತ ನಿರೀಕ್ಷಕ ಸುಬ್ರಹ್ಮಣ್ಯ, ಹನೂರು ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಚಿಕ್ಕರಾಜ ಶೆಟ್ಟಿ, ಮಾಂಬಳ್ಳಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕರಿಬಸಪ್ಪ, ಕೊಳ್ಳೆಗಾಲ ಪಟ್ಟಣ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವರ್ಷ ಸೇರಿದಂತೆ ಇತರೆ ಸಿಬ್ಬಂದಿಗಳು ಶಿವಮಾದಯ್ಯ ಅವರ ನೇತೃತ್ವದಲ್ಲಿ ರಾತ್ರಿ 9.45 ಗಂಟೆಗೆ ರೇವ್ ಪಾರ್ಟಿ ಮೇಲೆ ದಾಳಿ ಮಾಡಿದರು.

ಪೊಲೀಸರು ಇಡೀ ಪಾರ್ಟಿ ಹಾಲ್ ಅನ್ನು ಸುತ್ತುವರೆದು ಪರಿಶೀಲನೆ ಮಾಡಿದಾಗ ಅಲ್ಲಿ ಯಾವುದೇ ಮಾದಕ ವಸ್ತು ದೊರೆಯಲಿಲ್ಲ. ಈ ವೇಳೆ ಪೊಲೀಸ್ ಶ್ವಾನ ರೂಬಿಯನ್ನು ಬಿಟ್ಟಾಗ ಅದು ಅಲ್ಲೇ ಇದ್ದ ಕಪ್ಪು ಬಣ್ಣದ ಕಾರಿನ ಸುತ್ತ ಸಂಶಯಾಸ್ಪದವಾಗಿ ಸುತ್ತುತ್ತಿತ್ತು.

ತರುವಾಯ ಕಾರಿನ ಒಳಗೆ ಪರಿಶೀಲನೆ ನಡೆಸಿದಾಗ ಅಲ್ಲಿ 45 ಸಾವಿರ ರೂಪಾಯಿ ಮೌಲ್ಯದ ಚರಸ್, ಗಾಂಜಾ ಸೇರಿದಂತೆ ಇತರೆ ಡ್ರಗ್ಸ್ ಪತ್ತೆಯಾಯಿತು. ಅಲ್ಲದೆ ಅಲ್ಲೇ ನಿಂತಿದ್ದ ಬೈಕ್‌ನ್ನು ಪರಿಶೀಲನೆ ಮಾಡಿದಾಗ ಬೈಕ್ ಪೆಟ್ರೋಲ್ ಟ್ಯಾಂಕ್ ಕವರ್‌ನಲ್ಲಿ ಕೂಡ ಗಾಂಜಾ ಪತ್ತೆಯಾಯಿತು.

ರೇವ್ ಪಾರ್ಟಿಯಲ್ಲಿ ಭಾಗಿಯಾಗಿದ್ದ ಸುಮಾರು 50 ರಿಂದ 60 ಮಂದಿಯನ್ನು ಲ್ಯಾಬ್ ಟೆಕ್ನಿಷಿಯನ್ ಬಾಬು ದೊರೆ ಅವರ ಮೂಲಕ ABON URINE TEST DRUG SCREEN CASSETTE ಪರೀಕ್ಷೆಗೆ ಒಳಪಡಿಸಿದಾಗ ಹಲವರು ಡ್ರಗ್ಸ್ ಸೇವಿಸಿರುವುದು ದೃಢಪಟ್ಟಿದೆ.

ಪ್ರಮುಖ ಆರೋಪಿ ಜಹೀರ್ ಅಲಿಯಾಸ್ ಖಾಲು, ಉಮೇರ್ ಖಾನ್, ಶೇಕ್ ಮೊಹಮ್ಮದ್, ನಿಸಾರ್ ಖಾನ್, ಸೈಯದ್ ಯೂನಸ್, ಸದ್ರುಲ್ಲಾ, ಇಲಿಯಾಸ್ ಖಾನ್, ಶಬಾಜ್, ಶಪರುದ್ದೀನ್, ಪವನ್, ಸಾದೀಕ್, ಅಜ್ಮಲ್ ಬೇಗ್, ಮೊಹಮ್ಮದ್ ಶಕೀಲ್, ಕುಮಾರ ಸ್ವಾಮಿ ಹಾಗೂ ನವೀನ್ ರಾಜ್ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಈ ಪ್ರಕರಣದಲ್ಲಿ 45 ಸಾವಿರ ರೂಪಾಯಿ ಮೌಲ್ಯದ ಮಾದಕ ವಸ್ತು ಹಾಗೂ 10.50 ಲಕ್ಷ ಮೌಲ್ಯದ ವಾಹನಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಅಲ್ಲದೆ 17 ಆರೋಪಿಗಳನ್ನು ಬಂಧಿಸಿದ್ದಾರೆ.

ರೇವ್ ಪಾರ್ಟಿಗೆ ಬೆಂಗಳೂರು ಬಿಟ್ಟು ಹಳ್ಳಿ ಆಯ್ಕೆ

ಸಾಮಾನ್ಯವಾಗಿ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ರೇವ್ ಪಾರ್ಟಿ ನಡೆಯುತ್ತದೆ. ಪೊಲೀಸರು ಹಲವು ರೇವ್ ಪಾರ್ಟಿ ಮೇಲೆ ದಾಳಿ ಮಾಡಿರುವ ನಿದರ್ಶನಗಳಿವೆ.

ಬೆಂಗಳೂರಿನಲ್ಲಿ ರೇವ್ ಪಾರ್ಟಿ ಮಾಡಿದರೆ ಸಿಕ್ಕಿ ಬೀಳುತ್ತೇವೆ ಎಂದು ಬೆಂಗಳೂರಿನ ಜನರು ಈಗ ಹಳ್ಳಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದರಿಂದ ಹಳ್ಳಿಗಳಲ್ಲಿ ನಡೆಯುವ ಹುಟ್ಟುಹಬ್ಬ ಆಚರಣೆಗಳನ್ನು ಕೂಡ ಸಂಶಯದಿಂದ ನೋಡುವ ಪರಿಸ್ಥಿತಿ ಬಂದಿದೆ.

ಬೆಂಗಳೂರಿನ ಸಮೀರ್ ಎಂಬಾತ ತನ್ನ ಸ್ನೇಹಿತ ಜಹೀರ್ ಹುಟ್ಟುಹಬ್ಬಕ್ಕೆ ಡ್ರಗ್ಸ್ ಹಾಗೂ ಗಾಂಜಾ ನೀಡಿದ್ದನು ಎಂಬ ವಿಚಾರ ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ಬೆಂಗಳೂರಿನ ರೌಡಿ ಶೀಟರ್ ಜಹೀರ್ ಅಲಿಯಾಸ್ ಖಾಲು ಈ ರೇವ್ ಪಾರ್ಟಿ ಆಯೋಜಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಗ್ಗೋಠಾರ ಡೇರಿ ಕಾಂಗ್ರೆಸ್ ತೆಕ್ಕೆಗೆ


ಡೇರಿಯ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆಯ್ಕೆಯಾದ ನಂಜುಂಡಸ್ವಾಮಿ, ಪಾಪನಾಯಕ ಅವರನ್ನು ಅಭಿನಂದಿಸಲಾಯಿತು.

ಚಾಮರಾಜನಗರ, ಏ.4– ತಾಲೂಕಿನ ಹೆಗ್ಗೋಠಾರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ನಂಜುಂಡಸ್ವಾಮಿ, ಉಪಾಧ್ಯಕ್ಷರಾಗಿ ಪಾಪನಾಯಕ ಅವಿರೋಧ ಆಯ್ಕೆಯಾದರು.

ಹೆಗ್ಗೋಠಾರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಂಜುಂಡಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಪಾಪನಾಯಕ ನಾಮಪತ್ರ ಸಲ್ಲಿಸಿದರು. ಈ ಸ್ಥಾನಗಳಿಗೆ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ಸಹಕಾರ ಸಂಘಗಳ ಸಹಾಯಕ ನಿಬಂಧಕ ಕಚೇರಿ ಅಧೀಕ್ಷಕ ನಾಗೇಶ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಹೆಚ್.ಎಂ.ಪರಶಿವಮೂರ್ತಿ, ಬಿ.ಗುರುಮಲ್ಲಪ್ಪ, ಪುಟ್ಟಮಲ್ಲಪ್ಪ, ಮಲ್ಲೇಶ್, ಹೆಚ್.ಬಿ.ಮಹೇಶ್‌ಚಿನ್ನಮ್ಮ, ಸುಬ್ಬಮ್ಮ, ರಮೇಶ್, ಎಂ.ಮಹೇಶ್, ಮಹದೇವಯ್ಯ ನಂತರ ಕಾಂಗ್ರೆಸ್ ಪಕ್ಷದ ಮುಖಂಡರು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿದ ನೂತನ ಅಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ ತಮ್ಮನ್ನು ಅವಿರೋಧವಾಗಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ನಿರ್ದೇಶಕರಿಗೆ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಇದೇ ವೇಳೆ ಕಾಂಗ್ರೆಸ್ ಮುಖಂಡರಾದ ಬದನಗುಪ್ಪೆ ನಾಗರಾಜಮೂರ್ತಿ, ಮಲೆಯೂರು ಕುಮಾರ್, ದುಂಡು ಮಾದಯ್ಯ, ಮಹದೇವಪ್ಪ, ಉಮೇಶ್, ಹೆಚ್.ಎನ್.ನಾಗೇಂದ್ರ, ನವೀನ್, ಬಸವಣ್ಣ, ಕುಮಾರ್, ರಂಗಸ್ವಾಮಿ ನಾಯಕ ಸೇರಿದಂತೆ ಇತರರು ಇದ್ದರು.

ನೊಂದವರ ಧ್ವನಿ ಕರ್ನಾಟಕ ರಾಜ್ಯ ಭೀಮ್ ಸೇನೆ ಧ್ಯೇಯ

ಚಾಮರಾಜನಗರ ಜಿಲ್ಲಾ ಘಟಕ ನೂತನ ಅಧ್ಯಕ್ಷರಾಗಿ ಮಾದಯ್ಯ ಹಾಗೂ ಪದಾಧಿಕಾರಿಗಳ ನೇಮಕ


ಚಾಮರಾಜನಗರ ಜಿಲ್ಲಾ ಘಟಕಕ್ಕೆ ನೂತನವಾಗಿ ನೇಮಕವಾದ ಪದಾಧಿಕಾರಿಗಳನ್ನು ಸೇನೆಯ ರಾಜ್ಯಾಧ್ಯಕ್ಷ ಸರ್ವೇಶ್ ಸನ್ಮಾನಿಸಿದರು.

ಚಾಮರಾಜನಗರ: ರಾಜ್ಯದಲ್ಲಿ ನೊಂದವರ ಧ್ವನಿಯಾಗಿ ಕರ್ನಾಟಕ ರಾಜ್ಯ ಭೀಮ್ ಸೇನೆ ಕೆಲಸ ಮಾಡುತ್ತದೆ ಎಂದು ಸೇನೆಯ ರಾಜ್ಯಾಧ್ಯಕ್ಷ ಸರ್ವೇಶ್ ಹೇಳಿದರು.

ನಗರದ ಪ್ರವಾಸಿಮಂದಿರದಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆ ವತಿಯಿಂದ ನಡೆದ ಸಭೆಯಲ್ಲಿ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿ ಅವರಿಗೆ ಸಂಘಟನೆಯ ಶಲ್ಯಹಾಕಿ ಸನ್ಮಾನಿಸಿ ಮಾತನಾಡಿದರು.

ಎಸ್ಸಿ ಎಸ್ಟಿ ಸಮುದಾಯ ಅಲ್ಲದೇ ಇತರ ಸಮುದಾಯಗಳಲ್ಲಿ ನೊಂದವರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳನ್ನು ತಲುಪಿಸುವುದು ಸೇನೆಯ ಉದ್ದೇಶವಾಗಿದೆ. ರಾಜ್ಯಾದ್ಯಂತ ಬಗರ್ ಹುಕುಂ ಸಾಗುವಳಿ ತೊಂದರೆ ಅನುಭವಿಸುತ್ತಿದ್ದಾರೆ. ದೌರ್ಜನ್ಯಕ್ಕೊಳಗಾದವರಿಗೆ ನ್ಯಾಯ ಕೊಡಿಸುವುದು ಸಂಘಟನೆ ಉದ್ದೇಶವಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಕಾಡಂಚಿನ ಗ್ರಾಮಗಳಿಗೆ ಮೂಲ ಸೌಕರ್ಯಗಳ ಒದಗಿಸಲು ಹೋರಾಟ ಮಾಡಲಾಗುತ್ತದೆ ಆಗಾಗಿ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು ಸಂಘಟನೆ ಮಾಡಿ ಭೀಮ್ ಸೇನೆ ಸದೃಡಗೊಳಿಸುವಂತೆ ಸಲಹೆ ನೀಡಿದರು.

ಈಗಾಗಲೇ ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಜಿಲ್ಲಾ ಘಟಕ ಸ್ಥಾಪನೆಯಾಗಿದ್ದು, ರಾಜ್ಯದ 31 ಜಿಲ್ಲೆಗಳಲ್ಲೂ ಸಂಘಟನೆ ವಿಸ್ತರಣೆ ಮಾಡಿ ನೊಂದವರ ಧ್ವನಿಯಾಗಿ ಕೆಲಸ ಮಾಡಲಾಗುತ್ತದೆ ಎಂದರು.

ಸಭೆಯಲ್ಲಿ ಮೈಸೂರು ಜಿಲ್ಲಾಧ್ಯಕ್ಷ ರಾಜಣ್ಣ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಮಹೇಶ್, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಶೇಖರ್, ಚಾಮರಾಜನಗರ ಜಿಲ್ಲಾಧ್ಯಕ್ಷ ಎಸ್.ಮಾದಯ್ಯ ತಮ್ಮಡಹಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ರಘು, ತಾಲೂಕು ಅಧ್ಯಕ್ಷ ಗುರುಸ್ವಾಮಿ ಕೆರೆಹಳ್ಳಿ, ಉಪಾಧ್ಯಕ್ಷ ಗಿರೀಶ್, ಜಿಲ್ಲಾ ಮಹಿಳಾ ಗೌರವಾಧ್ಯಕ್ಷೆ ಕಮಲ, ಜಿಲ್ಲಾಧ್ಯಕ್ಷೆ ಅಣ್ಣಪೂರ್ಣ, ಪ್ರಧಾನ ಕಾರ್ಯದರ್ಶಿ ಡಿ.ದೊಡ್ಡತಾಯಮ್ಮ ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 05–04–2026
ಪುಟ 9



ಲೈಕ್ಸ್, ಕಾಮೆಂಟ್ಸ್!
-ಕ್ಷಣಿಕ ಸಂತೋಷವಷ್ಟೇ

ಡಾ.ಡಿ.ಸಿ ನಂಜುಂಡ
ಸಹಪ್ರಾಧ್ಯಾಪಕರು, ಮೈಸೂರು ವಿ.ವಿ
ಮೊ: 9008164514

ಇಂದಿನ ಡಿಜಿಟಲ್ ಯುಗದಲ್ಲಿ, ಒಂದು ಪೋಸ್ಟ್‌ಗೆ ಸಾಮಾಜಿಕ ಜಾಲತಾಣದಲ್ಲಿ ಎಷ್ಟು ಲೈಕ್ಸ್ ಬಂದವು, ಎಷ್ಟು ಜನ ಕಾಮೆಂಟ್ ಮಾಡಿದರು ಎಂಬುದೇ ಹಲವರ ಜೀವನದ ಪ್ರಮುಖ ಚಿಂತೆಯಾಗಿದೆ. ಸಾಮಾಜಿಕ ಜಾಲತಾಣಗಳು ನಮ್ಮ ದೈನಂದಿನ ಬದುಕಿನ ಒಂದು ಅವಿಭಾಜ್ಯ ಭಾಗವಾಗಿ ಹೋಗಿವೆ. ಆದರೆ ನಾವು ಗಮನಿಸಬೇಕಾದ ಪ್ರಮುಖ ಮುಖ್ಯ ಸತ್ಯ ಏನೆಂದರೆ ಲೈಕ್ಸ್ ಮತ್ತು ಕಾಮೆಂಟ್ಸ್ ನಿಜ ಜೀವನವನ್ನು ಪ್ರತಿಬಿಂಬಿಸುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ನಾವು ನೋಡೋದು ಸಂಪೂರ್ಣ ಸತ್ಯವಲ್ಲ. ಅಲ್ಲಿ ಎಲ್ಲವೂ ಆಯ್ದ ಕ್ಷಣಗಳ ಸಂಕಲನ. ಜನರು ತಮ್ಮ ಜೀವನದ ಉತ್ತಮ ಕ್ಷಣಗಳನ್ನು ಮಾತ್ರ ಹಂಚಿಕೊಳ್ಳುತ್ತಾರೆ. ಸಂತೋಷದ ಕ್ಷಣಗಳು, ಸಾಧನೆಗಳು, ಪ್ರವಾಸಗಳು, ನಗುಮುಖಗಳು.

ಆದರೆ ಅವರ ನೋವು, ಆತಂಕ, ವಿಫಲತೆ, ಹೋರಾಟಗಳನ್ನು ಬಹಳ ಕಡಿಮೆ ಜನ ಹಂಚಿಕೊಳ್ಳುತ್ತಾರೆ. ಇದರಿಂದ ನಾವು ನೋಡೋದು ಒಂದು ಅಲಂಕೃತ ಜೀವನ ಅದೇ ಸಂಪೂರ್ಣ ಚಿತ್ರವಲ್ಲ. ಇದನ್ನು ನಿಜ ಜೀವನದೊಂದಿಗೆ ಹೋಲಿಸಿದರೆ, ನಾವು ತಪ್ಪು ನಿರ್ಧಾರಗಳಿಗೆ ಬರುತ್ತೇವೆ. ಇದರಿಂದ ಬಹಳ ಜನರಲ್ಲಿ ಹೋಲಿಕೆ ಮಾಡುವ ಪ್ರವೃತ್ತಿ ಹೆಚ್ಚುತ್ತದೆ. ಅವನು ಇಷ್ಟು ಸಾಧಿಸಿದ್ದಾನೆ. ನನಗೆ ಏಕೆ ಆಗುತ್ತಿಲ್ಲ, ಅವಳು ಎಷ್ಟು ಖುಷಿಯಾಗಿದ್ದಾಳೆ, ನಾನು ಏಕೆ ಇಲ್ಲ ಎಂಬ ಪ್ರಶ್ನೆಗಳು ಮನಸ್ಸನ್ನು ಕಾಡುತ್ತವೆ. ಆದರೆ ಈ ಪ್ರಶ್ನೆಗಳ ಮೂಲವೇ ತಪ್ಪಾಗಿದೆ. ಏಕೆಂದರೆ, ನಾವು ಹೋಲಿಸುತ್ತಿರುವುದು ನಿಜ ಜೀವನವಲ್ಲ, ಅದೊಂದು ಭಾವರೂಪ.

ಜೀವನದಲ್ಲಿ ಲೈಕ್ಸ್ ಮತ್ತು ಕಾಮೆಂಟ್ಸ್ ತಾತ್ಕಾಲಿಕ. ಇಂದು ನಿಮ್ಮ ಪೋಸ್ಟ್ ವೈರಲ್ ಆಗಬಹುದು, ನಾಳೆಗೆ ಅದು ನೆನಪಿರಲಾರದು. ಆನ್ಲೈನ್ ಲೋಕದಲ್ಲಿ ಗಮನ ತುಂಬಾ ವೇಗವಾಗಿ ಬದಲಾಗುತ್ತದೆ. ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿವೆ, ಜನರ ಆಸಕ್ತಿಗಳು ಬದಲಾಗುತ್ತಿವೆ. ಆದ್ದರಿಂದ, ನಮ್ಮ ಆತ್ಮಗೌರವವನ್ನು ಇಂತಹ ಅಸ್ಥಿರ ಅಂಶಗಳ ಮೇಲೆ ಅವಲಂಬಿಸುವುದು ಅಪಾಯಕಾರಿ. ನಿಜ ಜೀವನದಲ್ಲಿ ಮುಖ್ಯವಾದವು ಇವುಗಳಲ್ಲ. ನಿಜವಾದ ಸಂಬಂಧಗಳು ಕಾಮೆಂಟ್ ಬಾಕ್ಸ್‌ನಲ್ಲಿ ಹುಟ್ಟುವುದಿಲ್ಲ. ಅವು ಮಾತುಕತೆಗಳಿಂದ, ಸಮಯ ಕಳೆಯುವುದರಿಂದ, ಪರಸ್ಪರ ನಂಬಿಕೆಯಿಂದ ಬೆಳೆಯುತ್ತವೆ. ಸ್ನೇಹ, ಪ್ರೀತಿ, ಕುಟುಂಬ ಇವುಗಳನ್ನು ಲೈಕ್ಸ್ ಮೂಲಕ ಅಳೆಯಲಾಗುವುದಿಲ್ಲ. ಒಬ್ಬನು ನಿಮ್ಮ ಪೋಸ್ಟ್‌ಗೆ ಲೈಕ್ ಮಾಡದಿದ್ದರೂ, ಅವನು ನಿಮ್ಮ ಜೀವನದಲ್ಲಿ ಪ್ರಮುಖ ವ್ಯಕ್ತಿಯಾಗಿರಬಹುದು.


ಅದೇ ರೀತಿ, ವ್ಯಕ್ತಿಗತ ಬೆಳವಣಿಗೆ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸುವುದಿಲ್ಲ. ಅದು ಶ್ರಮದಿಂದ, ವಿಫಲತೆಗಳಿಂದ, ಅನುಭವಗಳಿಂದ ಬರುತ್ತದೆ. ಸಾಧನೆಯ ಪ್ರಯಾಣ ಬಹಳ ಸಲ ನಿಶ್ಶಬ್ದವಾಗಿರುತ್ತದೆ. ಯಾರೂ ಅದನ್ನು ಗಮನಿಸದಿದ್ದರೂ, ಅದು ಜೀವನದ ಅತ್ಯಂತ ಮಹತ್ವದ ಭಾಗ. ಆದರೆ ಇದಕ್ಕೆ ಯುವಜನರು ತಲೆಕೆಡಿಸಿಕೊಳ್ಳುತ್ತಿಲ್ಲ. ಇನ್ನು ಒಂದು ಪ್ರಮುಖ ಅಂಶ ಎಂದರೆ, ಆನ್‌ಲೈನ್ ಮೆಚ್ಚುಗೆ ಕಾತರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೆಚ್ಚು ಲೈಕ್ಸ್ ಬರದಿದ್ದರೆ ನಿರಾಶೆ, ಆತಂಕ, ಆತ್ಮವಿಶ್ವಾಸ ಕುಗ್ಗುವುದು. ಕೆಲವರು ತಮ್ಮ ನಿಜವಾದ ವ್ಯಕ್ತಿತ್ವವನ್ನು ಬಿಟ್ಟು, ಇತರರಿಗೆ ಇಷ್ಟವಾಗುವ ರೀತಿಯಲ್ಲಿ ಜಾಲತಾಣದಲ್ಲಿ ವರ್ತಿಸಲು ಪ್ರಾರಂಭಿಸುತ್ತಾರೆ. ಇದರಿಂದ ಅವರು ತಮ್ಮ ಸ್ವತಂತ್ರತೆಯನ್ನು ಕಳೆದುಕೊಳ್ಳುತ್ತಾರೆ.



ನಮ್ಮ ಜೀವನದ ಅತ್ಯಂತ ಶ್ರೇಷ್ಠ ಕ್ಷಣಗಳು ಸಾಮಾನ್ಯವಾಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಆಗುವುದಿಲ್ಲ. ಅಂತರಂಗದ ಖುಷಿಗಳು, ಪ್ರಕೃತಿಯ ಸೌಂದರ್ಯದ ಆರಾಧನೆ, ಪುಸ್ತಕ ಓದುವ ಆತ್ಮೀಯರೊಂದಿಗೆ ಸಂಭಾಷಣೆ ಇವು ಲೈಕ್ಸ್ ನೀಡುವುದಿಲ್ಲ, ಆದರೆ ನಮ್ಮ ಜೀವನವನ್ನು ಸಂಪೂರ್ಣಗೊಳಿಸುತ್ತವೆ. ಲೈಕ್ಸ್ ಮತ್ತು ಕಾಮೆಂಟ್ಸ್‌ಗೆ ಹೆಚ್ಚು ಅವಲಂಬಿತವಾಗಿರುವುದು ಒತ್ತಡ, ಆತಂಕ, ಅನಾರೋಗ್ಯವನ್ನು ತರಬಹುದು. ನಿಜ ಜೀವನದಲ್ಲಿ ಪ್ರತಿಯೊಬ್ಬರ ಬೆಳವಣಿಗೆ ಮತ್ತು ಯಶಸ್ಸಿನ ಸಮಯ ವಿಭಿನ್ನ. ಅದನ್ನು ಸ್ಪರ್ಧೆಯಂತೆ ನೋಡುವುದರಿಂದ ಒತ್ತಡ ಹೆಚ್ಚಾಗುತ್ತದೆ. ಆದರೆ ಸ್ವತಃ ಅಭ್ಯಾಸ, ಶ್ರಮ ಮತ್ತು ಸಂತೋಷವನ್ನು ಗಮನಿಸಿದರೆ ನಿಜ ಜೀವನದಲ್ಲಿ ಸಮಾಧಾನ ಲಭಿಸುತ್ತದೆ.

ಸಾಮಾಜಿಕ ಜಾಲತಾಣಗಳು ಸಂಪೂರ್ಣವಾಗಿ ಕೆಟ್ಟವು ಎಂದು ಹೇಳಲು ಸಾಧ್ಯವಿಲ್ಲ. ಅವು ಸಂಪರ್ಕ ಸಾಧಿಸಲು, ಅಭಿಪ್ರಾಯ ಹಂಚಿಕೊಳ್ಳಲು, ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸುವುದು ಮುಖ್ಯ. ಅವುಗಳನ್ನೇ ನಮ್ಮ ಜೀವನದ ಅಳತೆಯಾಗಿಸಬಾರದು. ನಾವು ನಮಗೆ ಕೇಳಬೇಕಾದ ಪ್ರಶ್ನೆ ನಾನು ಸಂತೋಷವಾಗಿದ್ದೇನೆನಾ ಎಂಬುದು. ಈ ಪ್ರಶ್ನೆಗೆ ಉತ್ತರ ಲೈಕ್ಸ್‌ನಲ್ಲಿ ಇಲ್ಲ, ಕಾಮೆಂಟ್ಸ್‌ನಲ್ಲಿ ಇಲ್ಲ. ಅದು ನಮ್ಮ ಒಳಮನಸ್ಸಿನಲ್ಲಿ ಇದೆ. ನಮ್ಮ ಗುರಿಗಳು, ನಮ್ಮ ಪ್ರಯತ್ನಗಳು, ನಮ್ಮ ಸಂಬಂಧಗಳು ಇವುಗಳೇ ನಿಜವಾದ ಸಂತೋಷದ ಮೂಲ. ಸಾಮಾಜಿಕ ಜಾಲತಾಣಗಳು ಹೆಚ್ಚು ಜನರ ಗಮನ ಸೆಳೆಯುವಂತಿವೆ. ಆದರೆ ಅವು ವೈಯಕ್ತಿಕ ನಿರೀಕ್ಷೆಗಳಿಗೆ ಸಡಿಲಿಕೆಯೂ ಆಗಬಹುದು. ಕೆಲವು ವೇಳೆ ನಾವು ನಮ್ಮ ಬದುಕನ್ನು ಅವರ ಲೈಕ್ಸ್ ಎಂಬ ಮಾನದಂಡದ ಮೇಲೆ ಅಳೆಯುತ್ತೇವೆ. ಆದರೆ ನಿಜ ಜೀವನದಲ್ಲಿ ಪ್ರತಿಯೊಬ್ಬರ ಪಥ ವಿಭಿನ್ನ ಒಬ್ಬರ ಯಶಸ್ಸು ನಿಮ್ಮ ಸೋಲನ್ನು ನಿರ್ಧರಿಸುವುದಿಲ್ಲ. ಹೀಗಾಗಿ, ವೈಯಕ್ತಿಕ ಸಾಧನೆಗೆ ಲೈಕ್ಸ್ ಅಥವಾ ಕಾಮೆಂಟ್ ಅಗತ್ಯವಿಲ್ಲ.

ಲೈಕ್ಸ್‌ಗಳು ಅಥವಾ ಶೇರ್‌ಗಳು ನಮ್ಮ ಗೌರವ ಅಥವಾ ಆತ್ಮವಿಶ್ವಾಸವನ್ನು ನಿರ್ಧರಿಸುತ್ತವೆಯೇ ಎಂಬುದನ್ನು ಪ್ರಶ್ನಿಸಬೇಕು. ನಿಜವಾದ ಆತ್ಮವಿಶ್ವಾಸವು ಒಳಗಿನ ಶಕ್ತಿ, ಶ್ರಮ, ಮತ್ತು ಸಾಧನೆಯ ಮೇಲೆ ಆಧಾರಿತ. ನಾವು ಮಾಡಿದ ಉತ್ತಮ ಕೆಲಸ ಅಥವಾ ಯಾರಿಗೂ ತಿಳಿಸದೆ ಸಾಧಿಸಿದ ಉತ್ಸಾಹ ಇವುಗಳು ಲೈಕ್ಸ್‌ಗೆ ಮೌಲ್ಯಹೀನವಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ ಸೃಜನಶೀಲತೆ, ಚಿತ್ರ, ಅಥವಾ ಲೇಖನಕ್ಕೆ ಯಾವ ರೀತಿ ಪ್ರತಿಕ್ರಿಯೆ ಬಂತು ಎನ್ನುವುದೇ ಅಂತಿಮ ಮಾನದಂಡವಲ್ಲ. ಆದರೆ ನಿಜ ಜೀವನದಲ್ಲಿ ಸೃಜನಶೀಲತೆಯ ಮೌಲ್ಯ ಇನ್ನೊಬ್ಬರ ಕ್ಷಣಿಕ ಪ್ರತಿಕ್ರಿಯೆಯಲ್ಲ, ಅದರಿಂದ ಕಲಿತ ಅನುಭವ ಪೂರ್ತಿಯಾಗುವ ತೃಪ್ತಿಯಲ್ಲಿದೆ. ಅನೇಕ ಮಹಾನ್ ಕಲಾವಿದರು ತಮ್ಮ ಕೆಲಸದ ಪ್ರತಿಫಲವನ್ನು ತಕ್ಷಣವೇ ಪಡೆಯಲಿಲ್ಲ. ಅದನ್ನು ವರ್ಷಗಳ ನಂತರ ಮಾತ್ರ ಪಡೆದರು ಎನ್ನಬಹುದು.



ನಿಜ ಜೀವನದ ಸಂಬಂಧಗಳು ಲೈಕ್ಸ್ ಮತ್ತು ಕಾಮೆಂಟ್‌ಗಳ ಮೂಲಕ ಅಳತೆಯಾಗುವುದಿಲ್ಲ. ಸ್ನೇಹಿತರು ನಿಮ್ಮೊಂದಿಗೆ ಸಮಯ ಕಳೆಯುತ್ತಾರೆ, ಶ್ರಮದಲ್ಲಿ ಬೆಂಬಲಿಸುತ್ತಾರೆ, ನಿಮ್ಮ ನೋವಿನಲ್ಲಿ ನಿಮ್ಮ ಜೊತೆ ನಿಂತಿರುತ್ತಾರೆ. ಇದಕ್ಕೆಲಾ ಲೈಕ್ಸ್ ಅವಶ್ಯವಿಲ್ಲ. ಲೈಕ್ಸ್, ಕಾಮೆಂಟ್‌ಗಳು ತಾತ್ಕಾಲಿಕ; ಆದರೆ ನಿಜ ಜೀವನದಲ್ಲಿ ಸಮಯ, ಶಾಂತಿ, ನೆಮ್ಮದಿ ಮತ್ತು ಆರೋಗ್ಯವೇ ಬಹುಮೌಲ್ಯ ಒಂದೇ ದಿನದಲ್ಲಿ ಪೋಸ್ಟ್‌ಗಳಿಗೆ ಹೆಚ್ಚಿನ ಪ್ರತಿಕ್ರಿಯೆ ಬರುವುದಿಲ್ಲ ಎಂದು ಆತಂಕ ಪಡುವುದು ಅಥವಾ ಲೈಕ್ಸ್ ಕಡಿಮೆ ಬಂದಿದ್ದರೆ ಕೊರಗುವುದು ಉಪಯೋಗವಿಲ್ಲ. ಮಾನಸಿಕ ಶಾಂತಿಯನ್ನು ಹೊಂದುವುದು, ಸಮಯವನ್ನು ಸ್ವಂತ ಬದುಕಿಗೆ ಮೀಸಲು ಮಾಡುವುದು, ತುಂಬಾ ಅಗತ್ಯ. ನಮ್ಮ ಜೀವನದ ಅತ್ಯಂತ ಶ್ರೇಷ್ಠ ಕ್ಷಣಗಳು ಸಾಮಾನ್ಯವಾಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಆಗುವುದಿಲ್ಲ. ಅಂತರಂಗದ ಖುಷಿಗಳು, ಪ್ರಕೃತಿಯ ಸೌಂದರ್ಯದ ಆರಾಧನೆ, ಪುಸ್ತಕ ಓದುವ ಆತ್ಮೀಯರೊಂದಿಗೆ ಸಂಭಾಷಣೆ ಇವು ಲೈಕ್ಸ್ ನೀಡುವುದಿಲ್ಲ, ಆದರೆ ನಮ್ಮ ಜೀವನವನ್ನು ಸಂಪೂರ್ಣಗೊಳಿಸುತ್ತವೆ. ಲೈಕ್ಸ್ ಮತ್ತು ಕಾಮೆಂಟ್ಸ್‌ಗೆ ಹೆಚ್ಚು ಅವಲಂಬಿತವಾಗಿರುವುದು ಒತ್ತಡ, ಆತಂಕ, ಅನಾರೋಗ್ಯವನ್ನು ತರಬಹುದು. ನಿಜ ಜೀವನದಲ್ಲಿ ಪ್ರತಿಯೊಬ್ಬರ ಬೆಳವಣಿಗೆ ಮತ್ತು ಯಶಸ್ಸಿನ ಸಮಯ ವಿಭಿನ್ನ. ಅದನ್ನು ಸ್ಪರ್ಧೆಯಂತೆ ನೋಡುವುದರಿಂದ ಒತ್ತಡ ಹೆಚ್ಚಾಗುತ್ತದೆ. ಆದರೆ ಸ್ವತಃ ಅಭ್ಯಾಸ, ಶ್ರಮ ಮತ್ತು ಸಂತೋಷವನ್ನು ಗಮನಿಸಿದರೆ ನಿಜ ಜೀವನದಲ್ಲಿ ಸಮಾಧಾನ ಲಭಿಸುತ್ತದೆ.

ನಮ್ಮ ಮೆದುಳಿನಲ್ಲಿ ಡೋಪಮಿನ್ ಎಂಬ ರಾಸಾಯನಿಕವಿದೆ, ಇದು ಸಂತೋಷ, ಸ್ಫೂರ್ತಿ, ಪ್ರಶಂಸೆ ಇತ್ಯಾದಿ ಸಮಯದಲ್ಲಿ ಬಿಡುಗಡೆ ಆಗುತ್ತದೆ. ಲೈಕ್ ಅಥವಾ ಪ್ರೀತಿಯ ಕಾಮೆಂಟ್ ಬರುವುದರಿಂದ ಸ್ವಲ್ಪ ಉಲ್ಲಾಸ ಉಂಟಾಗುತ್ತದೆ. ಈ ಅನುಭವವನ್ನು ನಾವು ಪುನಃ ಪುನಃ ಪಡೆಯಲು ಇಚ್ಛಿಸುತ್ತೇವೆ. ಇದರಿಂದ ಅಡಿಕ್ಷನ್ ಹಂತದ ಹೋರಾಟ ಉಂಟಾಗಬಹುದು ಎಂದು ಹಲವಾರು ಅಧ್ಯಯನಗಳು ತೋರಿಸುತ್ತವೆ: ಹೆಚ್ಚು ಲೈಕ್ಸ್–ಕಾಮೆಂಟ್ ಅವಲಂಬನೆ ಇರುವವರು ನಿರಾಶೆ, ಆತ್ಮಹೀನತೆ ಮತ್ತು ಒತ್ತಡದ ಹೊಗೆ ಹೆಚ್ಚು ಅನುಭವಿಸುತ್ತಾರೆ. ಹೋಲಿಕೆಯ ಮನೋಭಾವ ಎಂಬುದು ಇಲ್ಲಿ ಉಂಟಾಗುತ್ತದೆ. ನಾವು ನಮ್ಮ ಬದುಕನ್ನು ಇತರರ ಆಯ್ದ ಕ್ಷಣಗಳೊಂದಿಗೆ ಹೋಲಿಸುತ್ತೇವೆ, ಆದರೆ ಇವೆಲ್ಲಾ ನಮ್ಮ ಜೀವನವನ್ನು ಪ್ರತಿಬಿಂಬಿಸುವುದಿಲ್ಲ.


ಇಂದು Fear Of Missing Out ಎಂಬ ಮನೋಭಾವವು ಸಾಮಾಜಿಕ ಜಾಲತಾಣಗಳಲ್ಲಿ ಸಾಮಾನ್ಯವಾಗಿದೆ. ಲೈಕ್ಸ್, ಕಾಮೆಂಟ್ಸ್ ಇಲ್ಲದಿದ್ದರೆ ಕೆಲವರು ತಮ್ಮ ಮೇಲಿನ ಇತರರ ಗಮನ ತಪ್ಪಿದೆ ಎಂದು ಭಾವಿಸುತ್ತಾರೆ. ಇದರಿಂದ ಒತ್ತಡ, ಉದ್ವೇಗ ಉಂಟಾಗುತ್ತದೆ. ಮಾನಸಶಾಸ್ತ್ರದಲ್ಲಿ, ಈ ಭಾವವನ್ನು ನಿಯಂತ್ರಿಸಲು ಧ್ಯಾನ, ಡಿಜಿಟಲ್ ಉಪವಾಸ, ಯೋಗ ಮುಂತಾದ ಸೂಕ್ಷ್ಮ ತಂತ್ರಗಳನ್ನು ಶಿಫಾರಸು ಮಾಡಲಾಗಿದೆ. ನಿಜ ಜೀವನವು ಕ್ಯಾಮೆರಾದ ಮುಂದೆ ಮಾತ್ರ ನಡೆಯುವುದಿಲ್ಲ. ಅದು ಕ್ಯಾಮೆರಾದ ಹಿಂದೆ ನಡೆಯುತ್ತದೆ. ನಾವು ಯಾರೂ ನೋಡದಾಗ, ನಾವು ನಿಜವಾಗಿಯೂ ಯಾರು ಎಂಬುದರಲ್ಲಿ ಇದೆ.

ನಮ್ಮ ಸಣ್ಣ ಜಯಗಳು, ನಮ್ಮ ಹೋರಾಟಗಳು, ನಮ್ಮ ಕನಸುಗಳು ಇವುಗಳನ್ನು ಯಾವುದೇ ಸಾಮಾಜಿಕ ಜಾಲತಾಣ ಸಂಪೂರ್ಣವಾಗಿ ಹಿಡಿದುಕೊಳ್ಳಲು ಸಾಧ್ಯವಿಲ್ಲ. ನಿಜ ಜೀವನದಲ್ಲಿ, ನಮ್ಮ ಸಾಧನೆಗಳು, ವೈಯಕ್ತಿಕ ಸಂಬಂಧಗಳು, ಆರೋಗ್ಯ, ಸಂತೋಷ ಇವು ಲೈಕ್ಸ್ ಅಥವಾ ಕಾಮೆಂಟ್ಸ್‌ನಲ್ಲಿ ಮೌಲ್ಯ ಮಾಪನಕ್ಕೆ ಬಂದಿರುವುದಿಲ್ಲ ಲೈಕ್ಸ್ ಮತ್ತು ಕಾಮೆಂಟ್ಸ್ ನಮ್ಮ ಜೀವನವನ್ನು ನಿರ್ಧರಿಸುವುದಿಲ್ಲ. ನಮ್ಮ ಮೌಲ್ಯವನ್ನು ಒಂದು ನಿರ್ದಿಷ್ಟ ಸಂಖ್ಯೆಯಲ್ಲಿ ಅಳೆಯಲು ಸಾಧ್ಯವಿಲ್ಲ. ನಿಜವಾದ ಜೀವನವು ಅಂಕೆಗಳಲ್ಲಿ ಅಲ್ಲ, ಅನುಭವಗಳಲ್ಲಿ ಇದೆ.

ಆದ್ದರಿಂದ, ಲೈಕ್ಸ್ ಮತ್ತು ಕಾಮೆಂಟ್ಸ್ ಅನ್ನು ಸ್ವೀಕರಿಸಿ, ಆದರೆ ಅವುಗಳ ಮೇಲೆ ಅವಲಂಬಿಸಬೇಡಿ. ನಿಮ್ಮ ಜೀವನವನ್ನು ನೀವು ಬದುಕಿ, ಇತರರ ಅಭಿಪ್ರಾಯಗಳಿಗೆ ಅಲ್ಲ. ಏಕೆಂದರೆ, ನಿಜವಾದ ಸಂತೋಷವು ಮೊಬೈಲ್‌ನ ಪರದೆಯ ಮೇಲೆ ಕಾಣಿಸುವುದಿಲ್ಲ.

ಮಕ್ಕಳ ಚಿತ್ರಕಥೆ 'ದಡ್ಡ ಗೆಳೆಯ'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಒಂದು ಅರಮನೆ ಇತ್ತು. ಆ ಅರಮನೆಯಲ್ಲಿ ಒಂದು ವಿಚಿತ್ರ ಇತ್ತು. ಅದೇನು ಗೊತ್ತೇ... ಒಂದು "ಕೋತಿ" ರಾಜನಿಗೆ ಆಪ್ತವಾಗಿತ್ತು. ಅದು ಯಾವಾಗಲೂ ರಾಜನ ಜೊತೆಯಲ್ಲೇ ಇರುತ್ತಿತ್ತು. ರಾಜನಿಗೂ ಅದನ್ನು ಕಂಡರೆ ತುಂಬಾ ಇಷ್ಟ.



ಒಂದು ದಿನ ರಾಜ ಮತ್ತು ಕೋತಿ ಉದ್ಯಾನವನದಲ್ಲಿ ನಡೆದಾಡುತ್ತಿದ್ದರು.



ಆಗ ರಾಜನ ಕಾಲಿನ ಬಳಿ ಬರುತ್ತಿದ್ದ ಹಾವನ್ನು ಗಮನಿಸಿ ರಾಜನನ್ನು ಹಿಂದಕ್ಕೆ ತಳ್ಳಿ ಹಾವನ್ನು ಹಿಡಿದೆಸೆದು ರಾಜನನ್ನು ರಕ್ಷಿಸಿತು. ರಾಜನಿಗೆ ಬಹಳ ಸಂತೋಷವಾಯಿತು. ಕೋತಿಯ ಬೆನ್ನು ತಟ್ಟಿ, ಕೈ ಹಿಡಿದು ಅರಮನೆಗೆ ಕರೆದುಕೊಂಡುಹೋದ.



ತನ್ನ ಮಂತ್ರಿಯೊಂದಿಗೆ 'ಈ ಕೋತಿ ಇಂದು ನನ್ನನ್ನು ಹಾವಿನಿಂದ ರಕ್ಷಿಸಿದೆ...ಇನ್ನು ಮುಂದೆ ಈ ಕೋತಿಯೇ ನನ್ನ ಅಂಗರಕ್ಷಕ...!' ಎಂದು ಆದೇಶಿಸಿಬಿಟ್ಟ.



ಆಶ್ಚರ್ಯಗೊಂಡ ಮಂತ್ರಿಯು 'ರಾಜ, ಒಂದು ಕೋತಿಯು ನಿಮಗೆ ಹೇಗೆ ಅಂಗರಕ್ಷಕನಾಗಲು ಸಾಧ್ಯ..? ಸ್ವಲ್ಪ ಎಚ್ಚರಿಕೆ ವಹಿಸಿ ಯೋಚಿಸಿರಿ... ನೀವು, ನಿಮ್ಮ ರಕ್ಷಣೆಗೆ ತೊಂದರೆ ತಂದುಕೊಳ್ಳುತ್ತಿದ್ದೀರಾ..!' ಎಂದು ವಿನಂತಿಸಿಕೊಂಡ.



ಅದಕ್ಕೆ ರಾಜನು,"ಇವನು ಬಹಳ ಎಚ್ಚರಿಕೆ ಹಾಗೂ ತೀಕ್ಷ್ಣಮತಿಯಾಗಿರುತ್ತಾನೆ... ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಅವನೇಕೆ ನನ್ನ ರಕ್ಷಕನಾಗಬಾರದು...? ಹೆದರಬೇಡಿ, ನಾನು ಸುರಕ್ಷಿತವಾಗಿರುತ್ತೇನೆ..!" ಎಂದು ಮಂತ್ರಿಗೆ ಸಮಾಧಾನಪಡಿಸಿದ. (ಮುಂದುವರೆಯುವುದು)

ವಾರಭವಿಷ್ಯ

5.04.2026 ರಿಂದ 11.04.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ಮೀನ, ಚಂದ್ರ–ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ–ಮೀನ, ಬುಧ–ಕುಂಭ, ಮೀನ, ಗುರು–ಮಿಥುನ, ಶುಕ್ರ–ಮೇಷ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ಈ ವಾರ ನಿಮ್ಮ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಮನೆಯಲ್ಲಿ ಸುಖ, ಸಂತೋಷ, ಧನ–ಧಾನ್ಯ ಸಂಗ್ರಹ. ಐಹಿಕ ಸುಖ–ಭೋಗಗಳನ್ನು ಅನುಭವಿಸುವಿರಿ. ಸಣ್ಣ–ಪುಟ್ಟ ಕಾಯಿಲೆ ಕಾಡಬಹುದು. ಯೋಚಿಸಿದ್ದನ್ನೆಲ್ಲ ಮಾತನಾಡಬೇಡಿ. ಯೋಚಿಸಿ ಮಾತನಾಡಿ, ಮುಂದಾಗುವ ಅನರ್ಥಗಳಿಗೆ ಆಸ್ಪದ ಕೊಡದಿರಿ. ವಾರಾಂತ್ಯಕ್ಕೆ ಧರ್ಮಕ್ಷೇತ್ರ ಭೇಟಿ.
ಶ್ರೀ ಅಯ್ಯಪ್ಪಸ್ವಾಮಿ ಆರಾಧನೆ. ಶುಭ ಸಂಖ್ಯೆ–3

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದ ಆದಿಗೆ ನಂಬಿಕಸ್ಥ ಜನರು ನಿಮ್ಮ ನೆರವಿಗೆ ಬರುವರು. ವೈಯಕ್ತಿಕ ಕೆಲಸ ಕಾರ್ಯಗಳ ಬಗ್ಗೆ ವಿಘ್ನಗಳು ಉಂಟಾದರೂ ಧೃತಿಗೆಡದೆ ಮುಂದುವರೆಯಿರಿ. ಐಟಿ, ಬಿಟಿ ಮಂದಿಗೆ ವಿದೇಶಿ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಪಶು ಪಾಲಕರಿಗೆ ಪಶು ವೃದ್ಧಿಯಿಂದ ಸಂತಸ. ಸೂಕ್ತ ಬಾಳ ಸಂಗಾತಿ ದೊರೆಯುವ ಸಾಧ್ಯತೆ ಇರುತ್ತದೆ. ಶತ್ರುಗಳು ಹಿಂದೆ ಸರಿಯುವರು.
ಶ್ರೀ ಮನ್ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ–8

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಸಪ್ತಾಹದ ಆದಿಗೆ ಆಪ್ತ ಬಂಧು ವರ್ಗದವರಿಂದ ಆದರ, ಉಡುಗೊರೆಗಳು ದೊರೆಯುವುದು. ನಿಪುಣತೆಯಿಂದ ಕಾರ್ಯಸಾಧನೆ. ಸರ್ಕಾರಿ ಅಧಿಕಾರಿಗಳು ನಿಮಗೆ ಸಹಕಾರವನ್ನು ನೀಡುವರು. ಜನ್ಮ ಗುರು ಇರುವ ಕಾರಣ 'ಆತುರಗಾರನಿಗೆ ಬುದ್ಧಿಮಟ್ಟ' ಎಂಬಂತೆ ನಡೆದುಕೊಳ್ಳುವಿರಿ. ದುಡುಕಿ ಪಶ್ಚಾತ್ತಾಪ ಪಡುವುದು ಬೇಡ. ಪಿತ್ತ ಜನಿತ ಕಾಯಿಲೆ ಕಾಡಬಹುದು.
ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2

ಕಟಕ (ಹೊ,ಹು,ಹೆ,ಡ,ಡಿ,ಡು)
ನೀವು ಚತುರರು. ಆದರೆ, ಚತುರತೆಯ ಮುಂದೆ ಹಣೆಬರಹವೇ ಗೆಲ್ಲುವುದು. ವ್ಯಾಪಾರ, ವ್ಯವಹಾರಗಳು ಸಾಧಾರಣ ಎಂಬಂತೆ ನಡೆಯುವುದು. ಸಾಂಸಾರಿಕವಾಗಿ ತೃಪ್ತಿಕರ ಜೀವನ, ಉತ್ತಮ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಕಾರ್ಯ ನಿಮಿತ್ತ ಪರಸ್ಥಳ ವಾಸ. ರಾಹು–ಕೇತುಗಳು ನಿಮ್ಮನ್ನು ಹಲವು ರೀತಿಯ ಅಗ್ನಿ ಪರೀಕ್ಷೆಗೆ ಒಳಪಡಿಸುವರು. ಎಲ್ಲರಲ್ಲಿಯೂ ತಾಳ್ಮೆಯಿಂದ ವ್ಯವಹರಿಸಿ.
ಶ್ರೀ ದುರ್ಗಾ ಪ್ರಾರ್ಥನೆ. ಶುಭ ಸಂಖ್ಯೆ–4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದ ಆದಿಗೆ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ಧನ–ಧಾನ್ಯ ಲಾಭ, ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ಆರೋಗ್ಯದಲ್ಲಿ ಸುಧಾರಣೆ ಹಾಗೂ ಹಲವರಿಗೆ ಆಸ್ಪತ್ರೆಯಿಂದ ಬಿಡುಗಡೆ. ಸರ್ಕಾರಿ ನೌಕರರಿಗೆ ಬಡ್ತಿಯ ಜೊತೆ ವರ್ಗಾವಣೆಯಾಗುವ ಸಂಭವವಿದೆ. ಅಷ್ಟಮ ಶನಿದೇವನಿಂದ ದ್ರವ್ಯನಷ್ಟ, ನೀಚ ಕರ್ಮದಲ್ಲಿ ಆಸಕ್ತಿ, ನಿಮ್ಮ ಸಹವಾಸಗಳು ನೆಟ್ಟಗಿರಲಿ.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–1

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ, ನಿಮ್ಮ ಲೆಕ್ಕ ಪತ್ರಗಳನ್ನು ಸರಿಯಾಗಿ ಇಟ್ಟುಕೊಳ್ಳಿ. ಅನ್ಯಥಾ ಸಂಕಷ್ಟಕ್ಕೆ ಗುರಿಯಾಗುವಿರಿ. ಮಕ್ಕಳ ಸಾಧನೆಯಿಂದ ಮನೆಯಲ್ಲಿ ಸಂತಸದ ವಾತಾವರಣ. ಪಾಲುದಾರಿಕೆ ವ್ಯವಹಾರದಲ್ಲಿ ಭಿನ್ನಾಭಿಪ್ರಾಯಗಳಿಂದ ನಷ್ಟ, ಕೋರ್ಟು, ಕಚೇರಿಗಳಿಗೆ ಅಲೆದಾಟ. ಬೋರ್ಡಿಂಗ್, ಲಾಡ್ಜಿಂಗ್ ವ್ಯವಹಾರಗಳಿಗೆ ಅತಿಶಯ ಧನಲಾಭ.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–7

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಮೈಮನಗಳಲ್ಲಿ ಸಂತಸ–ನಲಿವುಗಳನ್ನು ನೀಡಲಿದ್ದಾನೆ. ನೀವು ಹಂತ ಹಂತವಾಗಿ ಮೇಲು ಸ್ತರಕ್ಕೆ ಬರಲು ಗುರುಗ್ರಹ ಮತ್ತು ಶನಿಗ್ರಹ ಅನುಕೂಲರಾಗಿದ್ದಾರೆ. ನಿಮ್ಮ ಮನೋವಾಂಛಿತ ಕಾಮನೆಗಳು ಈಡೇರುವುದು. ನಿವೇಶನ, ಗೃಹ ಹೊಂದಲು ಕಾಲ ಪಕ್ವವಾಗಿದೆ. ಎಳ್ಳು ಹಾಗೂ ಕಪ್ಪು ಧಾನ್ಯಗಳು ಹುಲುಸಾಗಿ ಬೆಳೆದು ಲಾಭವನ್ನು ತಂದುಕೊಡುವುದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–6

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಗ್ರಹಗತಿಗಳು ಚೆನ್ನಾಗಿವೆ. ಮುಖ್ಯ ಕೆಲಸಗಳನ್ನು ಆದ್ಯತೆಯ ಆಧಾರದ ಮೇಲೆ ಪೂರೈಸಿಕೊಳ್ಳಿ. ವ್ಯಾಪಾರ ವಹಿವಾಟುಗಳಲ್ಲಿ ಹೊಸ ಚೇತರಿಕೆ ಹಾಗೂ ಹೆಚ್ಚಿನ ಧನಲಾಭವಾಗುವುದು. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ತೋರುವರು. ಗಣಿಗಾರಿಕೆಯವರಿಗೆ ಹೆಚ್ಚಿನ ಆದಾಯ ಉಂಟು. ಶತ್ರು ಜನರ ಮೇಲೆ ವಿಜಯ ಸಾಧಿಸುವಿರಿ. ಸಟ್ಟಾ ಜೂಜುಗಳಿಂದ ದೂರವಿದ್ದರೆ ಕ್ಷೇಮ.
ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–9

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ನಿಮ್ಮ ರಾಶ್ಯಾಧಿಪತಿ ಗುರುವಿನ ದೃಷ್ಟಿ ನಿಮ್ಮ ರಾಶಿಯ ಮೇಲಿದೆ. ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಜೀವನದ ದಿಕ್ಕು ಬದಲಾಗುವ ಸಾಧ್ಯತೆ ಇದೆ. ದಾನ–ಧರ್ಮಾಸಕ್ತಿಯಿಂದ ಸಮಾಜದಲ್ಲಿ ಗೌರವ ವೃದ್ಧಿ. ಫ್ಯಾನ್ಸಿ ಅಂಗಡಿ ಹಾಗೂ ಪ್ರಸಾಧನ ವ್ಯಾಪಾರಿಗಳಿಗೂ ಹೇರಳ ಧನ ಲಾಭವಾಗುವುದು. ವಿರೋಧಿಗಳು ಹೆಚ್ಚುವ ಕಾರಣ ನಿಮ್ಮ ಮುಖ್ಯ ಕೆಲಸಗಳಲ್ಲಿ ಅಡಚಣೆಗಳು ಉಂಟಾಗುವುದು.
ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ–8

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ನಿಮ್ಮ ರಾಶ್ಯಾಧಿಪತಿ ಶನಿದೇವನ ಕೃಪೆಯಿಂದ ಸ್ಥಾನಲಾಭ. ನಿಮಗಾಗದವರು ಮಿತ್ರತ್ವ ಬಯಸಿ ಬಂದರೆ ತಿರಸ್ಕರಿಸದಿರಿ. ಮಹತ್ವದ ಕೆಲಸಗಳಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುವುದು. ವಾಹನ ವ್ಯವಹಾರದಲ್ಲಿ ನಷ್ಟ ಸಂಭವಿಸುವ ಸಾಧ್ಯತೆ ಇರುತ್ತದೆ. ಅಧಿಕ ತಿರುಗಾಟಗಳಿಂದ ದೇಹಾಯಾಸ. ಆಕಸ್ಮಿಕ ಅಪಘಾತಗಳು ಸಂಭವಿಸಬಹುದು. ಲೆಕ್ಕ ಪರಿಶೋಧಕರಿಗೆ ಉತ್ತಮ ವರಮಾನ.
ಶ್ರೀ ಶನಿ ಸ್ತುತಿ. ಶುಭ ಸಂಖ್ಯೆ–4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಈ ಮುಂಚೆ ಉಂಟಾಗಿದ್ದ ಆರ್ಥಿಕ, ಶಾರೀರಿಕ ಸಂಕಷ್ಟಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಭಾಸವಾಗುವುದು. ರಫ್ತು ಉದ್ದಿಮೆದಾರರಿಗೆ ದೊಡ್ಡ ಮೊತ್ತದ ಆರ್ಡರ್ ದೊರಕುವುದು. ಮಗನಿಗೆ ನೌಕರಿ ದೊರೆಯುವ ಸಾಧ್ಯತೆ. ವಿವಾಹಯೋಗ್ಯರಿಗೆ ಸೂಕ್ತ ವಧು–ವರ ದೊರೆಯಲು ಗುರುಕೃಪೆ ಇದೆ. ಜನ್ಮಸ್ಥಿತಿ ರಾಹುವಿನಿಂದ ಆಕಸ್ಮಿಕ ಧನ ನಷ್ಟವಾಗುವುದು.
ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಈ ವಾರ ಪೂರ್ವ ವಿಮರ್ಶೆ ಇಲ್ಲದೆ ಯಾವುದೇ ವ್ಯವಹಾರದಲ್ಲಿ ಬಂಡವಾಳ ಹೂಡದಿರಿ. ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳು ಮುಂದೆ ಸಾಗದು. ನ್ಯಾಯಾಲಯದ ವಿಚಾರಗಳೂ ಮಂದಗತಿಯಲ್ಲಿ ಸಾಗುವುದು. ವಾರದ ಉತ್ತರಾರ್ಧಕ್ಕೆ ಕೆಲವು ಶ್ರೇಯಗಳು ಅಯಾಚಿತವಾಗಿ ದೊರಕುವುದು. ಹಣಕಾಸಿನ ವಿಚಾರದಲ್ಲಿ ಸುಧಾರಣೆ ಕಂಡು ಬರುವುದು.
ಶ್ರೀ ರಾಘವೇಂದ್ರಸ್ವಾಮಿ ಉಪಾಸನೆ. ಶುಭ ಸಂಖ್ಯೆ–5

ಮೈಸೂರು ಮಿತ್ರ

ಕಳಲೆಯಲ್ಲಿ ವಿಜೃಂಭಣೆಯ ಶ್ರೀ ಲಕ್ಷ್ಮೀಕಾಂತಸ್ವಾಮಿ ರಥೋತ್ಸವ

ಸಾವಿರಾರು ಭಕ್ತರು ಭಾಗಿ, ಗ್ರಾಮದಲ್ಲಿ ಸಡಗರ



ನಂಜನಗೂಡು ತಾಲೂಕಿನ ಕಳಲೆ ಗ್ರಾಮದಲ್ಲಿ ಐತಿಹಾಸಿಕ ಪುರಾಣ ಪ್ರಸಿದ್ಧ ಶ್ರೀ ಲಕ್ಷ್ಮೀಕಾಂತ ಸ್ವಾಮಿ ರಥೋತ್ಸವ ಶ್ರದ್ಧಾಭಕ್ತಿಯೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ನಂಜನಗೂಡು: ತಾಲೂಕಿನ ಕಳಲೆ ಗ್ರಾಮದಲ್ಲಿ ಪುರಾಣ ಪ್ರಸಿದ್ಧ ಶ್ರೀಲಕ್ಷ್ಮೀಕಾಂತ ಸ್ವಾಮಿಯವರ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಶ್ರೀ ಲಕ್ಷ್ಮೀಕಾಂತ ಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಜಾತ್ರೆಯ ಪ್ರಯುಕ್ತ ವಿವಿಧ ಬಗೆಯ ಪುಷ್ಪಗಳು ಹಾಗೂ ಬಣ್ಣ ಬಣ್ಣದ ವಸ್ತ್ರಗಳಿಂದ ಅಲಂಕೃತಗೊಂಡಿದ್ದ ರಥಕ್ಕೆ ಶ್ರೀ ಆಂಡಾಳಮ್ಮ ಹಾಗೂ ಶ್ರೀ ಅರವಿಂದ ನಾಯಕಿಯಮ್ಮನವರ ಸಮೇತ ಶ್ರೀ ಶ್ರೀ ಲಕ್ಷ್ಮೀಕಾಂತ ಸ್ವಾಮಿಯವರ ಉತ್ಸವ ಮೂರ್ತಿ ಯನ್ನು ಪ್ರತಿಷ್ಠಾಪಿಸಿ ಬೆಳಿಗ್ಗೆ 7.03ರಿಂದ 7.26 ಗಂಟೆಯುವರೆಗೆ ಸಲ್ಲುವ ಶುಭ ಮೇಷ ಲಗ್ನದಲ್ಲಿ ರಥದ ಗಾಲಿಗಳಿಗೆ ಈಡುಗಾಯಿ ಒಡೆದು ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಸಾವಿರಾರು ಸಂಖ್ಯೆಯ ಭಕ್ತರು ರಥವನ್ನು ಶ್ರದ್ಧಾ- ಭಕ್ತಿಯಿಂದ ಎಳೆಯುವ ಮೂಲಕ ಸಂಭ್ರಮಿಸಿದರು. ರಥವು ಗ್ರಾಮದ ರಥಬೀದಿಯಲ್ಲಿ ಸಂಚರಿಸಿ ಸ್ವಸ್ಥಾನವನ್ನು ಸೇರಿತು. ರಥವು ರಥ ಬೀದಿಯಲ್ಲಿ ಸಾಗುವ ವೇಳೆ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಭಕ್ತರು ಹಣ್ಣುಜವನ ಸಮರ್ಪಿಸಿ ಇಷ್ಟಾರ್ಥಗಳನ್ನು ನೆರವೇರಿಸುವಂತೆ ಕೋರಿಕೊಂಡರು.

ಜಾತ್ರಾ ಮಹೋತ್ಸವದ ಅಂಗವಾಗಿ ರಥ ಸಾಗುವ ಮಾರ್ಗದುದ್ದಕ್ಕೂ ತಳಿರು ತೋರಣಗಳನ್ನು ಕಟ್ಟಿ ಚಿತ್ತಾರದ ರಂಗೋಲಿಗಳನ್ನು ಬಿಡಿಸುವ ಮೂಲಕ ಜನರು ಭಕ್ತಿಯಿಂದ ರಥೋತ್ಸವವನ್ನು ಬರಮಾಡಿಕೊಂಡರು. ಇನ್ನು ಜಾತ್ರೆಯ ಪ್ರಯುಕ್ತ ದಾನಿಗಳು ಹಾಗೂ ಸಂಘಸಂಸ್ಥೆಗಳವರು ನೀರು ಮಜ್ಜಿಗೆ ಹಾಗೂ ಪಾನಕ ಸೇರಿದಂತೆ ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ಪ್ರಸಾದದ ರೂಪದಲ್ಲಿ ವಿತರಿಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯುದಲ್ಲಿ ಶನಿವಾರ ಬೆಳಿಗ್ಗೆ 5ರಿಂದಲೇ ಧಾರ್ಮಿಕ ಪೂಜಾ ಕಾರ್ಯಗಳು ಜರುಗಿದವು ರಾತ್ರಿ ಗ್ರಾಮದಲ್ಲಿ ಪುಷ್ಪಾಲಂಕೃತಗೊಂಡಿದ್ದ ಶ್ರೀ ಲಕ್ಷ್ಮೀಕಾಂತ ಸ್ವಾಮಿಯುವರ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಕಾರ್ಯನಿರ್ವಹಣಾಕಾರಿ ಸಿ.ಜಿ.ಕೃಷ್ಣ, ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯದ ಪಾರುಪತ್ತೇದಾರ ಜಯರಾಮ್ ಇತರರಿದ್ದರು.

ಗಣಪತಿ ದೇವಾಲಯ ಉದ್ಘಾಟನೆ



ಹುಣಸೂರು ಕನಕ ಭವನದ ಆವರಣದಲ್ಲಿ ನಿರ್ಮಿಸಿರುವ ಗಣಪತಿ ದೇವಾಲಯುವನ್ನು ಶಿವಾನಂದಾ ಮಹಾಪುರಿ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ದೇವಾಲಯ ನಿರ್ಮಾಣಕ್ಕೆ ಸಹಕರಿಸಿದ ಅಶೋಕ್ ರಾಜಲಿಂಗಯ್ಯ ದಂಪತಿಯನ್ನು ಸನ್ಮಾನಿಸಲಾಯಿತು.

ಹಿಂದಿ ಪರ ಮಾತನಾಡುವ ಕನ್ನಡ ವಿರೋಧಿಗಳಿಗೆ

ಮಸಿ ಬಳಿಯುವ ಅಭಿಯಾನ

ತಿ.ನರಸೀಪುರ ಏ.4– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಯನ್ನು ಅಂಕದಿಂದ ಕೈಬಿಟ್ಟ ಕರ್ನಾಟಕ ಸರ್ಕಾರದ ಆದೇಶವನ್ನು ವಿರೋಧಿಸಿ ಹಿಂದಿ ಪರವಾಗಿ ಮಾತನಾಡುತ್ತಿರುವವರು ಕೂಡಲೇ ಕನ್ನಡಿಗರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಅವರುಗಳಿಗೆ ಅವರು ಕಂಡಲ್ಲಿ ಮಸಿ ಬಳಿಯುವ ಅಭಿಯಾನಕ್ಕೆ ಕನ್ನಡಪರ ಸಂಘಟನೆಗಳ ಒಕ್ಕೂಟ ಮುಂದಾಗಬೇಕಾಗುತ್ತದೆ ಎಂದು ಕನ್ನಡ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷರಾದ ಎಸ್.ಕೆ.ರಾಜೂಗೌಡ ಎಚ್ಚರಿಕೆ ನೀಡಿದ್ದಾರೆ.



ಕರ್ನಾಟಕಕ್ಕೆ ಮತ್ತು ಕನ್ನಡಿಗ ವಿದ್ಯಾರ್ಥಿಗಳಿಗೆ ಹೇರಿಕೆಯಾಗಿದ್ದ ಹಿಂದಿ ಭಾಷೆಯನ್ನು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಿಂದ ಕೈಬಿಟ್ಟು ಗ್ರೇಡಿಂಗ್‌ಗೆ ಸೀಮಿತಗೊಳಿಸಿ ಕರ್ನಾಟಕ ಸರ್ಕಾರ ಆದೇಶ ಮಾಡುವ ಮೂಲಕ ಕರ್ನಾಟಕ ಮತ್ತು ಕನ್ನಡಿಗ ವಿದ್ಯಾರ್ಥಿಗಳ ಹೊರೆಯನ್ನು ಕಡಿಮೆ ಮಾಡಿದೆ. ಈ ಆದೇಶವನ್ನು ಮಾಡಲು ಕನ್ನಡಪರ ಹೋರಾಟಗಾರರು ಮತ್ತು ಕನ್ನಡಪರ ಸಂಘಟನೆಗಳ ಅವಿರತವಾದ ಹೋರಾಟ ಕಾರಣವಾಗಿದ್ದು. ಸ್ವಾಭಿಮಾನಿ ಕನ್ನಡಿಗರೆಲ್ಲಾ ಈ ಆದೇಶ ಮಾಡಿದ ಸರ್ಕಾರವನ್ನು ಮತ್ತು ಈ ಆದೇಶ ಜಾರಿಗೆ ಕಾರಣವಾದ ಕನ್ನಡಪರ ಹೋರಾಟಗಾರರಿಗೆ ಅಭಿನಂದನೆ ಹಾಗೂ ಧನ್ಯವಾದಗಳನ್ನು ಹೇಳುತ್ತಿದ್ದಾರೆ ಎಂದರು.

ಇಡೀ ಕನ್ನಡನಾಡಿಗೇ ನಾಡೇ ಸಂತೋಷ ಪಡುತ್ತಿರುವ ಈ ಸಂದರ್ಭದಲ್ಲಿ ಕನ್ನಡ, ಕನ್ನಡಿಗರು, ಕರ್ನಾಟಕದ ಹಿತ ಕಾಯಬೇಕಾದ ಕರ್ನಾಟಕ ಸರ್ಕಾರದ ಮಾಜಿ ಶಿಕ್ಷಣ ಸಚಿವರಾದ ಸುರೇಶ್ ಕುಮಾರ್, ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಬಸವರಾಜ ಹೊರಟ್ಟಿ, ವಿರೋಧಪಕ್ಷದ ನಾಯಕರಾದ ಅಶೋಕ್ ಹಾಗೂ ಅಶ್ವತ್ಥನಾರಾಯಣ, ವಿವೇಕಾನಂದ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜೇಂದ್ರ ಯಡಿಯೂರಪ್ಪ ಸೇರಿದಂತೆ ಅನೇಕರು ಕರ್ನಾಟಕದ ಹಿತಾಸಕ್ತಿಗೆ ವಿರುದ್ಧವಾಗಿ ಹಿಂದಿ ಭಾಷೆಯ ಹೇರಿಕೆಯ ಪರವಾಗಿ ಮಾತನಾಡುವ ಮೂಲಕ ನಾಡದ್ರೋಹಿ ಕೆಲಸ ಮಾಡುತ್ತಿದ್ದಾರೆ. ಇವರುಗಳ ವಿರುದ್ಧ ಕನ್ನಡಪರ ಹೋರಾಟಗಾರರು ತಮ್ಮದೇ ರೀತಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಇವರುಗಳು ಕೂಡಲೇ ಕನ್ನಡಿಗರಲ್ಲಿ ಕ್ಷಮೆ ಕೇಳಬೇಕು ಮತ್ತು ಸರ್ಕಾರದ ಈ ಆದೇಶವನ್ನು ಸ್ವಾಗತಿಸಿ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಆದ್ದರಿಂದ ಇವರುಗಳು ಕೂಡಲೇ ಸಾರ್ವಜನಿಕವಾಗಿ ಕನ್ನಡಿಗರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಕನ್ನಡಪರ ಹೋರಾಟಗಾರರು ಕನ್ನಡಪರ ಸಂಘಟನೆಗಳ ಒಕ್ಕೂಟದ ಮೂಲಕ ಈ ಕನ್ನಡ ದ್ರೋಹಿಗಳಿಗೆ ಕಂಡಲ್ಲಿ ಮಸಿ ಬಳಿಯುವ ಅಭಿಯಾನಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಕನ್ನಡ ವಿರೋಧಿಗಳಿಗೆ ಎಚ್ಚರಿಕೆ ನೀಡಿದರು.

ಮಾರುಕಟ್ಟೆ ನವೀಕರಣಗೊಂಡರೂ ಆರಂಭವಾಗದ ವ್ಯಾಪಾರ

ವ್ಯಾಪಾರಿಗಳು, ಸಾರ್ವಜನಿಕರಿಗೆ ತೊಂದರೆ

ಕೆ.ಆರ್.ನಗರ: ಪಟ್ಟಣದ ಪುರಸಭೆಗೆ ಸೇರಿದ ತರಕಾರಿ ಮಾರುಕಟ್ಟೆಯನ್ನು ನವೀಕರಣ ಮಾಡಲಾಗಿದ್ದರೂ ಈವರೆಗೂ ಸ್ಥಳಾಂತರ ಮಾಡಿಲ್ಲ. ಇದರಿಂದ ಗ್ರಾಹಕರಿಗೆ ಮತ್ತು ವ್ಯಾಪಾರಸ್ಥರಿಗೆ ತೊಂದರೆಯಾಗಿದೆ ಎಂದು ರಾಷ್ಟ್ರೀಯ ಅಹಿಂದ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಗರುಡ ಗಂಭ ಮಂಜುನಾಥ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ತರಕಾರಿ ವ್ಯಾಪಾರಸ್ಥರಿಗೆ ಪಟ್ಟಣದ ಬಜಾರ್‌ರಸ್ತೆ, ಚೀರನಹಳ್ಳಿ ರಸ್ತೆ, ಮಧುವನಹಳ್ಳಿ ರಸ್ತೆ ಹಾಗೂ ಭಾರತಿ ವಿದ್ಯಾ ಮಂದಿರ ಶಿಕ್ಷಣ ಸಂಸ್ಥೆಯ ಮುಂಭಾಗದಲ್ಲಿ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಇದರಿಂದಾಗಿ ಈ ಭಾಗದ ಜನರಿಗೆ ಸಾಕಷ್ಟು ಅನಾನುಕೂಲವಾಗಿತ್ತು ಇದನ್ನು ಮನಗಂಡು ಹಳೆಯ ತರಕಾರಿ ಮಾರುಕಟ್ಟೆಯ ಆವರಣದಲ್ಲಿ ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ತರಕಾರಿ ಮಾರಾಟ ಮಾಡುವ ಎಲ್ಲರಿಗೂ ಅವಕಾಶ ಕಲ್ಪಿಸಿ ಮಾರುಕಟ್ಟೆ ಪ್ರಾಂಗಣವನ್ನು ನಿರ್ಮಾಣ ಮಾಡಲಾಗಿದ್ದರೂ ಸ್ಥಳಾಂತರ ಮಾಡಿಲ್ಲ. ಇದರಿಂದ ವ್ಯಾಪಾರಸ್ಥರಿಗೆ ಸಾಕಷ್ಟು ತೊಂದರೆಯಾಗಿದೆ ಎಂದು ದೂರಿದ್ದು ಈ ಕೂಡಲೇ ಸ್ಥಳಾಂತರ ಮಾಡಲು ಶಾಸಕರು ಕ್ರಮ ವಹಿಸುವಂತೆ ಗರುಡ ಗಂಭ ಮಂಜುನಾಥ್ ಮನವಿ ಮಾಡಿದ್ದಾರೆ.



ಪ್ರಸ್ತುತ ಎಲ್‌ಐಸಿ ಬ್ಯಾಂಕ್ ಶಾಖೆಯ ಕಛೇರಿ ಮುಂಭಾಗದಲ್ಲಿ ತರಕಾರಿ ವ್ಯಾಪಾರಸ್ಥರು ವ್ಯಾಪಾರ ಮಾಡುತ್ತಿದ್ದು ಈ ಭಾಗದಲ್ಲಿ ಶಾಲಾ–ಕಾಲೇಜು ಸಂಕೀರ್ಣ ಇರುವುದರಿಂದ ವಿದ್ಯಾರ್ಥಿಗಳಿಗೆ ಕಿರಿಕಿರಿ ಉಂಟಾಗಿದೆ ಹಾಗಾಗಿ ಶಾಸಕ ಡಿ.ರವಿಶಂಕರ್ ಮನಗಾಣಬೇಕೆಂದು ಕೋರಿದ್ದಾರೆ.

ಈವರೆವಿಗೂ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದ ಎಸ್.ನಂಜಪ್ಪ, ಹೆಚ್. ವಿಶ್ವನಾಥ್ ಮತ್ತು ಸಾ.ರಾ.ಮಹೇಶ್ ಸಚಿವರಾಗಿದ್ದರೂ ಸಹ ಶಾಶ್ವತವಾದ ತರಕಾರಿ ಮಾರುಕಟ್ಟೆ ನಿರ್ಮಿಸಲು ಸಾಧ್ಯವಾಗಿರಲಿಲ್ಲ. ಇದರಿಂದ ಪಟ್ಟಣದ ಜನತೆಗೆ ಬೇಸರ ತಂದಿದ್ದು ಸಂಬಂಧಪಟ್ಟ ಪುರಸಭೆಯ ಅಧಿಕಾರಿಗಳು ಮತ್ತು ಶಾಸಕರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ತರಕಾರಿ ಮತ್ತು ಬೀದಿಬದಿ ವ್ಯಾಪಾರಿಗಳಿಗೆ ಸೂಕ್ತ ಪರಿಹಾರ ಕಲ್ಪಿಸಲು ಮುಂದಾಗಬೇಕು ಎಂದು ಕೋರಿದ್ದಾರೆ.

ತಲೆ ಮರೆಸಿಕೊಂಡಿದ್ದ ಪತಿ ಬಂಧನ

ಸರಗೂರು: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತ್ನಿಯನ್ನು ಕೊಂದು ತಲೆ ಮರೆಸಿಕೊಂಡಿದ್ದ ಪತಿಯನ್ನು ಪೊಲೀಸರು ಬಂಧಿಸಿದ್ದಾರೆ.



ಜಗದೀಶ್

ತಾಲೂಕಿನ ಬಿದರಹಳ್ಳಿ ಗ್ರಾಮದ ನಿವಾಸಿ ಶ್ರುತಿ (30) ಹತ್ಯೆಯಾದವರಾಗಿದ್ದು, ಪತಿ ಜಗದೀಶ್ (45) ಬಂಧಿತ ಆರೋಪಿ.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕೇರಳಾಪುರ ನಿವಾಸಿಯಾದ ಜಗದೀಶ್ ಜೊತೆ ಶ್ರುತಿ ಅವರ ವಿವಾಹ ಕಳೆದ 12 ವರ್ಷಗಳ ಹಿಂದೆ ನಡೆದಿತ್ತು. ಈ ದಂಪತಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಕೂಡಾ ಇದೆ.

ಬೇಕರಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ ದಂಪತಿ ಹಲವು ವರ್ಷಗಳ ಕಾಲ ಅನ್ಯೋನ್ಯವಾಗಿ ಸಂಸಾರ ನಡೆಸುತ್ತಿದ್ದರು. ಆದರೆ ಇತ್ತೀಚೆಗೆ ಅವರಿಬ್ಬರ ನಡುವೆ ಹೊಂದಾಣಿಕೆ ಇರಲಿಲ್ಲ ಎನ್ನಲಾಗಿದ್ದು, ಕ್ಷುಲ್ಲಕ ವಿಚಾರಗಳಿಗೂ ಪದೇ ಪದೆ ಜಗಳವಾಡುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿದೆ.

ಇದೇ ರೀತಿ ಮತ್ತೆ ಗುರುವಾರ ಮಧ್ಯಾಹ್ನ ಪತ್ನಿಯೊಂದಿಗೆ ಜಗಳವಾಡಿದ ಪತಿ ಜಗದೀಶ್, ಆಕೆಗೆ ಕೈಯಿಂದ ಹೊಡೆದು ಸಾಯಿಸಿ ಬಳಿಕ ಮನೆಯ ತೊಲೆಗೆ ಸೀರೆಯಿಂದ ನೇಣು ಹಾಕಿ ತಲೆಮರೆಸಿಕೊಂಡಿದ್ದನು.

ಈ ಬಗ್ಗೆ ಸರಗೂರು ಠಾಣಾ ಪೊಲೀಸರು ದೂರು ದಾಖಲಿಸಿಕೊಂಡಿದ್ದು, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಮಲ್ಲಿಕಾರ್ಜುನ್ ಬಾಲದಂಡಿ ಹಾಗೂ ಹುಣಸೂರು ಪೊಲೀಸ್ ಉಪಾಧೀಕ್ಷಕರಾದ ಶಿರವಿ ಅವರು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು. ಬಳಿಕ ಆರೋಪಿ ಜಗದೀಶನ ಬಂಧನದ ಸಂಬಂಧ ಸರಗೂರು ವೃತ್ತ ನಿರೀಕ್ಷಕರವರ ನೇತೃತ್ವದಲ್ಲಿ ಮೂರು ಪೊಲೀಸ್ ತಂಡಗಳನ್ನು ರಚಿಸಿದ್ದರು.

ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸ್ ತಂಡ ತಲೆಮರೆಸಿಕೊಂಡಿದ್ದ ಆರೋಪಿಯ ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದು, ಆರಕ್ಷಕರ ಈ ಯಶಸ್ವಿ ಕಾರ್ಯಾಚರಣೆಯನ್ನು ಹಿರಿಯ ಅಧಿಕಾರಿಗಳು ಶ್ಲಾಘಿಸಿ, ಬಹುಮಾನ ಘೋಷಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸರಗೂರು ಪೊಲೀಸ್ ಠಾಣೆಯ ಪಿಎಸ್‌ಐ ಕಿರಣ, ಗೋಪಾಲ ಅಂತರಸಂತೆ ಠಾಣೆ ಪಿಎಸ್‌ಐ ಕುಮಾರ, ಸರಗೂರು ಠಾಣೆಯ ಕೃಷ್ಣಕುಮಾರ, ಶ್ರೀಕಂಠಸ್ವಾಮಿ ಹಾಗೂ ಸಿಬ್ಬಂದಿಗಳಾದ ಇಮ್ರಾನ್ ಅಹಮದ್, ಗೋಪಾಲ ಕೃಷ್ಣ, ಜಗದೀಶ್, ಸುನೀಲ್ ಕುಮಾರ್, ನವೀನ, ಸುನೀಲ್, ರಮೇಶ್, ವಿನಯ್, ದೇವರಾಜು, ನುದೀಶ್, ಗಣೇಶ್, ಚಾಲಕರಾದ ಆನಂದ್, ಮತ್ತು ಶಿವಪ್ಪ ಹಾಗೂ ಮಹಿಳಾ ಮುಖ್ಯ ಪೇದೆ ಶೋಭಾ ಪಾಲ್ಗೊಂಡಿದ್ದರು.

ಇಂದು ಕೆ.ಆರ್.ನಗರದಲ್ಲಿ ಶ್ರೀರಾಮ ಪಟ್ಟಾಭಿಷೇಕ

ಕೆ.ಆರ್.ನಗರ: ಪಟ್ಟಣದ ಆಂಜನೇಯ ಬಡಾವಣೆಯ ಶ್ರೀ ಸಗರ ವಂಶ ಮೇಲು ಸಕ್ಕರೆ ಉಪ್ಪಾರರ ಶ್ರೀರಾಮಮಂದಿರದಲ್ಲಿ 63ನೇ ವರ್ಷದ ಶ್ರೀರಾಮಪಟ್ಟಾಭಿಷೇಕ ಕಾರ್ಯಕ್ರಮವನ್ನು ಏ.5ರಂದು ಏರ್ಪಡಿಸಲಾಗಿದೆ.




ಇತಿಹಾಸವುಳ್ಳ ರಾಮಮಂದಿರದಲ್ಲಿ ಪ್ರತಿ ವರ್ಷ ಶ್ರೀರಾಮನವಮಿ ದಿನದಂದು ಶ್ರೀರಾಮ ದೇವರ ಭಾವಚಿತ್ರದೊಂದಿಗೆ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಶ್ರೀರಾಮ ಭಜನೆ ನಡೆಸಿ ನಂತರ ರಾಮಮಂದಿರದಲ್ಲಿ ಶ್ರೀ ಸ್ವಾಮಿಗೆ ಪಂಚಾಮೃತ ಅಭಿಷೇಕ, ರಾಮತಾರಕ ಹೋಮ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

10 ದಿನಗಳವರೆಗೆ ಶ್ರೀರಾಮಯಣ ಕಥಾ ಪರಾಯಣವನ್ನು ಪ್ರತಿ ದಿನ ಸಂಜೆ 6.30 ರಿಂದ 7.30ರವರೆಗೆ ಪಠಿಸಿ ನಂತರ ಶ್ರೀರಾಮ ಭಜನೆ ನಡೆಸಿಕೊಂಡು ಬರುತ್ತಿದ್ದು, 10ನೇ ದಿನ ಶ್ರೀರಾಮ ಪಟ್ಟಾಭಿಷೇಕ ದಿನದಂದು ಶ್ರೀರಾಮ ಕಲ್ಯಾಣೋತ್ಸವ ಪೂಜಾ ಕಾರ್ಯಕ್ರಮ ಏರ್ಪಡಿಸಿ ನಂತರ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವನ್ನು ಮಾಡಲಾಗುವುದು ಸಂಘದ ಅಧ್ಯಕ್ಷ ಟಿ.ಕೃಷ್ಣ ತಿಳಿಸಿದರು.

ಕಾರ್ಯಕ್ರಮಕ್ಕೆ ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಡಿ.ರವಿಶಂಕರ್, ಎಂಎಲ್ಸಿಗಳಾದ ಹೆಚ್.ವಿಶ್ವನಾಥ್, ಸಿ.ಎನ್. ಮಂಜೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಭಾಗವಹಿಸಲಿದ್ದಾರೆ.

ಮಹದೇಶ್ವರ ಏಜೆನ್ಸಿಗೆ ನೆಲಬಾಡಿಗೆ ಸುಂಕ ವಸೂಲಾತಿ ಹಕ್ಕು

ತಿ.ನರಸೀಪುರ, ಏ 4– ಪಟ್ಟಣದ ಪುರಸಭೆಯಲ್ಲಿ 2026–27ನೇ ಸಾಲಿನ ನೆಲಬಾಡಿಗೆ ಸುಂಕ ವಸೂಲಾತಿ ಹಕ್ಕು 11.25 ಲಕ್ಷ ರೂ.ಗಳ ದಾಖಲೆ ಮೊತ್ತಕ್ಕೆ ಹರಾಜಾಗಿ ಮಹದೇಶ್ವರ ಏಜೆನ್ಸಿ ಪಡೆದುಕೊಂಡರು



ಮುಖ್ಯಾಧಿಕಾರಿ ಶ್ರೀನಿವಾಸ್ ಆದೇಶ ಪತ್ರವನ್ನು ನೀಡಿದರು

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಮುಖ್ಯಾಧಿಕಾರಿ ಶ್ರೀನಿವಾಸ್ ಸೇರಿದಂತೆ ಕಚೇರಿ ಸಿಬ್ಬಂದಿ ಸಮ್ಮುಖದಲ್ಲಿ ನಡೆದ ಹರಾಜಿನಲ್ಲಿ ಭಾಗವಹಿಸಿ ಲಕ್ಷ ರೂ. ಡೆಪಾಸಿಟ್ ಪಾವತಿಸಿ ಮಹದೇಶ್ವರ ಏಜೆನ್ಸಿ ಮಹೇಶ್ ಮತ್ತು ಬಾಲು ತಂಡ ತಮ್ಮದಾಗಿಸಿಕೊಂಡರು.

ಕಳೆದ ಸಾಲಿನಲ್ಲಿ 8.03 ಲಕ್ಷಕ್ಕೆ ಹರಾಜಾಗಿದ್ದ ನೆಲ ಸುಂಕ ವಸೂಲಿ ಈ ಬಾರಿ 11.25 ಲಕ್ಷ ರೂ.ಗಳಿಗೆ ಹರಾಜಾಗುವ ಮೂಲಕ ಪುರಸಭೆಯ ಆದಾಯ ಹೆಚ್ಚಳಕ್ಕೆ ಸಹಕಾರಿಯಾಯಿತು. ಸರ್ಕಾರಿ ಬಿಡ್ 8.03 ಲಕ್ಷ ರೂ. ಗಳಿಂದ ಹರಾಜು ಕೂಗಲಾಯಿತು. ಮೂವರು ಬಿಡ್‌ದಾರರು ಬಿಡ್ ಕೂಗುತ್ತಾ ಹರಾಜು ಮೊತ್ತವನ್ನು ಹೆಚ್ಚಿಸುತ್ತಾ ಹೋದರು. ಅಂತಿಮವಾಗಿ ಮೊಟ್ಟೆ ಮಹೇಶ್ ತೀವ್ರ ಸ್ಪರ್ಧೆ ಏರ್ಪಟ್ಟು ಅಂತಿಮ ವಾಗಿ 11.25 ಲಕ್ಷ ರೂ. ಬಿಡ್ ಕೂಗಿದ ಹರಾಜಿನ ಹಕ್ಕು ಪಡೆದುಕೊಂಡ ಮುಖ್ಯಾಧಿಕಾರಿ ಶ್ರೀನಿವಾಸ್ ಆದೇಶ ಪತ್ರವನ್ನು ವಿತರಿಸಿದರು

ಪಾನಿಪುರಿ, ಗೋಬಿ, ಫ್ರೈಡ್ ರೈಸ್, ಚುರುಮುರಿ, ಚಾಟ್ಸ್, ಕಬಾಬ್ ಗಾಡಿ ಒಂದಕ್ಕೆ 50 ರೂ. ಮಾತ್ರ ವಸೂಲಿ ಮಾಡಬೇಕು. ನೆಲ ಬಾಡಿಗೆಯನ್ನು ನಿಗದಿಪಡಿಸಿದರು

ಕಂದಾಯ ಅಧಿಕಾರಿ ತ್ರಿವೇಣಿ, ಆಲಗೂಡು ರಾಜು,ಬಾಲು ಇದ್ದರು.

ಸಮಾಜದ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟಿದ್ದವರು ಸಿದ್ದಗಂಗಾ ಶ್ರೀಗಳು

ನಂಜನಗೂಡು: ಅತ್ಯಾದ್ಭುತ ತಪೋಶಕ್ತಿಯನ್ನು ಹೊಂದಿದ್ದ ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರು ತಮ್ಮ ಇಡೀ ಜೀವನವನ್ನೇ ಸಮಾಜದ ಉದ್ಧಾರಕ್ಕಾಗಿ ಮೀಸಲಿಟ್ಟಿದ್ದರು ಎಂದು ಶಿರಮಳ್ಳಿ ಮುರಗೀಸ್ವಾಮಿ ವಿರಕ್ತ ಮಠಾಧ್ಯಕ್ಷ ಇಮ್ಮಡಿ ಮುರಗೀಸ್ವಾಮೀಜಿ ಬಣ್ಣಿಸಿದ್ದಾರೆ.

ನಗರದ ಮಹದೇಶ್ವರ ಬಡಾವಣೆಯಲ್ಲಿ ಬಡಾವಣೆಯ ನಿವಾಸಿಗಳು ಏರ್ಪಡಿಸಿದ್ದ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತಿ ಹಾಗೂ ಗುರು ವಂದನಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಡೆದಾಡುವ ದೇವರು ಎಂದೇ ಪ್ರಖ್ಯಾತಿ ಪಡೆದಿದ್ದ ಡಾ.ಶಿವಕುಮಾರ ಸ್ವಾಮೀಜಿಯವರು ಸುಮಾರು 80 ವರ್ಷಗಳ ಕಾಲ ತಮ್ಮ ಪೂಜಾ ನಿಷ್ಠೆ ಮತ್ತು ಕಾಯಕ ನಿಷ್ಠೆಯಿಂದ ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ ದಿವ್ಯ ಚೇತನ, ಅವರು ಜಾತಿ ಮತ ಭೇದವಿಲ್ಲದೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಅನ್ನದಾಸೋಹವನ್ನು ನೀಡುವ ಮೂಲಕ ತ್ರಿವಿಧ ದಾಸೋಹಿಗಳೆಂದು ಪ್ರಖ್ಯಾತಿಯನ್ನು ಪಡೆದಿದ್ದಾರೆ. ಗುರುವಿನ ಆಶೀರ್ವಾದ ಮತ್ತು ಅರಿವಿನ ವಿದ್ಯೆ ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಿದರು.


ದೇವಿರಮ್ಮನಹಳ್ಳಿಯ ಶರಣ ಸಂಗಮ ಮಠದ ಶ್ರೀ ನಾಗರಾಜೇಂದ್ರ ಸ್ವಾಮೀಜಿ ಮಾತನಾಡಿದರು. ಸಮಾರಂಭದಲ್ಲಿ ಮಲ್ಲನ ಮೂಲೆ ಮಠದ ಶ್ರೀ ಇಮ್ಮಡಿ ಸಿದ್ದಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು.



ಡಾ. ಶ್ರೀ ಶಿವಕುಮಾರ ಸ್ವಾಮೀಜಿಯುವರ ಜಯಂತಿ ಹಾಗೂ ಗುರುವಂದನಾ ಮಹೋತ್ಸವ ಕಾರ್ಯಕ್ರಮ ನಡೆಯಿತು.

ಇದೇ ಸಂದರ್ಭದಲ್ಲಿ ನವಿಲೂರು ಮತ್ತು ಚುಂಚನಹಳ್ಳಿ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಕುರಹಟ್ಟಿ ಮಠದ ಮಾದಪ್ಪ ಸ್ವಾಮೀಜಿ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಕುಮಾರಸ್ವಾಮಿ, ಸೊಸೈಟಿ ಶಿವಕುಮಾರ್. ಮಲ್ಕುಂಡಿ ಶಿವಕುಮಾರ್, ಮಡಳ್ಳಿ ಕುಮಾರ, ಸೋನಹಳ್ಳಿ ಗುರುಸ್ವಾಮಿ, ಬಿಳುಗಲಿ ನಾಗೇಂದ್ರ, ಗಂಗಾಧರಸ್ವಾಮಿ, ಮಲ್ಲಿಕಾರ್ಜುನ್, ನಾಗೇಂದ್ರ, ನಂಜುಂಡಸ್ವಾಮಿ ಬೊಮ್ಮಾಯಿ, ಮಹೇಶ್, ನಂಜುಂಡಸ್ವಾಮಿ, ಬಸವಣ್ಣ, ಚನ್ನಬಸವಣ್ಣ ಸೇರಿದಂತೆ ಬಡಾವಣೆ ನಿವಾಸಿಗಳು ಮತ್ತು ಮುಖಂಡರು ಉಪಸ್ಥಿತರಿದ್ದರು.

ಸೇನೆಯಿಂದ ತಾಯ್ನಾಡಿಗೆ ಮರಳಿದ ಯೋಧನಿಗೆ ಗ್ರಾಮಸ್ಥರಿಂದ ಸನ್ಮಾನ



ಬೆಟ್ಟದಪುರ: ಭಾರತೀಯ ಸೇನೆಯಲ್ಲಿ 17 ವರ್ಷ ದೇಶ ಸೇವೆ ಮಾಡಿ ತವರಿಗೆ ಹಿಂದಿರುಗಿದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಹುಣಸೆಕೊಪ್ಪಲು ಗ್ರಾಮದ ಸೈನಿಕ ರೇವಣ್ಣ ಅವರನ್ನು ಮಾಜಿ ಮೈಮುದ ಅಧ್ಯಕ್ಷ ಪಿಎಂ ಪ್ರಸನ್ನ ಹಾಗೂ ಇತರ ಗ್ರಾಮಸ್ಥರು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಪ್ರಸನ್ನ ಅವರು ದೇಶ ಸೇವೆ ಮಾಡುವುದು ಅತ್ಯಂತ ಕಠಿಣವಾದ ಕೆಲಸ. ದೇಶಕ್ಕೆ ರೈತ ಮತ್ತು ಯೋಧ ಇಬ್ಬರು ಎರಡು ಕಣ್ಣುಗಳು ಇದ್ದಂತೆ ಅವರನ್ನು ಗೌರವದಿಂದ ಗ್ರಾಮಸ್ಥರು ಮತ್ತು ರಾಜಕಾರಣಿಗಳು ನೋಡಿಕೊಳ್ಳಬೇಕು. ಆದ್ದರಿಂದ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವಾಗುತ್ತದೆ ಎಂದು ತಿಳಿಸಿದರು. ಮುಖಂಡರಾದ ವಿದ್ಯಾಶಂಕರ್ ಮೋಹನ್ ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ರಂಗ ತರಬೇತಿಯಿಂದ ಮಕ್ಕಳ ಪ್ರತಿಭೆ ಅನಾವರಣ

ಹುಣಸೂರು, ಏ.4– ಸರ್ಕಾರಿ ಶಾಲಾ ಮಕ್ಕಳ ಪ್ರತಿಭೆ ಅನಾವರಣಕ್ಕೆ ರಂಗ ತರಬೇತಿ ಸೂಕ್ತ ವೇದಿಕೆ ಎಂದು ಕಲಾಧರೆ ರಂಗ ಗರಡಿ ನಿರ್ದೇಶಕ ಅರ್ಜುನ್ ತಿಳಿಸಿದರು.

ನಗರದ ಸರ್ಕಾರಿ ಹಿರಿಯ ಬಾಲಕಿಯರ ಶಾಲೆಯಲ್ಲಿ ಹುಣಸೂರಿನ ಕಲಾಧರೆ ರಂಗ ಗರಡಿಯ ಉಚಿತ ರಂಗ ತರಬೇತಿ ಶಿಬಿರದಲ್ಲಿ ಮಾತನಾಡಿದ ಅವರು, ನಾಡಿನೆಲ್ಲಡೆ ರಂಭೂಮಿಯು ಪರಂಪರೆ, ಜಾನಪದ, ರಂಗಗೀತೆ, ಕಂಸಾಳೆ, ಸಾಮಾಜಿಕ ನಾಟಕಗಳು ಉಳಿಯಬೇಕು ಎಂಬ ಕಾರಣಕ್ಕೆ ತಾಲೂಕಿನ ಎಲ್ಲಾ ಸರ್ಕಾರಿ ಶಾಲೆಗಳು, ಮಹಿಳಾ ಹಾಸ್ಟೆಲ್‌ಗಳನ್ನು ಆಯ್ಕೆ ಮಾಡಿ ಉಚಿತ ಶಿಬಿರ ನಡೆಸುತ್ತಿದ್ದೇವೆ. ಆದ್ದರಿಂದ ಗ್ರಾಮೀಣ ಶಾಲಾ ಮಕ್ಕಳು ಸದ್ಬಳಕೆ ಮಾಡಿಕೊಳ್ಳುವಂತೆ ಮನವಿ ಮಾಡಿದರು.



ತಾಲೂಕು ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್ ಮಾತನಾಡಿ, ಇತ್ತೀಚೆಗೆ ಜನಪದ ಕಲೆ, ಜನಪರ ಸಾಹಿತ್ಯ ಕಣ್ಮರೆಯಾಗುತ್ತಿದ್ದು, ಅದರ ಉಳಿವು ಅಳಿವು ಇಂದಿನ ಯುವ ಪ್ರತಿಭೆಗಳ ಮೇಲಿದೆ. ನಮ್ಮ ನಾಡು, ನುಡಿ, ಸಂಸ್ಕೃತಿ ಅಳಿಯದಂತೆ ಉಳಿಯ ಬೇಕಾದರೆ ರಂಗ ಚಟುವಟಿಕೆಗೆ, ಜನಪದ ಭಾವಗೀತೆ, ಭಕ್ತಿಗೀತೆಗೆ ಮಕ್ಕಳು ಹೆಚ್ಚು ಆದ್ಯತೆ ನೀಡುವ ಅನಿವಾರ್ಯತೆ ಇದೆ ಎಂದು ಅವರು ಇದೇ ವೇಳೆ ತಿಳಿಸಿದರು.

ಆಡಂಸ್ಮಿತ್‌ರಿಂದ ಆಧುನಿಕ ಅರ್ಥಶಾಸ್ತ್ರ ಆರಂಭ

ಹೆಚ್.ಡಿ.ಕೋಟೆ: ಆಧುನಿಕ ಅರ್ಥಶಾಸ್ತ್ರ ಆರಂಭವಾದದ್ದು ಆಡಂಸ್ಮಿತ್ ಅವರಿಂದ ಎಂದು ಹುಣಸೂರು ಮಹಿಳಾ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಪುಟ್ಟಶೆಟ್ಟಿ ತಿಳಿಸಿದರು.



ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಗಣ್ಯರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಮೆರಿಕ ಆರ್ಥಿಕತೆ 30 ಟ್ರಿಲಿಯನ್ ಡಾಲರ್, ಯುರೋಪ್‌ನ ಆರ್ಥಿಕತೆ 21 ಟ್ರಿಲಿಯನ್ ಡಾಲರ್, ರಷ್ಯಾದ ಆರ್ಥಿಕತೆ 18 ಟ್ರಿಲಿಯನ್ ಡಾಲರ್, ಭಾರತದ ಆರ್ಥಿಕತೆ 4.1 ಟ್ರಿಲಿಯನ್ ಡಾಲರ್ ಆಗಿದ್ದು ಭಾರತ ಪ್ರಪಂಚದ ನಾಲ್ಕನೇ ದೊಡ್ಡ ಆರ್ಥಿಕತೆ ಎಂದು ತಿಳಿಸಿದ ಅವರು, ಭಾರತದ ಜಿಡಿಪಿ ಗ್ರೋಥ್ ರೇಟ್ ಪ್ರಪಂಚದಲ್ಲೇ ಮೊದಲನೇಯದ್ದಾಗಿದೆ ಎಂದರು.

ಒಂದು ಹನಿ ಪೆಟ್ರೋಲ್ ನಿರ್ಮಾಣವಾಗಲು ಲಕ್ಷಾಂತರ ವರ್ಷಗಳು ಬೇಕಾಗುತ್ತದೆ, ಆದರೆ ಇರಾನ್ ಇರಾಕ್ ಯುದ್ಧಗಳಲ್ಲಿ ಕ್ಷಣಾರ್ಧದಲ್ಲಿ ಸುಟ್ಟುಹಾಕುವ ಹುನ್ನಾರ ನಡೆಯುತ್ತಿದೆ ಎಂದು ಬೇಸರಿಸಿದರು.

ಅನಾದಿ ಕಾಲದಿಂದ ಜನಿಸಿದ ಪುಣ್ಯ ಪುರುಷರೆಲ್ಲ ಮನುಕುಲದ ಉದ್ಧಾರಕ್ಕೆ ಅರ್ಥಶಾಸ್ತ್ರದ ಅರಿವಿಲ್ಲದೇ ಅರ್ಥಶಾಸ್ತ್ರಕ್ಕೆ ಶ್ರಮಿಸಿದವರೇ ಹೆಚ್ಚು ಎಂದರು.

ಈ ಸಂದರ್ಭದಲ್ಲಿ ವಿವಿಧ ವಿಭಾಗಗಳಲ್ಲಿ ಹೆಚ್ಚು ಅಂಕ ಗಳಿಸಿದ ಮತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್. ವೆಂಕಟೇಶ್, ಮಹಾರಾಜ ಕಾಲೇಜಿನ ನಿವೃತ್ತ ಪ್ರೊ.ಚಂದ್ರೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ಉಪನ್ಯಾಸಕರಾದ ಚನ್ನಕೇಶವ ರವೀಶ, ಮಹೇಶ್, ಮಂಜು, ಅವಿನಾ, ರಾಮಚಂದ್ರ, ಮಹೇಂದ್ರ, ಮಹದೇವು, ಸಿದ್ದರಾಜು, ಪ್ರಕಾಶ್ ನಾಯಕ್, ಚಿತ್ರ, ಸಂಗೀತಾಗೌಡ, ಚಂದನ, ಶಾಂಭವಿ, ಸಿದ್ದೇಗೌಡ, ದಿಲೀಪ್, ಸೋಮಶೇಖರ್, ಚಿಕ್ಕದೇವಿ, ಪ್ರಥಮದರ್ಜೆ ಸಹಾಯಕ ರಾಜೇಶ್, ಅಂಕನಾಯಕ, ಇದ್ದರು.

ಬನ್ನೂರಲ್ಲಿ ವೈಭವದ ಬ್ರಹ್ಮ ಮಹಾರಥೋತ್ಸವ

ಬನ್ನೂರು, ಏ.4– ಪಟ್ಟಣದ ಬಸ್ ನಿಲ್ದಾಣದಲ್ಲಿರುವ ಇತಿಹಾಸ ಪ್ರಸಿದ್ಧ ಕೋದಂಡರಾಮಸ್ವಾಮಿ ದೇವರ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಹಿನ್ನೆಲೆಯಲ್ಲಿ ರಥವನ್ನು ವಿವಿಧ ಬಣ್ಣ ಬಣ್ಣದ ಪತಾಕೆಯಿಂದ ಅಲಂಕರಿಸಿ ವಿವಿಧ ಹೂಗಳಿಂದ ಸಿಂಗರಿಸಿ ರಥದ ಮೇಲ್ಭಾಗ ಕಳಶವನ್ನು ಪ್ರತಿಷ್ಠಾಪಿಸಲಾಯಿತು. ಕೋದಂಡರಾಮ ದೇವರ ರಥ ಸಾಗುವ ಮಾರ್ಗವನ್ನು ಶುದ್ಧಿಗೊಳಿಸಿ ಪರಾಭವನಾಮ ಸಂವತ್ಸರದ ಚೈತ್ರ ಬಹುಳ ಸ್ವಾತಿ ನಕ್ಷತ್ರದಿಂದ ಕೂಡಿದ ಬೆಳಿಗ್ಗೆ 8.50ರಿಂದ 9.20 ಗಂಟೆಯೊಳಗೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ ರಥದ ಸುತ್ತ ಕೋದಂಡರಾಮಸ್ವಾಮಿದೇವರ ಉತ್ಸವ ಮೂರ್ತಿಯನ್ನು ಪ್ರದಕ್ಷಿಣೆ ಮಾಡಿ ರಥದ ಮೇಲೆ ಪ್ರತಿಷ್ಠಾಪಿಸಿ, ರಥೋತ್ಸವಕ್ಕೆ ದೇವಾಲಯದ ಪಾರುಪತ್ತೆಗಾರರಾದ ಎನ್.ಎಸ್.ಕೃಷ್ಣಸ್ವಾಮಿ ಚಾಲನೆ ನೀಡಿದರು.

ವಿವಿಧ ಮಂತ್ರಘೋಷಗಳ ಮಂಗಳ ವಾದ್ಯದಲ್ಲಿ ಪುಷ್ಪಾಲಂಕೃತವಾದ ಪೀಠದಲ್ಲಿ ರಾರಾಜಿಸುತ್ತಿದ್ದ ಭಗವಂತನ ದರ್ಶನ ಪಡೆಯಲು ನೂರಾರು ಮಂದಿ ಹಣ್ಣುಜವನ ಹಿಡಿದು ಪ್ರಾತಃ ಕಾಲದಲ್ಲಿಯೆ ಜಮಾಯಿಸಿದ್ದರು. ಜೀವನದ ತಮ್ಮ ಕಷ್ಟವನ್ನು ಕಳೆಯುವಂತೆ ಮನದಲ್ಲಿ ನೆನೆದು ಶ್ರೀರಾಮ ರಥವನ್ನು "ಜೈ ಶ್ರೀ ರಾಮ್" "ಸೀತಾ ರಾಮಕೀ ಜೈ ಜೈ" ಎಂದು ಘೋಷಣೆಯನ್ನು ಕೂಗುತ್ತ ರಥ ಎಳೆಯಲು ಪ್ರಾರಂಭಿಸಿದರು.



ಪಟ್ಟಣದ ಬಸ್ ನಿಲ್ದಾಣದ ಆವರಣದಿಂದ ಸಾಗಿದ ರಥವು ತೇರಿನ ಬೀದಿಯ ಮಾರ್ಗವಾಗಿ ಚಲಿಸಿ ದೊಡ್ಡ ಅಂಗಡಿ ಬೀದಿ ಮುಖಾಂತರ ಹಾದು ಸುಮಾರು 12 ಗಂಟೆಯ ವೇಳೆಗೆ ಮೂಲ ಸ್ಥಾನವನ್ನು ಸೇರಿತು. ರಥ ಸಂಚರಿಸುವ ಮಾರ್ಗದ ಉದ್ದಕ್ಕೂ ಅಲ್ಲಲ್ಲಿ ಭಕ್ತರು ಪೂಜೆಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ನವ ದಂಪತಿಗಳು, ಹರಕೆ ಹೊತ್ತ ಭಕ್ತರು ಹಣ್ಣುಜವನ ಎಸೆದು ಪುನೀತರಾದರು. ವಿವಿಧ ಗ್ರಾಮಗಳಿಂದ ಬಂದಿದ್ದ ನೂರಾರು ಜನರು ಶ್ರೀರಾಮನ ದಿವ್ಯ ಮಹಾರಥೋತ್ಸವದ ವೈಭವನ್ನು ಕಂಡು ಭಾವಪರವಶರಾದರು. ಅಲ್ಲಲ್ಲಿ ಮಜ್ಜಿಗೆ ಪಾನಕ ವಿತರಣೆಯ ಕಾರ್ಯವು ನಡೆಯಿತು. ನಂತರ ದೇವಾಲಯದಲ್ಲಿ ಪ್ರಸಾದ ವಿತರಣೆ ಮಾಡಲಾಯಿತು.

ದೇವಾಲಯದ ಪಾರುಪತ್ತೆಗಾರರಾದ ಎನ್.ಎಸ್. ಕೃಷ್ಣಸ್ವಾಮಿ, ಸಮಾಜಸೇವಕ ಮಹೇಂದ್ರ ಸಿಂಗ್‌ಕಾಳಪ್ಪ, ಅರ್ಚಕರಾದ ಶ್ರೀನಿವಾಸ್ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ವೆಂಕಟೇಶ ಪ್ರಸಾದ್, ರಾಘವ, ಗಣೇಶ, ಶ್ರೀಕಾಂತ ಸೇರಿದಂತೆ ಗ್ರಾಮದ ಎಲ್ಲಾ ಮುಖಂಡರು ಉಪಸ್ಥಿತರಿದ್ದರು.

ರಿಜ್ವಿ ಅರ್ಧಶತಕ; ಡೆಲ್ಲಿಗೆ ಸುಲಭ ತುತ್ತಾದ ಮುಂಬೈ



ಸಮೀರ್ ರಿಜ್ವಿ ಬ್ಯಾಟಿಂಗ್ ವೈಖರಿ.

ಡೆಲ್ಲಿ, ಏ.4(ವಿವಿಹೆಚ್)– ಸಮೀರ್ ರಿಜ್ವಿ ಅವರ ಆಕರ್ಷಕ ಅರ್ಧಶತಕದ ನೆರವಿನಿಂದ ಪ್ರವಾಸಿ ಮುಂಬೈ ಇಂಡಿಯನ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ಡೆಲ್ಲಿ ಕ್ಯಾಪಿಟಲ್ಸ್ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ 19ನೇ ಆವೃತ್ತಿಯ ಐಪಿಎಲ್–2026ರ 8ನೇ ಪಂದ್ಯದಲ್ಲಿ ಮುಂಬೈ ನೀಡಿದ 162 ರನ್‌ಗಳ ಸಾಧಾರಣ ಗುರಿ ಸರಾಗವಾಗಿ ಬೆನ್ನತ್ತುವಲ್ಲಿ ಸಮೀರ್ ರಿಜ್ವಿ ಹಾಗೂ ಪಥುಮ್ ನಿಸ್ಸಾಂಕ ಸಹಕಾರಿಯಾದರು. ನಿಸ್ಸಾಂಕ 30 ಎಸೆತಗಳಲ್ಲಿ 40 ರನ್ ಗಳಿಸಿ ಔಟಾದರು. ಇತ್ತ ಕಳೆದ ಪಂದ್ಯದಲ್ಲಿನ ಫಾರ್ಮ್ ಈ ಪಂದ್ಯದಲ್ಲೂ ಮುಂದುವರೆಸಿದ ರಿಜ್ವಿ 51 ಎಸೆತಗಳಲ್ಲಿ 7 ಸಿಕ್ಸರ್, 7 ಬೌಂಡರಿಗಳೊಂದಿಗೆ 90 ರನ್ ಗಳಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು.

ಮತ್ತೊಂದೆಡೆ ಆರಂಭಿಕ ಬ್ಯಾಟರ್ ಕೆ.ಎಲ್.ರಾಹುಲ್ ಕೇವಲ 1ರನ್ ಗಳಿಸಿ ಔಟಾದರೆ, ನಿತೀಶ್ ರಾಣಾ ಶೂನ್ಯ ಸಂಪಾದಿಸಿ ನಿರಾಸೆ ಮೂಡಿಸಿದರು. ಬಳಿಕ ಬಂದ ಡೇವಿಡ್ ಮಿಲ್ಲರ್ ಅಜೇಯ 21 ಹಾಗೂ ಟ್ರಿಸ್ಟನ್ ಸ್ಟಬ್ಸ್ 3ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ ಡೆಲ್ಲಿ 18.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 164ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮುಂಬೈ ಪರ ದೀಪಕ್ ಚಾಹರ್, ಮಿಚೆಲ್ ಸ್ಯಾಂಟ್ನರ್ ಹಾಗೂ ಕಾರ್ಬಿನ್ ಬಾಷ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್‌ಗೆ ಆರಂಭಿಕ ಆಘಾತ ಎದುರಾಯಿತು. ರಿಯಾನ್ ರಿಕೆಲ್ಟನ್ 9, ತಿಲಕ್ ವರ್ಮಾ ಡಕ್‌ಔಟ್ ಆದರು. ಆರಂಭದಲ್ಲಿ ಅಲ್ಪ ಹೋರಾಟ ನೀಡಿದ ರೋಹಿತ್ ಶರ್ಮಾ 26 ಎಸೆತಗಳಲ್ಲಿ 35 ರನ್ ಕಲೆಹಾಕಿ ಪೆವಿಲಿಯನ್ ಸೇರಿದರು.

ಬಳಿಕ ಬಂದ ನಾಯಕ ಸೂರ್ಯಕುಮಾರ್ ಯಾದವ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡುವ ಮೂಲಕ ತಂಡದ ಮೊತ್ತ ನೂರೈವತ್ತರ ಗಡಿ ದಾಟಿಸಿದರು. ಸೂರ್ಯ 36 ಎಸೆತಗಳಲ್ಲಿ 51ರನ್ ಬಾರಿಸಿದರು. ಉಳಿದಂತೆ ಶೇರ್ಫಾನೆ ರುದರ್‌ಫೋರ್ಡ್ 5, ನಮನ್ ಧಿರ್ 28 ಮಿಚೆಲ್ ಸ್ಯಾಂಟ್ನರ್ ಅಜೇಯ 28, ಕಾರ್ಬಿನ್ ಬಾಷ್ ಅಜೇಯ 11 ರನ್ ಗಳಿಸಿದರು. ಇದರೊಂದಿಗೆ ಮುಂಬೈ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಕೇವಲ 162ರನ್ ಗಳಿಸಲಷ್ಟೆ ಶಕ್ತವಾಯಿತು.

ಡೆಲ್ಲಿ ಪರ ಮುಖೇಶ್ ಕುಮಾರ್ 2 ವಿಕೆಟ್, ಲುಂಗಿ ಎನ್‌ಗಿಡಿ, ಅಕ್ಷರ್ ಪಟೇಲ್, ವಿಪ್ರಾಜ್ ನಿಗಮ್ ಹಾಗೂ ನಟರಾಜನ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. 51 ಎಸೆತಗಳಲ್ಲಿ 90ರನ್ ಗಳಿಸಿ ಡೆಲ್ಲಿ ಗೆಲುವಿಗೆ ಕಾರಣರಾದ ಸಮೀರ್ ರಿಜ್ವಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ರೋಚಕ ಪಂದ್ಯದಲ್ಲಿ ಗುಜರಾತ್ ವಿರುದ್ಧ ರಾಜಸ್ತಾನ ಜಯಭೇರಿ



ಜಿಟಿ ತಂಡದ ನಾಯಕ ರಶೀದ್ ಖಾನ್ ವಿಕೆಟ್ ಕಿತ್ತ ಸಂಭ್ರಮದಲ್ಲಿ ತುಷಾರ್ ಪಾಂಡೆ.

ಅಹ್ಮದಾಬಾದ್, ಏ.4(ವಿವಿಹೆಚ್)– ಕೊನೆಯ ಓವರ್‌ನಲ್ಲಿ ಕರಾರುವಕ್ಕಾದ ಬೌಲಿಂಗ್ ದಾಳಿ ನಡೆಸಿದ ತುಷಾರ್ ಪಾಂಡೆ ಅತಿಥೇಯ ಗಜರಾತ್ ಟೈಟನ್ಸ್ ತಂಡದ ವಿರುದ್ಧ ರಾಜಸ್ತಾನ್‌ಗೆ 6 ರನ್‌ಗಳ ಭರ್ಜರಿ ಗೆಲುವು ತಂದುಕೊಟ್ಟರು.

ಐಪಿಎಲ್–2026ರ 8ನೇ ಪಂದ್ಯದಲ್ಲಿ ರೋಚಕ ಗೆಲುವು ದಾಖಲಿಸಿದ ರಾಜಸ್ತಾನ್ ರಾಯಲ್ಸ್ 2024ರ ಸೋಲಿಗೆ ಸೇಡು ತೀರಿಸಿಕೊಂಡಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ತಾನ್ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 210 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಗುಜರಾತ್ ಟೈಟನ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 204ರನ್ ಗಳಿಸಿ ಸೋಲನನುಭವಿಸಿತು.

ರಾಜಸ್ತಾನ್ ಇನ್ನಿಂಗ್ಸ್: ಮೊದಲು ಬ್ಯಾಟ್ ಮಾಡಿದ ರಾಜಸ್ತಾನ್ ರಾಯಲ್ಸ್ ತಂಡ ಬೃಹತ್ ಮೊತ್ತ ಪೇರಿಸಿತು. ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಜೋಡಿ ಮೊದಲ ವಿಕೆಟ್‌ಗೆ 70ರನ್‌ಗಳ ಜೊತೆಯಾಟ ನೀಡಿದರು. ಸೂರ್ಯವಂಶಿ 10 ಎಸೆತಗಳಲ್ಲಿ 31 ರನ್ ಬಾರಿಸಿದರೆ, ಜೈಸ್ವಾಲ್ 36 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಸಹಿತ 55 ರನ್ ಚಚ್ಚಿದರು.

ನಾಯಕ ರಿಯಾನ್ ಪರಾಗ್ 8, ಶಿಮ್ರಾನ್ ಹೆಟ್ಮಯರ್ 18 ಹಾಗು ಫೆರಿರಾ 1 ರನ್ ಗಳಿಸಿ, ವೇಗವಾಗಿ ವಿಕೆಟ್ ಒಪ್ಪಿಸಿ ಹೊರನಡೆದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಸುಭದ್ರವಾಗಿ ನಿಂತು ಇನ್ನಿಂಗ್ಸ್ ಕಟ್ಟಿದ ಧ್ರುವ್ ಜುರೆಲ್ ತಂಡದ ಮೊತ್ತ ಇನ್ನೂರರ ಗಡಿ ದಾಟಲು ಸಹಕರಿಸಿದರು. 42 ಎಸೆತ ಎದುರಿಸಿ ತಲಾ 5 ಬೌಂಡರಿ ಹಾಗೂ ಸಿಕ್ಸರ್ ಒಳಗೊಂಡಂತೆ 75ರನ್ ಗಳಿಸಿದರು.

ಉಳಿದಂತೆ ರವೀಂದ್ರ ಜಡೇಜಾ ಅಜೇಯ 7, ಜೋಫ್ರಾ ಆರ್ಚರ್ 1 ರನ್ ಗಳಿಸಿ ಅಜೇಯರಾಗಿ ಉಳಿದರು.

ಗುಜರಾತ್ ಪರ ಕಗಿಸೋ ರಬಾಡ 2 ವಿಕೆಟ್, ಮೊಹಮ್ಮದ್ ಶಮಿ, ಅಶೋಕ್ ಶರ್ಮಾ, ರಶೀದ್ ಖಾನ್ ಹಾಗೂ ಪ್ರಸಿದ್ಧ್ ಕೃಷ್ಣ ತಲಾ ಒಂದೊಂದು ವಿಕೆಟ್ ಪಡೆದರು.

ಗುಜರಾತ್ ಇನ್ನಿಂಗ್ಸ್: ಗುಜರಾತ್‌ಗೆ ಸಾಯ್ ಸುದರ್ಶನ್ ಉತ್ತಮ ಆರಂಭ ಒದಗಿಸಿದರು. 44 ಎಸೆತಗಳಲ್ಲಿ 9 ಬೌಂಡರಿ, 3 ಸಿಕ್ಸರ್ ಸೇರಿದಂತೆ 73 ರನ್ ಗಳಿಸಿ ಔಟಾದರು. ಕುಮಾರ್ ಕುಶಾಗ್ರ 18, ಜೋಸ್ ಬಟ್ಲರ್ 26 ರನ್ ಗಳಿಸಿದರು.

ಗ್ಲೇನ್ ಫಿಲಿಪ್ಸ್ 3, ವಾಷಿಂಗ್ಟನ್ ಸುಂದರ್ 4, ರಾಹುಲ್ ತೆವಾಟಿಯಾ 12, ಶಾರುಖ್ ಖಾನ್ 11 ರನ್ ಗಳಿಸಿ ಬಂದಷ್ಟೆ ವೇಗವಾಗಿ ಹಿಂತಿರುಗಿದರು. ಮಧ್ಯಮ ಕ್ರಮಾಂಕದ ದಿಢೀರ್ ಕುಸಿತದಿಂದ ತಂಡ ಸಂಕಷ್ಟಕ್ಕೆ ಸಿಲುಕಿತು. ಕೊನೆಯ 4 ಓವರ್‌ಗಳಿಗೆ 40 ರನ್ ಬೇಕಿದ್ದ ವೇಳೆ ಒಂದಾದ ನಾಯಕ ರಶೀದ್ ಖಾನ್ ಹಾಗೂ ರಬಾಡ ಸಮಯೋಚಿತ ಆಟ ಆಡಿ, ಕೊನೆಯ 6 ಎಸೆತಗಳಿಗೆ 11 ರನ್ ಕೂರಿಸಿದರು.

ರಾಜಸ್ತಾನ್ ಪರ ರವಿ ಬಿಷ್ಣೋಯ್ ಪ್ರಮುಖ 4 ವಿಕೆಟ್ ಕಬಳಿಸಿ ಮಿಂಚಿದರು. ಬರ್ಗರ್, ದೇಶ್‌ಪಾಂಡೆ ಹಾಗೂ ರಿಯಾನ್ ಪರಾಗ್ ತಲಾ ಒಂದೊಂದು ವಿಕೆಟ್ ಪಡೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

ಕುಮಾರಸ್ವಾಮಿ ಕೇಂದ್ರ ಸಚಿವರಾಗಿರುವುದು ದಕ್ಷಿಣ ಭಾರತದ ಅದೃಷ್ಟ

ಆಂಧ್ರದ ಐಟಿ ಸಚಿವ ನಾರಾ ಲೋಕೇಶ್ ಬಣ್ಣನೆ

ರಾಯಚೂರು: ಕರ್ನಾಟಕದ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಸಚಿವರಾಗಿರುವುದು ದಕ್ಷಿಣ ಭಾರತದ ಅದೃಷ್ಟ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಪುತ್ರ, ಅಲ್ಲಿನ ಐಟಿ ಸಚಿವ ನಾರಾ ಲೋಕೇಶ್ ಬಣ್ಣಿಸಿದರು.

ಸಿಂಧನೂರಿನ ಹೊಸಳ್ಳಿ(ಇಜೆ) ಶ್ರೀಕೃಷ್ಣದೇವರಾಯ ಸೈನಿಕ ಶಾಲೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡಲ್ಲೇ ಮಾತು ಆರಂಭಿಸುವುದರೊಂದಿಗೆ ಇಲ್ಲಿನ ಮಕ್ಕಳು ತುಂಬಾ ಸ್ಮಾರ್ಟ್, ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದು ದಕ್ಷಿಣ ಭಾರತದ ಅದೃಷ್ಟ ಎಂದರು.

'ವಿಶಾಖ ಉಕ್ಕು ಆಂಧ್ರದ ಹಕ್ಕು' ಘೋಷಣೆಯೊಂದಿಗೆ ವಿಶಾಖಪಟ್ಟಣದಲ್ಲಿ ಸ್ಥಾಪಿಸಿಕೊಂಡ ಉಕ್ಕಿನ ಕಾರ್ಖಾನೆಯು ಹಿಂದೆ ಅಧಿಕಾರದಲ್ಲಿದ್ದ ನಾಯಕರ ಭ್ರಷ್ಟಾಚಾರದಿಂದ ಅನೇಕ ಸಮಸ್ಯೆಗೆ ಗುರಿಯಾಯಿತು. ಅಂತಿಮವಾಗಿ ಕಾರ್ಖಾನೆ ಮುಚ್ಚುವ ಅಥವಾ ಮಾರಾಟ ಮಾಡುವ ಹಂತಕ್ಕೆ ಬಂದಿತ್ತು. ಆಗ ನಾನು ವಿಶಾಖಪಟ್ಟಣ ಸಂಸದ ಭರತ್ ಅವರಿಗೆ ವಾರಕ್ಕೊಮ್ಮೆಯಾದರೂ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ವಿಶಾಖ ಉಕ್ಕು ಕಾರ್ಖಾನೆಯನ್ನು ಖಾಸಗೀಕರಣ ಮಾಡಬಾರದು ಎಂದು ಮನವಿ ಮಾಡುವಂತೆ ತಿಳಿಸಿದ್ದೆ. ನಂತರ ಫೋನ್‌ನಲ್ಲಿ ಮಾತನಾಡಿದ ಕುಮಾರಸ್ವಾಮಿ ಅವರು ಬ್ರದರ್, ನಾನು ಆಂಧ್ರದ ಪರ ನಿಲ್ಲುತ್ತೇನೆ, ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ನಾನು ಬಿಡುವುದಿಲ್ಲ ಎಂದು ನನಗೆ ಮಾತು ಕೊಟ್ಟರು. ಹಾಗೆಯೇ ಅವರು ಕೊಟ್ಟ ಮಾತು ಉಳಿಸಿಕೊಂಡರು ಎಂದು ತಿಳಿಸಿದರು.



ಕುಮಾರಸ್ವಾಮಿ ಅವರು ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಸಚಿವರಾಗಿರುವುದು ದಕ್ಷಿಣ ಭಾರತದ ಅದೃಷ್ಟ, ಕುಮಾರಸ್ವಾಮಿ ಅವರ ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ಅವಿನಾಭಾವ ಸಂಬಂಧ ಇದೆ. ಹಿಂದೆ ಚಂದ್ರಬಾಬು ನಾಯ್ಡು ಅವರು ಸಂಯುಕ್ತ ರಂಗದ ಸಂಚಾಲಕರಾಗಿದ್ದಾಗ ದೇವೇಗೌಡರು ಪ್ರಧಾನಿಯಾಗಿದ್ದರು. ಇಬ್ಬರು ಸೇರಿ ಅದ್ಭುತವಾದ ಯೋಜನೆಗಳನ್ನು ಜಾರಿಗೆ ತಂದಿದ್ದರು ಎಂದು ಸ್ಮರಿಸಿಕೊಂಡರು.

ಕರ್ನಾಟಕವನ್ನು ಪವಿತ್ರ ಸ್ಥಳವೆಂದು ವರ್ಣಿಸಿದ ನಾರಾ ಲೋಕೇಶ್, ಕನ್ನಡ ಮತ್ತು ತೆಲುಗು ಸಂಸ್ಕೃತಿಗಳು ಅಣ್ಣ–ತಮ್ಮಂದಿರಂತೆ ಒಂದೇ ರೀತಿಯವು ಎಂದರು. ಇತ್ತೀಚೆಗೆ ನಡೆದ ಪಹಲ್ಗಾಮ್ ದಾಳಿ ಘಟನೆ ಉಲ್ಲೇಖಿಸಿ, ಸಮಾಜದಲ್ಲಿ ಮೌಲ್ಯಾಧಾರಿತ ಶಿಕ್ಷಣ ಅತ್ಯಗತ್ಯ ಎಂದರು.

ಏ.8 ರಂದು ಟಿಡಿಎಸ್ ಬಗ್ಗೆ ಸಮಾಲೋಚನೆ

ಮೈಸೂರು, ಏ.4–ಮೈಸೂರಿನ ಭವಾನಿ ಅಸೋಸಿಯೇಟ್ಸ್ ವತಿಯಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಆದಾಯ ತೆರಿಗೆ ಕಾನೂನು, ಟಿಡಿಎಸ್ ಕಾಯ್ದೆ ಕುರಿತ ಸಮಾಲೋಚನೆಯ ಕಾರ್ಯಾಗಾರವನ್ನು, ಏ. 8 ರಂದು ಬೆಳಗ್ಗೆ 10 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಭವಾನಿ ಅಸೋಸಿಯೇಟ್ಸ್‌ನ ಎಸ್.ಡಿ.ಶ್ರೀನಿವಾಸ್ ಅವರ ಮೊ: 9845120429 ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಆಟೋ ಇಂಧನದ ಮೇಲಿನ ತೆರಿಗೆ ಕೈಬಿಟ್ಟು 6ನೇ ಗ್ಯಾರಂಟಿ ಕೊಡಿ

ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಆಗ್ರಹ



ಹೆಚ್.ಡಿ.ಕುಮಾರಸ್ವಾಮಿ

> **"ಸಂಕಷ್ಟ ಪರಿಸ್ಥಿತಿ ಸುಧಾರಿಸುವವರೆಗೆ ಮಾಸಿಕ 15,000 ರೂ. ಗ್ಯಾರಂಟಿ ಕೊಡಿ ಎಂಬುದಾಗಿ ಆಟೋ ಚಾಲಕರು ಒತ್ತಾಯಿಸುತ್ತಿದ್ದಾರೆ. ಐದು ಭಾಗ್ಯಗಳನ್ನು ನೀಡಿರುವ ಸರ್ಕಾರ 6ನೇ ಗ್ಯಾರಂಟಿ ಕೊಡಲಿ.**
> **–ಹೆಚ್.ಡಿ.ಕುಮಾರಸ್ವಾಮಿ**

ಬೆಂಗಳೂರು, ಏ.4(ಕೆಎಂಶಿ)– ಆಟೋ ಇಂಧನದ ಮೇಲಿನ ತೆರಿಗೆಯನ್ನು ರಾಜ್ಯ ಸರ್ಕಾರ ವಾಪಸ್ ಪಡೆಯುವ ಮೂಲಕ ಚಾಲಕರಿಗೆ 6ನೇ ಗ್ಯಾರಂಟಿ ಘೋಷಿಸಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಸಿಂಧನೂರಿನ ಹೊಸಹಳ್ಳಿ ಸೈನಿಕ ಶಾಲೆ ಉದ್ಘಾಟನೆಗೆ ಆಗಮಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರದ ಮೇಲೆ ಟೀಕೆ ಮಾಡುವ ಬದಲು ಆಟೋ ಚಾಲಕರು ಬಳಸುವ ಇಂಧನದ ಮೇಲೆ ರಾಜ್ಯ ವಿಧಿಸಿರುವ ತೆರಿಗೆ ವಾಪಸ್ ಪಡೆದು ಐದು ಗ್ಯಾರಂಟಿಗಳ ಜೊತೆಗೆ 6ನೇ ಗ್ಯಾರಂಟಿ ಕೊಡಲಿ ಎಂದು ಹೇಳಿದರು.

ಜಗತ್ತಿನಲ್ಲಿ ಯುದ್ಧ ಸನ್ನಿವೇಶದಿಂದ ತೈಲ ಪೂರೈಕೆ ಮತ್ತು ಆರ್ಥಿಕ ಸಂಕಷ್ಟ ಎದುರಾಗಿದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯನ್ನೂ ಕೇಂದ್ರ ಸರ್ಕಾರ ಸಮರ್ಥವಾಗಿ ನಿಭಾಯಿಸುತ್ತಿದೆ. ಬಿಕ್ಕಟ್ಟಿನ ಸ್ಥಿತಿಯಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಿದ್ದರಾಮಯ್ಯ ವಿಫಲ ಯತ್ನ ಮಾಡುತ್ತಿದ್ದಾರೆ. ತೈಲ ಬಿಕ್ಕಟ್ಟು ನಾವು ತಂದುಕೊಂಡ ಸಮಸ್ಯೆಯಲ್ಲ, ಕೊಲ್ಲಿ ರಾಷ್ಟ್ರಗಳಲ್ಲಿನ ಯುದ್ಧ ಕಾರಣ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಆದಾಗ್ಯೂ ಜನಜೀವನಕ್ಕೆ ತೊಂದರೆ ಆಗದಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಶ್ರಮಿಸುತ್ತಿದೆ. ಯುದ್ಧದ ಪರಿಸ್ಥಿತಿಯಲ್ಲೂ ಭಾರತಕ್ಕೆ ತೈಲ ಹಡಗುಗಳು ನಿರಾಯಾಸವಾಗಿ ಬರುತ್ತಿವೆ. ಇದಕ್ಕೆ ಪ್ರಧಾನಿ ಮೋದಿ ಸರ್ಕಾರ ಕೈಗೊಂಡ ಕ್ರಮಗಳೇ ಕಾರಣ ಎಂದರು.

ಇಂತಹ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಿದ್ದರೆ ಇದೇ ಸಂಕಷ್ಟ ಸ್ಥಿತಿ ಇರುತ್ತಿತ್ತು. ಅನಗತ್ಯ ಟೀಕೆ ಸರಿಯಲ್ಲ, ಭಾರತದಲ್ಲಿ ಅಗತ್ಯ ವಸ್ತುಗಳ ಪೂರೈಕೆ ಸರಪಳಿಯಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸ ಆಗಿಲ್ಲ. ರಾಜಕೀಯ ಉದ್ದೇಶದಿಂದ ಕೇಂದ್ರವನ್ನು ಟೀಕಿಸುವುದು ತಪ್ಪು ಎಂದು ಹೇಳಿದರು.

ದೇವಲಾಪುರದಲ್ಲಿರುವ ಅಕ್ರಮ ಕ್ಲಿನಿಕ್ ಮುಚ್ಚುವಂತೆ ಆಯುಷ್ ಆದೇಶ

- ವಿದ್ಯಾರ್ಹತೆ ಇಲ್ಲದಿದ್ದರೂ ತಾನು ವೈದ್ಯನೆಂದು ಚಿಕಿತ್ಸೆ
- ಪರಿಶೀಲನೆ ವೇಳೆ ಅಲೋಪತಿ ಚುಚ್ಚುಮದ್ದು, ಮಾತ್ರೆಗಳು ಪತ್ತೆ

ಮೈಸೂರು, ಮಾ.4(ಜಿಎ)–ವೈದ್ಯಕೀಯ ವಿದ್ಯಾರ್ಹತೆ ಇಲ್ಲದಿದ್ದರೂ ನಕಲಿ ವೈದ್ಯನೊಬ್ಬ ತಾನು ಡಾಕ್ಟರ್ ಎಂದು ಹೇಳಿಕೊಂಡು ದೇವಲಾಪುರದಲ್ಲಿ ಬಡರೋಗಿಗಳಿಗೆ ಅಲೋಪತಿ ಚಿಕಿತ್ಸೆ ನೀಡುತ್ತಿದ್ದು, ಅಕ್ರಮವಾಗಿ ನಡೆಸುತ್ತಿದ್ದ ಶ್ರೀ ಗುರುಮಲ್ಲೇಶ್ವರ ಚಿಕಿತ್ಸಾಲಯವನ್ನು ಮುಚ್ಚುವಂತೆ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ ಆದೇಶ ಹೊರಡಿಸಿದ್ದಾರೆ.

ಮೈಸೂರು ತಾಲ್ಲೂಕು, ವರುಣ ಹೋಬಳಿ, ದೇವಲಾಪುರ ಗ್ರಾಮದಲ್ಲಿ ನವೀನ್ ಎಂಬಾತ ತಂದೆಗೆ ನೀಡಿದ್ದ ಲೈಸನ್ಸ್‌ನಲ್ಲಿ ಅಕ್ರಮವಾಗಿ ಕ್ಲಿನಿಕ್ ನಡೆಸುತ್ತಿದ್ದು, ಈ ಹಿನ್ನೆಲೆಯಲ್ಲಿ ಆಯುಷ್ ಅಧಿಕಾರಿಗಳು ಶ್ರೀ ಗುರುಮಲ್ಲೇಶ್ವರ ಚಿಕಿತ್ಸಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಅಲೋಪತಿ ಚುಚ್ಚುಮದ್ದು, ಮಾತ್ರೆಗಳು ಇದ್ದಿದ್ದು ಕಂಡು ಬಂದಿದೆ.

ಮೈಸೂರು ಜಿಲ್ಲೆ ದೇವಲಾಪುರದಲ್ಲಿರುವ ಶ್ರೀ ಗುರುಮಲ್ಲೇಶ್ವರ ಚಿಕಿತ್ಸಾಲಯದ ಡಾ.ವಿವೇಕಾನಂದ ಜಿ.ಸಣ್ಣೂರು ಅವರು ಡಿಪ್ಲೋಮೋ ಇನ್ ಆಯುರ್ವೇದ ಕೋರ್ಸ್ ಅಡಿಯಲ್ಲಿ ನೋಂದಣಿ ಪಡೆದಿದ್ದು, ಬೆಂಗಳೂರಿನ ಕೆಎಯುಪಿ ಮಂಡಳಿ ಆದೇಶದ ಅನ್ವಯ ಕೆಪಿಎಂಇಎ ಅಡಿಯಲ್ಲಿ ಕ್ಲಿನಿಕ್, ಆಸ್ಪತ್ರೆಯನ್ನು ನೋಂದಾಯಿಸಲು ವೈದ್ಯಕೀಯ ಪದವಿ ಅವಶ್ಯವಿರುವ ಕಾರಣ ಡಿಪ್ಲೋಮೋ ಇನ್ ಆಯುರ್ವೇದ ಕೋರ್ಸ್‌ನಡಿ ಪಡೆದಿರುವ ನೋಂದಣಿಯನ್ನು ಈ ಸಂಬಂಧ ವಿಚಾರಣೆ ನಡೆಸಿದಾಗ ಈಗಾಗಲೇ 2025ರ ಅ.30 ರಂದು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ ಸಭೆಯಲ್ಲಿ ವಜಾಗೊಳಿಸಲಾಗಿದೆ ಎಂದು ತಿಳಿದು ಬಂದಿದೆ.



ಪರಿಶೀಲನೆ ವೇಳೆ ಕ್ಲಿನಿಕ್‌ನಲ್ಲಿ ಕಂಡು ಬಂದ ಅಲೋಪತಿ ಮಾತ್ರೆ, ಚುಚ್ಚುಮದ್ದುಗಳು

ಆದರೂ ದೇವಲಾಪುರ ಗ್ರಾಮದಲ್ಲಿ ಕಳೆದ 45–50 ವರ್ಷಗಳಿಂದ ಡಾ.ವಿವೇಕಾನಂದ ಸಣ್ಣೂರು ಡಿಎಎಂ (ಆಯುರ್ವೇದ) ಶ್ರೀ ಗುರುಮಲ್ಲೇಶ್ವರ ಕ್ಲಿನಿಕ್‌ಅನ್ನು ಇವರು ನಡೆಸಿಕೊಂಡು ಬಂದಿದ್ದಾರೆ. ಈಗ ಇವರ ಮಗನಾದ ನವೀನ್ ಅದೇ ಹೆಸರಿನಲ್ಲಿ ಕ್ಲಿನಿಕ್ ಅನ್ನು ಯಾವುದೇ ವೈದ್ಯಕೀಯ ವಿದ್ಯಾರ್ಹತೆ ಇಲ್ಲದಿದ್ದರೂ ತಾನು ಡಾಕ್ಟರ್ ಎಂದು ಹೇಳಿಕೊಂಡು ತಮ್ಮ ಗ್ರಾಮ ಮತ್ತು ಅಕ್ಕಪಕ್ಕದ ಗ್ರಾಮಗಳಿಂದ ಬರುವ ಬಡರೋಗಿಗಳಿಗೆ ಅಲೋಪತಿ ವಿಧಾನ ಅನುಸರಿಸಿ ಚುಚ್ಚುಮದ್ದು, ಮಾತ್ರೆ ನೀಡುತ್ತಿದ್ದಾರೆ. ಅಲ್ಲದೇ ಈತ ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ಮತ್ತು ರಾತ್ರಿ 7 ಗಂಟೆಯಿಂದ 9 ಗಂಟೆಯ ತನಕ ಕ್ಲಿನಿಕ್ ನಡೆಸುತ್ತಿದ್ದಾರೆ ಎಂದು ಆಯುಷ್ ಅಧಿಕಾರಿಗಳು ಆರೋಗ್ಯ ಇಲಾಖೆಗೆ ದೂರು ಸಲ್ಲಿಸಿದರು.

ದೂರಿನನ್ವಯ ಭೇಟಿ ನೀಡಿ ಪರಿಶೀಲಿಸಿದಾಗ ಡಾ.ವಿವೇಕಾನಂದ ಸಣ್ಣೂರು ಅವರು ಶ್ರೀ ಗುರುಮಲ್ಲೇಶ್ವರ ಕ್ಲಿನಿಕ್‌ನಲ್ಲಿ ಅತಿ ಹೆಚ್ಚು ಅಲೋಪತಿ ಔಷಧಗಳು ಕಂಡು ಬಂದಿವೆ. ಅಲ್ಲದೇ ಪರಿಶೀಲನೆ ವೇಳೆ ಕೆಪಿಎಂಇ(ಕರ್ನಾಟಕ ಮೆಡಿಕಲ್ ಎಸ್ಟಾಬ್ಲಿಶ್‌ಮೆಂಟ್ ಅಥಾರಿಟಿ) ಕಾಯಿದೆಯಡಿ ನೋಂದಣಿ ಮಾಡಿಸಿರುವ ಸರ್ಟಿಫಿಕೇಟ್‌ನ ಅವಧಿಯೂ ಮುಕ್ತಾಯಗೊಂಡಿದೆ. ಹಾಗಾಗಿ ಕೂಡಲೇ ಕ್ಲಿನಿಕ್ ಮುಚ್ಚಲು ಸೂಚನೆ ನೀಡಲಾಗಿದೆ. ಮತ್ತೆ ಕ್ಲಿನಿಕ್ ತೆರೆದರೆ ತಮ್ಮ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು ಎಂದು ಆಯುಷ್ ಅಧಿಕಾರಿ ಡಾ.ವಿವೇಕಾನಂದ ಜಿ.ಸಣ್ಣೂರುಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ತಾನೋದಿದ ಊರಿನ ಶಾಲೆಯೂ ಸೇರಿ ನಾಲ್ಕು ಸರ್ಕಾರಿ ಶಾಲೆಗೆ

ಲಕ್ಷಾಂತರ ಮೌಲ್ಯದ ವಸ್ತುಗಳ ಕೊಡುಗೆ ನೀಡಿದ ವಕೀಲ 'ಲಾ ಗೈಡ್' ವೆಂಕಟೇಶ್



ಹೆಚ್.ಎನ್.ವೆಂಕಟೇಶ್ ಅವರು, ನಾಲ್ಕು ಶಾಲೆಗಳಿಗೆ ಕಂಪ್ಯೂಟರ್ ಹಾಗೂ ಕ್ರೀಡಾ ಪರಿಕರಗಳನ್ನು ಎಡಿಸಿ ಡಾ.ಪಿ.ಶಿವರಾಜು ಮೂಲಕ ಹಸ್ತಾಂತರಿಸಿದರು.

ಮೈಸೂರು, ಏ.4– ಮೈಸೂರಿನ ಹಿರಿಯ ವಕೀಲರೂ ಆದ ಲಾ ಗೈಡ್ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್. ವೆಂಕಟೇಶ್ ಅವರು, ತಾವು ಕಲಿತ ಶಾಲೆ ಸೇರಿದಂತೆ ನಾಲ್ಕು ಸರ್ಕಾರಿ ಶಾಲೆಗಳಿಗೆ ಲಕ್ಷಾಂತರ ಮೌಲ್ಯದ ಅಗತ್ಯ ವಸ್ತುಗಳನ್ನು ಕೊಡುಗೆ ನೀಡಿದರು.

ತಾವು ಕಲಿತ ಹುಣಸೂರು ತಾಲೂಕು ಹಿಂಡ್ಲುಗೂಡು ಶಾಲೆಗೆ ಲಕ್ಷ ನಗದು, ಕಂಪ್ಯೂಟರ್ ಹಾಗೂ ಕ್ರೀಡಾ ಪರಿಕರಗಳು ವೈಯಕ್ತಿವಾಗಿ ನೀಡಿದರೆ, ಲಾ ಗೈಡ್ ವತಿಯಿಂದ ಕಿರಂಗೂರು ಕ್ಲಸ್ಟರ್ ವ್ಯಾಪ್ತಿಯ ದಾಸನಪುರ ಸರ್ಕಾರಿ ಶಾಲೆ, ದೊಡ್ಡ ಹೇಜ್ಜೂರು ಸರ್ಕಾರಿ ಶಾಲೆ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಕಂಪ್ಯೂಟರ್ ಅನ್ನು ಹಿಂಡಗೂಡ್ಲು ಸರ್ಕಾರಿ ಶಾಲಾ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರ ಮೂಲಕ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್, ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ ಶಾಲೆ ಹಾಗೂ ಹುಟ್ಟೂರನ್ನು ಎಂದಿಗೂ ಮರೆಯಬಾರದು. ಲಾ ಗೈಡ್ ವೆಂಕಟೇಶ್ ಅವರು ಗ್ರಾಮದ ದೇವಾಲಯದ ಅಭಿವೃದ್ಧಿ ಜೊತೆಗೆ ಅವರು ಕಲಿತ ಶಾಲೆಗೆ ಶಿಕ್ಷಣಕ್ಕೆ ಪೂರಕವಾದ ಸಾಮಗ್ರಿಗಳನ್ನು ನೀಡುತ್ತಿರುವುದು ಅಭಿನಂದನಾರ್ಹ. ಅದಲ್ಲದೆ ಸರ್ಕಾರವನ್ನು ಒತ್ತಾಯಿಸಿ 3.25 ಕೋಟಿ ವಿಶೇಷ ಅನುದಾನ ತಂದು ರಸ್ತೆ ಅಭಿವೃದ್ಧಿ ಮಾಡಿಸಿರುವುದು ಮೆಚ್ಚುಗೆ ಸಂಗತಿ. ಗ್ರಾಮಸ್ಥರ ಸಹಕಾರದೊಂದಿಗೆ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿರುವ ವೆಂಕಟೇಶ್ ಅವರಿಗೆ ಶುಭವಾಗಲಿ ಎಂದು ಹಾರೈಸಿದರು.

ಹಿರಿಯ ವಕೀಲ ಹರೀಶ್ ಕುಮಾರ್ ಹೆಗ್ಡೆ ಮಾತನಾಡಿ, ಇಂದಿನ ಡಿಜಿಟಲ್ ಯುಗದಲ್ಲಿ ಶಿಕ್ಷಣ ಎಂದರೆ, ಕೇವಲ ಪುಸ್ತಕಾಧಾರಿತ ಅಧ್ಯಯನವಲ್ಲ. ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಬೇಕಾದರೆ ಮಕ್ಕಳಿಗೆ ಕಂಪ್ಯೂಟರ್ ಹಾಗೂ ತಂತ್ರಜ್ಞಾನ ಆಧಾರಿತ ಅಧ್ಯಯನ ಅವಶ್ಯಕ. ಇದು ಸರ್ಕಾರಿ ಶಾಲೆಗಳ ಮಕ್ಕಳಿಗೂ ಲಭ್ಯವಾಗಬೇಕು ಎಂಬ ಆಶಯದೊಂದಿಗೆ ಈ ಸೇವೆ ಕೈಗೊಂಡಿರುವುದು ಮಾದರಿಯಾಗಿದೆ. ನಾನೂ ಕೂಡ ಈ ಶಾಲೆಗೆ ಕ್ರೀಡಾ ಸಾಮಗ್ರಿಗಳಿಗೆ ವೈಯಕ್ತಿಕವಾಗಿ 51 ಸಾವಿರ ನೆರವು ನೀಡುತ್ತೇನೆ ಎಂದರು.

ಹಿರಿಯ ವಕೀಲರಾದ ಹೆಚ್.ಎನ್. ವೆಂಕಟೇಶ್ ಮಾತನಾಡಿ, ನನ್ನ ತಂದೆ ಶಿಕ್ಷಕರಾಗಿ ಹಲವರ ವಿದ್ಯಾರ್ಜನೆಗೆ ನೆರವಾಗಿದ್ದಾರೆ. ನಾನೂ ಕೂಡ ಹುಟ್ಟೂರಿಗೆ ಏನಾದರೂ ಕೊಡುಗೆ ನೀಡಬೇಕೆಂಬ ಸಂಕಲ್ಪದೊಂದಿಗೆ ಕೈಲಾದಷ್ಟು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದೇನೆ. ಎಲ್ಲವೂ ಗ್ರಾಮಸ್ಥರು ಉತ್ತಮ ಸಹಕಾರದಿಂದ ಸಾಧ್ಯವಾಗಿದೆ. ನಮ್ಮೂರನ್ನು ವ್ಯಾಜ್ಯ ಮುಕ್ತ ಗ್ರಾಮ ಮಾಡುವುದೇ ನನ್ನ ಗುರಿ. ಅದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಶಿಕ್ಷಣ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಉದಯಕುಮಾರ್ ಮಾತನಾಡಿ, ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಗ್ರಾಮಾಂತರ ಪ್ರದೇಶದ ಮಕ್ಕಳು ತುಂಬಾ ಮುಂದಿದ್ದಾರೆ. ಶಿಕ್ಷಕರು ಹಾಗೂ ಪೋಷಕರು ಮತ್ತಷ್ಟು ಪ್ರೋತ್ಸಾಹ ನೀಡಿದರೆ ಉನ್ನತ ಶಿಕ್ಷಣ ಪಡೆಯುವುದರ ಜೊತೆಗೆ ಉನ್ನತ ಹುದ್ದೆಗಳನ್ನು ಗಳಿಸುತ್ತಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಪತ್ರಕರ್ತ ಎಂ.ಬಿ.ಮರಮಕಲ್, ಬಿಇಓ ಮಹದೇವ್, ಟಿವಿ9 ರಾಮ್, ಪಬ್ಲಿಕ್ ಟಿವಿ ಕೆ.ಪಿ.ನಾಗರಾಜ್, ಟೈಮ್ಸ್ ಆಫ್ ಇಂಡಿಯಾದ ಲಾರೆನ್ಸ್ ಮಿಲ್ಟನ್, ದಾ.ರಾ. ಮಹೇಶ್, ಇಸಿಓ ಕೇಶವಮೂರ್ತಿ, ಶ್ರೀನಿವಾಸ್‌ಮೂರ್ತಿ, ಗ್ರಾಮದ ಯಜಮಾನರುಗಳಾದ ಶಿವಕುಮಾರ್, ಕುಮಾರ್, ರಾಜೇಗೌಡ(ಅಪ್ಪು), ಶೇಖರ್, ಮಂಜು, ಚೇತನ್, ರಾಮೇಗೌಡ, ಶೇಖರೇಗೌಡ, ಕುಮಾರ್, ವೆಂಕಟೇಶ್ ಶಿಕ್ಷಕರಾದ ಚಂದ್ರಶೇಖರ, ರಮೇಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ನೀರಿನ ಕರ, ಒಳಚರಂಡಿ ಶುಲ್ಕ ಹೆಚ್ಚಳಕ್ಕೆ ಮಾಜಿ ಮೇಯರ್ ಶಿವಕುಮಾರ್ ಆಕ್ಷೇಪ

ಮೊದಲು ವಸೂಲಾತಿ ಅಂಕಿಅಂಶವುಳ್ಳ ಶ್ವೇತಪತ್ರ ಹೊರಡಿಸಲು ಆಗ್ರಹ

ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳದ್ದು ಏಕಪಕ್ಷೀಯ ನಿರ್ಧಾರ; ಆರೋಪ

ಮೈಸೂರು,ಏ.4(ಎಂಟಿವೈ)– ನೀರಿನ ಕರ ಹಾಗೂ ಒಳಚರಂಡಿ ನಿರ್ವಹಣಾ ಶುಲ್ಕ ಹೆಚ್ಚಿಸಿರುವ ಮೈಸೂರು ಮಹಾನಗರ ಪಾಲಿಕೆಯು, ಮೊದಲು ಕರ ವಸೂಲಾತಿಯ ವಿಧಾನಸಭಾವಾರು ಅಂಕಿಅಂಶವನ್ನು ಒಳಗೊಂಡ ಶ್ವೇತಪತ್ರ ಪ್ರಕಟಿಸಲಿ ಎಂದು ಮಾಜಿ ಮೇಯರ್ ಶಿವಕುಮಾರ್ ಆಗ್ರಹಿಸಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಪಾಲಿಕೆ ನೀರಿನ ಶುಲ್ಕವನ್ನು ಶೇ.30 ಮತ್ತು ಒಳಚರಂಡಿ ನಿರ್ವಹಣಾ ಶುಲ್ಕವನ್ನು ಶೇ.10ರಷ್ಟು ಹೆಚ್ಚಳ ಮಾಡಿರುವ ಆದೇಶವನ್ನು ಜಾರಿಗೊಳಿಸುವ ಮುನ್ನ ಕರ ಸಂಗ್ರಹ ಸಂಬಂಧಿತ ಶ್ವೇತಪತ್ರ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದರು.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಜನಪ್ರತಿನಿಧಿಗಳು ಇಲ್ಲದ ಸಂದರ್ಭದಲ್ಲಿ ಅಧಿಕಾರಿಗಳೇ ಇಂತಹ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರುವುದು ಖಂಡನೀಯ. ಏ.1ರಿಂದ ಜಾರಿಗೆ ಬರುವಂತೆ ನೀರಿನ ದರ, ಒಳಚರಂಡಿ ಶುಲ್ಕ ಹೆಚ್ಚಿಸಿದೆ. ಇದು ಜನಸಾಮಾನ್ಯರಿಗೆ ಭಾರೀ ಹೊರೆಯಾಗಲಿದೆ ಎಂದು ಹೇಳಿದರು.

ಕರ್ನಾಟಕ ನಗರಾಭಿವೃದ್ಧಿ ಅಧಿನಿಯಮಗಳ ಅನ್ವಯ ಪ್ರತಿ 3 ವರ್ಷಗಳಿಗೊಮ್ಮೆ ನೀರಿನ ದರ ಪರಿಷ್ಕರಣೆಗೆ ಅವಕಾಶವಿದೆ. ಆದರೆ 14 ವರ್ಷಗಳ ನಂತರ ನೀರಿನ ದರ ಏರಿಕೆ ಮಾಡಲಾಗಿದೆ ಎಂದು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹೇಳಿಕೆ ನೀಡಿದ್ದಾರೆ. ಇಸ್ರೇಲ್–ಇರಾನ್ ಯುದ್ಧದಿಂದಾಗಿ ಮಧ್ಯ ಪ್ರಾಚ್ಯ ದೇಶಗಳಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಬೆಳವಣಿಗೆಗಳ ಪರಿಣಾಮವಾಗಿ, ಜನರಿಗೆ ಅಡುಗೆ ಅನಿಲ ಸಿಲಿಂಡರ್ ಸಿಗುತ್ತಿಲ್ಲ. ಪೆಟ್ರೋಲ್, ಡೀಸೆಲ್, ಸಿಎನ್‌ಜಿ, ಪಿಎನ್‌ಜಿ ಮುಂತಾದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯಾಗಿದೆ. ಗ್ಯಾರಂಟಿ ಯೋಜನೆಗಳಿಂದ ಆರ್ಥಿಕವಾಗಿ ದಿವಾಳಿ ಆಗಿರುವ ರಾಜ್ಯದಲ್ಲಿ ವಿದ್ಯುತ್, ಹಾಲು ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಸುವ ಮೂಲಕ ಜನಸಾಮಾನ್ಯರ ಬದುಕನ್ನು ಈಗಾಗಲೇ ದುಸ್ತರ ಸ್ಥಿತಿಗೆ ದೂಡಿದೆ. ಇಂತಹ ಪರಿಸ್ಥಿತಿಯಲ್ಲಿ ಸ್ಥಳೀಯ ಸಂಸ್ಥೆಯೂ ಬರೆ ಎಳೆದಿರುವುದು ಸರಿಯಲ್ಲ ಎಂದು ಅಸಮಾದಾನ ವ್ಯಕ್ತಪಡಿಸಿದರು.



ಮಾಜಿ ಮೇಯರ್ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯರಾದ ಎಂ.ಯು.ಸುಬ್ಬಯ್ಯ, ರಂಗಸ್ವಾಮಿ, ಸಾತ್ವಿಕ್ ಸಂದೇಶ್ ಸ್ವಾಮಿ ಚಿತ್ರದಲ್ಲಿದ್ದಾರೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾನಗರ ಪಾಲಿಕೆ ನೀರಿನ ತೆರಿಗೆ ಮತ್ತು ಒಳಚರಂಡಿ ಸೆಸ್ ಹೆಚ್ಚಳ ಮಾಡುವ ಮೂಲಕ ಸಾರ್ವಜನಿಕರಿಗೆ ಮತ್ತಷ್ಟು ಹೊರೆಯಾಗಿದೆ. ಪ್ರತಿ ತಿಂಗಳ ಕನಿಷ್ಠ ದರವನ್ನು 125 ರೂ.ಗಳಿಂದ 163ಕ್ಕೆ ಏರಿಕೆ ಮಾಡಲಾಗಿದೆ. 25 ಸಾವಿರ ಲೀಟರ್‌ವರೆಗೆ ಪ್ರತಿ ಸಾವಿರ ಲೀಟರ್ ನೀರಿಗೆ 5 ರೂ. ತೆರಿಗೆ ಇತ್ತು. ಅದನ್ನು 6.50 ರೂ.ಗಳಿಗೆ ಏರಿಸಲಾಗಿದೆ. 50 ಸಾವಿರ ಲೀಟರ್‌ವರೆಗೆ ಪ್ರತಿ ಲೀಟರ್‌ಗೆ 8 ರೂ. ಇದ್ದ ದರವನ್ನು 10 ರೂ.ಗಳಿಗೆ, 75 ಸಾವಿರ ಲೀಟರ್‌ವರೆಗೆ 12ರಿಂದ 15 ರೂ.ಗಳಿಗೆ, 1 ಲಕ್ಷ ಲೀಟರ್‌ವರೆಗೆ 16ರಿಂದ 20 ರೂ.ಗಳಿಗೆ ಹಾಗೂ 1 ಲಕ್ಷ ಲೀಟರ್ ಮೇಲ್ಪಟ್ಟು ಪ್ರತಿ ಲೀಟರ್‌ಗೆ 20ರಿಂದ 25 ರೂ.ಗಳಿಗೆ ಏರಿಕೆ ಮಾಡಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಪರಿಷ್ಕರಣೆ ಸರಿಯಲ್ಲ ಎಂದರು.

ಪಾಲಿಕೆ ಆಯುಕ್ತರು, ಹೆಚ್ಚುವರಿಯಾಗಿ ಸಂಗ್ರಹ ಆಗುವ ಮೊತ್ತವನ್ನು ಯಾವ ಯೋಜನೆಗಳಿಗೆ ಬಳಸುತ್ತೇವೆ ಎಂಬುದನ್ನು ತಿಳಿಸಿಲ್ಲ. ವಾಸ್ತವದಲ್ಲಿ ನಗರದ ಅಭಿವೃದ್ಧಿ ಯೋಜನೆಗೆ ಸಂಬಂಧಪಟ್ಟ ಕಾರ್ಯ ಯೋಜನೆಗಳೇ ಇಲ್ಲ. ಇದೆಲ್ಲದರ ನಡುವೆ ಪುರಭವನದ ಮುಂದೆ ಟಾಂಗಾ ನಿಲ್ದಾಣ ನಿರ್ಮಿಸಲು ಕಾರ್ಯಾದೇಶ ನೀಡಿ, ನಂತರ ವಾಪಸ್ ಪಡೆಯಲಾಯಿತು. ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರದ ವಾಹನಗಳಿಗೆ ಹೊಸದಾಗಿ ಉಪಕರ ವಿಧಿಸಿ, ನಿನ್ನೆ ವಾಪಸ್ ಪಡೆದುಕೊಂಡಿದ್ದಾರೆ. ಇದೆಲ್ಲವೂ ಆಡಳಿತಾತ್ಮಕ ಗೊಂದಲಗಳನ್ನು ಎತ್ತಿ ತೋರಿಸುತ್ತಿವೆ. ಆದ್ದರಿಂದ ನೀರಿನ ದರ ಏರಿಕೆಯ ಆದೇಶವನ್ನೂ ಮರು ಪರಿಶೀಲನೆ ಮಾಡಬೇಕು ಎಂದು ಆಗ್ರಹಿಸಿದರು.


ನಿತಿನ್ ಪುಟ್ಟಸ್ವಾಮಿ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು


ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಹಾಗೂ ನಾಗವಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು, ನಾಗವಾಲ ಗ್ರಾಮ ಪಂಚಾಯಿತಿ
ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಬಡವರ ಬಂಧು, ಯುವಕರ ಕಣ್ಮಣಿ, ಸ್ನೇಹಜೀವಿ, ಸದಾ ಹಸನ್ಮುಖಿಯಾದ
ಶ್ರೀ ಸಿ.ನರೇಂದ್ರಣ್ಣ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಬಿಳಿಕೆರೆ ಸ್ವಾಮಿ
ವಿನೋದ್ ಎಸ್.ಆರ್.ಎಸ್.
ಪ್ರೊ|| ನವೀನ್ ಕುಮಾರ್
ಸಂತೋಷ್ ಚಿಕ್ಕನಹಳ್ಳಿ
ಚಲುವರಾಜು
ಹೊಸಕೋಟೆ ಗಿರೀಶ್
ಪಡುವಾರಹಳ್ಳಿ ಹರೀಶ್
ಕೋಟೆ ಸುರೇಶ್
ಪ್ರದೀಪ್ ನಂಜನಗೂಡು
ಸಂತೋಷ್ ಕಮರಹಳ್ಳಿ
ಪ್ರಕಾಶ್ ದೊಡ್ಡಕಾನ್ಯ
ಹಿನಕಲ್ ಮಂಜು
ಮಾಜಿ ಜಿಲ್ಲಾಧ್ಯಕ್ಷರು
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಪ್ರಕಟಣೆ : ಸಿ. ನರೇಂದ್ರಣ್ಣ ಅಭಿಮಾನಿಗಳ ಬಳಗ, ಮೈಸೂರು
GRAPHIC WORLD
9535370787
ಧನಗಳ್ಳಿ ಪ್ರವೀಣ್
ಮಾಜಿ ಉಪಾಧ್ಯಕ್ಷರು
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ